ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಜುಲೈ 10 ಗುರುವಾರ 2025
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸಂಪುಟ: 46 | ಸಂಚಿಕೆ: 84 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಸರ್ಕಾರ ರಚನೆ ವೇಳೆ ಕೊಟ್ಟ ಭರವಸೆಯಂತೆ

ನನ್ನ ಸಿಎಂ ಮಾಡಿ!

■ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಬಳಿ ಡಿಸಿಎಂ ಡಿಕೆಶಿ ಮನವಿ ■ ಪ್ರಿಯಾಂಕಾ ನಿವಾಸದಲ್ಲಿ ರಹಸ್ಯವಾಗಿ ಭೇಟಿಯಾಗಿ ಮಾತುಕತೆ ■ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಸೂಕ್ತ ಸಮಯದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುವ ಭರವಸೆ

ಬೆಂಗಳೂರು,ಜು.9(ಕೆಎಂಶಿ)–ಸರ್ಕಾರ ರಚನೆ ವೇಳೆ ಎರಡು ವರ್ಷದ ನಂತರ ಅಧಿಕಾರ ಹಸ್ತಾಂತರ ಮಾಡುವುದಾಗಿ ನೀಡಿದ್ದ ಭರವಸೆಯನ್ನು ಈಡೇರಿಸಿ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಮೊರೆ ಹೋಗಿದ್ದಾರೆ.

ದೆಹಲಿಯ ಪ್ರಿಯಾಂಕಾ ಗಾಂಧಿ ನಿವಾಸದಲ್ಲಿ ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡಿ ಸುಮಾರು 20 ನಿಮಿಷಗಳ ಕಾಲ ಚರ್ಚಿಸಿದ್ದಾರೆ.

ಸೋನಿಯಾ ಗಾಂಧಿ ಭೇಟಿ ಉದ್ದೇಶದಿಂದಲೇ ಶಿವಕುಮಾರ್ ದೆಹಲಿಯ ನೂತನ ಕರ್ನಾಟಕ ಭವನದಲ್ಲಿ ಮುಖ್ಯಮಂತ್ರಿ ಅವರೊಂದಿಗೆ ತಂಗದೆ, ತಮ್ಮ ಖಾಸಗಿ ಮನೆಯಲ್ಲಿ ಉಳಿದು



ಕೊಂಡಿದ್ದರು. ಸೋನಿಯಾ ಗಾಂಧಿ ಅವರೊಂದಿಗಿನ ಭೇಟಿ ಗೌಪ್ಯವಾಗಿಡುವ ಉದ್ದೇಶದಿಂದ ಕರ್ನಾಟಕ ಭವನದಲ್ಲಿ ಉಳಿದುಕೊಂಡಿರಲಿಲ್ಲ.

ಇಂದು ಬೆಳಗ್ಗೆ ನೇರವಾಗಿ ಪ್ರಿಯಾಂಕಾ ಗಾಂಧಿ ನಿವಾಸಕ್ಕೆ ತೆರಳಿ ಸೋನಿಯಾ ಅವರ ಆರೋಗ್ಯ ವಿಚಾರಿಸಿ, ಕರ್ನಾಟಕದಲ್ಲಿನ ಪಕ್ಷದ ರಾಜಕೀಯ

> “ ಈಗ ಕಾಲ ಸನ್ನಿಹಿತವಾಗಿದೆ, ಅಧಿಕಾರ ಹಸ್ತಾಂತರಕ್ಕೆ ಸಂಪುಟದಲ್ಲಿ ಕೆಲವರ ಅಪಸ್ವರ ಕೇಳಿಬರುತ್ತಿದೆ. ಎಐಸಿಸಿ ಅಧ್ಯಕ್ಷರು ಹಾಗೂ ಮುಖ್ಯಮಂತ್ರಿ ಅವರಿಗೆ ಸೂಚಿಸಿ, ನನಗೆ ಅವಕಾಶ ಮಾಡಿಕೊಡಬೇಕು. ತಮಗೆ ಅವಕಾಶ ಮಾಡಿಕೊಟ್ಟರೆ ಪಕ್ಷವನ್ನು ಮತ್ತಷ್ಟು ಬಲವರ್ಧನೆಗೊಳಿಸಿ, 2028ರಲ್ಲಿ ಪುನಃ ಅಧಿಕಾರಕ್ಕೆ ತರುವ ಪ್ರಯತ್ನ ಮಾಡುತ್ತೇನೆ.
> –ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಕ್ಕೆ ತಂದರು. ಸರ್ಕಾರ ರಚನೆ ವೇಳೆ ನಿಮ್ಮ ಆದೇಶದಂತೆ ನಡೆದುಕೊಂಡಿದ್ದೇನೆ, ಜೊತೆಗೆ ಪಕ್ಷ ▶ 6ನೇ ಪುಟಕ್ಕೆ

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ರಾಜನಾಥ್ ಸಿಂಗ್ ಭೇಟಿ

ದಸರಾದಲ್ಲಿ ಏರ್ ಶೋ ಸೇರಿ ವಿವಿಧ ಬೇಡಿಕೆಗಳಿಗೆ ರಕ್ಷಣಾ ಸಚಿವರ ಸಮ್ಮತಿ

ನವದೆಹಲಿ, ಜು.9– ಈ ಬಾರಿ ಮೈಸೂರು ದಸರಾದಲ್ಲಿ ಏರ್ ಶೋ ಆಯೋಜಿಸಲು ರಾಜ್ಯ ಸರ್ಕಾರ ಮುಂದಾಗಿದ್ದು, ಏರ್ ಶೋಗೆ ಅನುಮತಿ ನೀಡುವಂತೆ ಖುದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ (ಜುಲೈ 9) ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಭೇಟಿಯಾಗಿ ಮನವಿ ಮಾಡಿದ್ದಾರೆ. ಇದಕ್ಕೆ ರಾಜನಾಥ್ ಸಿಂಗ್ ಸಹ ಸಮ್ಮತಿಸಿದ್ದಾರೆ. ಹಾಗೇ ವಿವಿಧ ಯೋಜನೆಗಳಿಗಾಗಿ ರಕ್ಷಣಾ ಇಲಾಖೆಯ ಭೂಮಿ ನೀಡುವಂತೆ ಸಿಎಂ ಮಾಡಿದ ಮನವಿಗೂ ಸಮ್ಮತಿಸಿದ್ದಾರೆ.



ಸಿಎಂ ಸಿದ್ದರಾಮಯ್ಯ ದೆಹಲಿಯಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಭೇಟಿಯಾದರು.

ರಾಜನಾಥ್ ಸಿಂಗ್ ಭೇಟಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮೈಸೂರು ದಸರಾದಲ್ಲಿ ಏರ್ ಶೋಗೆ ಮನವಿ ಮಾಡಿದ್ದೇವೆ. ಇದಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸಮ್ಮತಿಸಿದ್ದಾರೆ. ಉತ್ತರಪ್ರದೇಶ, ತಮಿಳುನಾಡಿನಲ್ಲಿ ಡಿಫೆನ್ಸ್ ಕಾರಿಡಾರ್ ಇದೆ. ಅದೇ ರೀತಿ ಕರ್ನಾಟಕದಲ್ಲೂ ಡಿಫೆನ್ಸ್ ಕಾರಿಡಾರ್‌ಗೆ ಮನವಿ ಮಾಡಿದ್ದೇವೆ.

ಸುರಂಗ ಯೋಜನೆ, ಲಿಂಕ್ ರಸ್ತೆ. ಏರ್‌ಪೋರ್ಟ್ ರಸ್ತೆಯಲ್ಲಿ ಡಬಲ್ ಡೆಕ್ಕರ್ ರಸ್ತೆಗಾಗಿ ರಕ್ಷಣಾ ಇಲಾಖೆಗೆ ಸೇರಿದ ಭೂಮಿ ನೀಡುವಂತೆ ▶ 6ನೇ ಪುಟಕ್ಕೆ

ಹೃದಯಾಘಾತದಿಂದ ಸಾವಿನ ಸಂಖ್ಯೆ ಹೆಚ್ಚಳ ಹಿನ್ನೆಲೆ

ಆತಂಕ... ಆಘಾತ; ಜಯದೇವ ಆಸ್ಪತ್ರೆಗೆ ಮುಗಿ ಬೀಳುತ್ತಿರುವ ಜನತೆ

ಹೊರರೋಗಿ ವಿಭಾಗದಲ್ಲಿ ನೂಕು–ನುಗ್ಗಲು, ಪ್ರತೀದಿನ 500ರಿಂದ 600 ಇದ್ದ ಓಪಿಡಿ ರೋಗಿಗಳ ಸಂಖ್ಯೆ 1100ರಿಂದ 1400ಕ್ಕೆ ಏರಿಕೆ



ಜಯದೇವ ಆಸ್ಪತ್ರೆಯಲ್ಲಿ ಸಾಲುಗಟ್ಟಿ ನಿಂತಿರುವ ರೋಗಿಗಳು.

ಮೈಸೂರು, ಜು.9(ಆರ್‌ಕೆ)–ಹಾಸನವೂ ಸೇರಿದಂತೆ ರಾಜ್ಯಾದ್ಯಂತ ಹೃದಯಾಘಾತದಿಂದ ಸಾವನ್ನಪ್ಪುತ್ತಿರುವವರ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಿರುವುದರಿಂದ ಭಯಭೀತರಾಗಿರುವ ಜನರು ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಶ್ರೀ ಜಯದೇವ ಹೃದ್ರೋಗಗಳ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ದಿನನಿತ್ಯ ಹೃದಯ ತಪಾಸಣೆಗೆ ಮುಗಿ ಬೀಳುತ್ತಿದ್ದಾರೆ. ನಿಂತಲ್ಲೇ ಕುಸಿದು ಬೀಳುವುದು, ಊಟಕ್ಕೆ ಕೂತಾಗಲೇ ಹಠಾತ್ ಸಾವಿಗೀಡಾಗುವುದು, ವಾಹನ ಚಾಲನೆ ವೇಳೆ ಹೃದಯ ಸ್ತಂಬನ ಇಂತಹ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದ್ದಂತೆಯೇ ಆತಂಕಗೊಂಡಿರುವ ಜನರು, ▶ 6ನೇ ಪುಟಕ್ಕೆ

ಆತಂಕ ಬೇಡ, ಜೀವನ ಶೈಲಿ ಬದಲಿಸಿಕೊಳ್ಳಿ

ಡಾ.ಕೆ.ಎಸ್.ಸದಾನಂದ ಕಿವಿಮಾತು



ಡಾ.ಸದಾನಂದ

ಮೈಸೂರು, ಜು. 9(ಆರ್‌ಕೆ)–ಹೃದಯಾಘಾತ ಸಂಬಂಧ ಆತಂಕ ಬೇಡ. ನಿಮ್ಮ ನಿತ್ಯ ಜೀವನ ಶೈಲಿ ಬದಲಿಸಿಕೊಂಡರೆ ಯಾವ ಚಿಂತೆ ಇಲ್ಲ ಎಂದು ಮೈಸೂರಿನ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ವೈದ್ಯಕೀಯ ಅಧೀಕ್ಷಕರಾದ ಖ್ಯಾತ ಹೃದ್ರೋಗ ತಜ್ಞ ಡಾ.ಕೆ.ಎಸ್. ಸದಾನಂದ ಸಲಹೆ ನೀಡಿದ್ದಾರೆ. ಕೆಲಸದ ಒತ್ತಡ, ಜೀವನ ಶೈಲಿ, ಆಹಾರ ಪದ್ಧತಿ, ದೇಹಕ್ಕೆ ವ್ಯಾಯಾಮವಿಲ್ಲದಿರುವುದು, ವಾಯು ಮಾಲಿನ್ಯ, ಕಲಬೆರಕೆ ಆಹಾರ ಸೇವನೆ ▶ 6ನೇ ಪುಟಕ್ಕೆ

ಶಾಲೆಯಲ್ಲೇ ಕುಸಿದು ಬಿದ್ದು ಬಾಲಕ ಸಾವು



ಮನೋಜ್

ಗುಂಡ್ಲುಪೇಟೆ, ಜು.9(ಸೋಮ್.ಜಿ)– ಹೃದಯಾಘಾತದಿಂದ 10 ವರ್ಷದ ಶಾಲಾ ಬಾಲಕ ಮೃತಪಟ್ಟಿರುವ ಘಟನೆ ಪಟ್ಟಣದಲ್ಲಿ ಇಂದು ನಡೆದಿದೆ. ಪಟ್ಟಣದ ಕುರುಬಗೇರಿಯ ಸರ್ಕಾರಿ ಶಾಲೆಯಲ್ಲಿ ನಾಲ್ಕನೇ ತರಗತಿ ಓದುತ್ತಿದ್ದ ಮನೋಜ್‌ಕುಮಾರ್ (10) ಇದ್ದಕ್ಕಿದ್ದಂತೆ ಕುಸಿದು ಬಿದ್ದು ಸಾವನ್ನಪ್ಪಿದ್ದಾನೆ. ಈತ ಬುಧವಾರ ಮಧ್ಯಾಹ್ನ ▶ 6ನೇ ಪುಟಕ್ಕೆ

ವಿರಳ ಲೋಹಗಳ ಲಭ್ಯತೆ ಖಾತರಿ ಇಂಧನ ಭದ್ರತೆಗಿಂತಲೂ ಮಿಗಿಲು

ಎಂಜಿಪಿ ಸಂಸ್ಥಾಪಕ ಹಾಗೂ ಅಂತರರಾಷ್ಟ್ರೀಯ ಇಂಧನ ತಜ್ಞ ಭಾಮಿ ವಿ.ಶೆಣೈ ಅಭಿಮತ



ಮೈಸೂರು ವಿಜಯನಗರದ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅಂತರ ರಾಷ್ಟ್ರೀಯ ಇಂಧನ ತಜ್ಞ ಭಾಮಿ ವಿ.ಶೆಣೈ ಮಾತನಾಡಿದರು.

ಮೈಸೂರು,ಜು.9–ಸದ್ಯದ ಭೌಗೋಳಿಕ ರಾಜಕೀಯ ಅಸ್ಥಿರತೆಯ ವಾತಾವರಣದಲ್ಲಿ ವಿರಳ ಲೋಹಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದು ಇಂಧನ ಭದ್ರತೆಗಿಂತಲೂ ಬಹು ಮುಖ್ಯ ವಿಷಯವಾಗಿದೆ ಎಂದು ಅಂತಾರಾಷ್ಟ್ರೀಯ ಇಂಧನ ತಜ್ಞ ಭಾಮಿ ವಿ ಶೆಣೈ ತಿಳಿಸಿದ್ದಾರೆ.

ಮೈಸೂರು ವಿಜಯನಗರದ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾಲೇಜು ಆಂತರಿಕ ಗುಣಮಟ್ಟ ಭರವಸಾ ಕೋಶ (ಐಕ್ಯೂಎಸಿ), ರಾಜ್ಯಶಾಸ್ತ್ರ ವಿಭಾಗ ಹಾಗೂ ಮೈಸೂರು ಗ್ರಾಹಕ ಪರಿಷತ್ (ಎಂಜಿಪಿ) ಸಂಯುಕ್ತವಾಗಿ ಆಯೋಜಿಸಿದ್ದ ಸಮಕಾಲೀನ ಭೌಗೋಳಿಕ ರಾಜಕೀಯ ಬೆಳವಣಿಗೆಗಳು ಹಾಗೂ ಭಾರತದ ಮೇಲೆ ಅದರ ಪರಿಣಾಮ ವಿಷಯ ಕುರಿತು ಅವರು ವಿಶೇಷ ಉಪನ್ಯಾಸ ನೀಡಿದರು.

ಕೆಲ ದಶಕಗಳ ಹಿಂದೆ ಕಚ್ಚಾ ತೈಲ ತೀರಾ ಅಗ್ಗವಾಗಿತ್ತು. ಆಗ ಇಂಧನ ಭದ್ರತೆ ಯಾವುದೇ ಒಂದು ದೇಶಕ್ಕೆ ಪ್ರಮುಖ ಆದ್ಯತೆಯ ವಿಷಯವಾಗಿರಲಿಲ್ಲ. ಆದರೆ 1973ರ ಇಸ್ರೇಲ್–ಅರಬ್ ಯುದ್ಧದ ಬಳಿಕ ಏಕಾಏಕಿ ಕಚ್ಚಾ ತೈಲ ಬೆಲೆ ಗಗನಕ್ಕೇರಿತು. ಬಳಿಕ ಇರಾಕ್–ಇರಾನ್ ಯುದ್ಧದ ಸಂದರ್ಭದಲ್ಲೂ ಮತ್ತೊಮ್ಮೆ ಬೆಲೆ ಏರಿಕೆಯ ಸವಾಲು ಎದುರಾಯಿತು. ಕೋವಿಡ್ ಸಂದರ್ಭದಲ್ಲಿ ಬೆಲೆ ಇಳಿದರೂ, ಈಗ ರಷ್ಯಾ–ಉಕ್ರೇನ್ ಯುದ್ಧ, ಮಧ್ಯಪ್ರಾಚ್ಯದಲ್ಲಿನ ಪ್ರಕ್ಷುಬ್ಧ ಪರಿಸ್ಥಿತಿ, ಕಚ್ಚಾ ತೈಲ ಬೆಲೆ ಏರಿಳಿತಕ್ಕೆ ಕಾರಣವಾಗುತ್ತಿದೆ.

> **“ಸದ್ಯಕ್ಕೆ ನಮ್ಮ ಮುಂದಿರುವ ಬಹುದೊಡ್ಡ ಸವಾಲು ವಿರಳ ಲೋಹಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದು. ಈಗ ಈ ಲೋಹಗಳ ಉತ್ಪಾದನೆಯಲ್ಲಿ ಚೀನಾ ಏಕಸ್ವಾಮ್ಯ ಹೊಂದಿದೆ. ಇದು ಭೌಗೋಳಿಕ ರಾಜಕೀಯದಲ್ಲಿ ಚೀನಾಕ್ಕೆ ಇತರ ದೇಶಗಳ ಮೇಲೆ ಸವಾರಿ ಮಾಡಲು ಅವಕಾಶ ಮಾಡಿಕೊಟ್ಟಿದೆ. ಇದು ವಾಸ್ತವವಾಗಿ ನಮ್ಮ ದೇಶಕ್ಕೆ ಬಹುದೊಡ್ಡ ಸವಾಲು. ಈ ಲೋಹಗಳಿಲ್ಲದಿದ್ದರೆ ತಂತ್ರಜ್ಞಾನ ಕ್ಷೇತ್ರದಲ್ಲಿ ದಾಪುಗಾಲು ಹಾಕಲು ನಮಗೆ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಪರ್ಯಾಯ ಉಪಕ್ರಮಗಳ ಬಗ್ಗೆ ಭಾರತ ಚಿಂತಿಸಬೇಕಿದೆ.** –ಭಾಮಿ ಶೆಣೈ

ಆದರೆ ಸುಸ್ಥಿರ ಶಕ್ತಿ ಮೂಲಗಳತ್ತ ವಿಶ್ವ ಹೆಜ್ಜೆ ಹಾಕುತ್ತಿರುವುದರಿಂದ ತೈಲ ಉತ್ಪನ್ನಗಳ ಗರಿಷ್ಠ ಬೇಡಿಕೆಯ ಮಟ್ಟವನ್ನು ನಾವು ದಾಟಿದ್ದೇವೆ. ಇನ್ನು ಕೆಲವೇ ವರ್ಷಗಳಲ್ಲಿ ಕಚ್ಚಾ ತೈಲದ ಮೇಲಿನ ಮನುಕುಲದ ಅವಲಂಬನೆ ಇನ್ನು ಕಡಿಮೆಯಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕಾಲೇಜಿನ ಪ್ರಾಂಶುಪಾಲ ಪ್ರೊ.ಕೆ.ಸಿ. ಭದ್ರಗಿರಿಯಯ್ಯ, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಮಲ್ಲಿಕಾರ್ಜುನ ಎ.ಎಂ., ಕಾಲೇಜಿನ ಆಂತರಿಕ ಗುಣಮಟ್ಟ ಭರವಸಾ ಕೋಶ (ಐಕ್ಯೂಎಸಿ)ದ ಸಂಯೋಜಕರಾದ ಆನಂದಕುಮಾರ್, ಪ್ರೊ.ಅನಿತಾ ಎಂ ಎಸ್ ಇನ್ನಿತರರು ಉಪಸ್ಥಿತರಿದ್ದರು.

ಕಾರ್ಮಿಕ ಇಲಾಖೆಯಿಂದ ಟೆಂಡರ್ ಹೆಸರಲ್ಲಿ ಅನಗತ್ಯ ವೆಚ್ಚ: ಆರೋಪ

ಮೈಸೂರು,ಜು.9(ಎಂಟಿವೈ)– ಕಾರ್ಮಿಕರಿಗೆ ಮೆಡಿಕಲ್ ಕಿಟ್, ಟೂಲ್ಸ್ ಕಿಟ್, ಟ್ರೈನಿಂಗ್ ಕ್ಯಾಂಪ್ ಸೇರಿದಂತೆ ವಿವಿಧ ಕಾರ್ಯಕ್ರಮಗಳಿಗೆ ಟೆಂಡರ್ ರೂಪದಲ್ಲಿ ಕಾರ್ಮಿಕರ ಕಲ್ಯಾಣ ಮಂಡಳಿ ಕಾರ್ಮಿಕರ ಕಲ್ಯಾಣಕ್ಕೆ ಬಳಸಬೇಕಾದ ಹಣವನ್ನು ಪೋಲು ಮಾಡುತ್ತಿದೆ ಎಂದು ಕರ್ನಾಟಕ ರಾಜ್ಯ ಭಾರತಮಾತ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಜಿ.ಸಿದ್ದರಾಜು ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಮಿಕ ಮಂಡಳಿಯು ವಿವಿಧ ಟೆಂಡರ್‌ಗಳ ಹೆಸರಲ್ಲಿ ಅನಗತ್ಯ ವೆಚ್ಚ ಮಾಡುತ್ತಿದೆ. ಮೆಡಿಕಲ್ ಚೆಕ್ ಅಪ್, ಟ್ರೈನಿಂಗ್ ಕ್ಯಾಂಪ್, ಸಂಚಾರಿ ಚೆಕ್‌ಅಪ್ ಹೆಸರಿನಲ್ಲಿ ಕ್ಯಾಂಪ್ ಆಯೋಜಿಸುವ ಹಾಗೂ ಕಳಪೆ ಟೂಲ್ಸ್ ಕಿಟ್, ಹೆಲ್ತಿ ಕಿಟ್ ನೀಡುವ ಮೂಲಕ ಕಾರ್ಮಿಕರನ್ನು ವಂಚಿಸಲಾಗುತ್ತಿದೆ. ಅನಗತ್ಯವಾಗಿ ನೂರಾರು ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದು ಸಿದ್ದರಾಜು ಆರೋಪಿಸಿದರು.

ಕಾರ್ಮಿಕರ ಮಕ್ಕಳಿಗೆ ಕಳೆದ 4 ವರ್ಷದಿಂದ ವಿದ್ಯಾರ್ಥಿವೇತನ ನೀಡಿಲ್ಲ. ಕಾರ್ಮಿಕ ವೃದ್ಧಾಪ್ಯ ವೇತನ ಸ್ಥಗಿತಗೊಂಡಿದೆ ಕಾರ್ಮಿಕರ ಮಕ್ಕಳ ಮದುವೆಗೆ ಆರ್ಥಿಕ ನೆರವು ನೀಡುತ್ತಿಲ್ಲ. ಆಸ್ಪತ್ರೆ ವೆಚ್ಚ, ಅಪಘಾತಕ್ಕೆ ಪರಿಹಾರ, ಮೃತಪಟ್ಟ ಕಾರ್ಮಿಕರ ಕುಟುಂಬಕ್ಕೆ ನೀಡಬೇಕಾದ ಹಣ ನೀಡುತ್ತಿಲ್ಲ. ಈ ಹಿನ್ನೆಲೆಯಲ್ಲಿ ಅನಗತ್ಯ ವೆಚ್ಚಕ್ಕೆ ಕಡಿವಾಣ ಹಾಕಬೇಕು. ಕಟ್ಟಡ ಕಾರ್ಮಿಕರ ಬೆವರಿನ ಹಣವನ್ನು ಅನಗತ್ಯವಾಗಿ ವ್ಯಯಿಸಬಾರದು. ಕೂಡಲೇ ಈ ಬಗ್ಗೆ ಸರ್ಕಾರ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಅಕ್ರಂ, ಪ್ರಧಾನ ಕಾರ್ಯದರ್ಶಿ ನೂರ್ ಅಹ್ಮದ್ ಮರ್ಚೆಂಟ್, ರಾಜ್ಯ ಕಾರ್ಯದರ್ಶಿ ಪ್ರಕಾಶ(ಕೇತಹಳ್ಳಿ), ರಾಜ್ಯ ಸಂಘಟನಾ ಕಾರ್ಯದರ್ಶಿ ನಂಜುಂಡಿ, ರಾಜ್ಯ ಉಪಾಧ್ಯಕ್ಷ ಶ್ರೀನಿವಾಸ್, ತಾಲೂಕು ಕಾರ್ಯದರ್ಶಿ ನಾಗರಾಜು, ರಾಜ್ಯ ಸಂಚಾಲಕ ಸತೀಶ್ ಇದ್ದರು.

ಮೈಸೂರು ಜಿಲ್ಲಾಧಿಕಾರಿಗೆ ವಿಶೇಷ ಪ್ರಸಾದ ವಿನಿಯೋಗ



ಆಷಾಢ ಮಾಸದ ಅಂಗವಾಗಿ ಮೈಸೂರಿನ ವಿಜಯನಗರದ ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯದ ವತಿಯಿಂದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರಿಗೆ ವಿಶೇಷ ಲಾಡು ಪ್ರಸಾದ ನೀಡಿ, ಶುಭ ಕೋರಲಾಯಿತು. ಈ ವೇಳೆ ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಇನ್ನಿತರರು ಉಪಸ್ಥಿತರಿದ್ದರು.

ರಾಜಸ್ಥಾನದಲ್ಲಿ ಜಾಗ್ವಾರ್ ಯುದ್ಧ ವಿಮಾನ ಪತನ; ಇಬ್ಬರು ಪೈಲಟ್ ಸಾವು

ಚುರು: ರಾಜಸ್ಥಾನದ ಚುರು ಜಿಲ್ಲೆಯಲ್ಲಿ ಭಾರತೀಯ ವಾಯುಪಡೆಯ ಜಾಗ್ವಾರ್ ಯುದ್ಧ ವಿಮಾನ ಪತನವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಳೆದ 5 ತಿಂಗಳಲ್ಲಿ ಐಎಎಫ್ ಯುದ್ಧ ವಿಮಾನ ಅಪಘಾತಕ್ಕೀಡಾಗುತ್ತಿರುವ ಮೂರನೇ ಪ್ರಕರಣ ಇದಾಗಿದೆ. ಬಯಲು ಪ್ರದೇಶದಲ್ಲಿ ವಿಮಾನ ಅಪಘಾತಕ್ಕೀಡಾಗಿದ್ದು, ಇಬ್ಬರು ಪೈಲಟ್ ಮೃತಪಟ್ಟಿದ್ದಾರೆ. ಐಎಎಫ್ ಇನ್ನೂ ಅಧಿಕೃತ ಹೇಳಿಕೆ ನೀಡಿಲ್ಲವಾದರೂ, ಪ್ರಾಥಮಿಕ ವರದಿಗಳ ಪ್ರಕಾರ ಅಪಘಾತದ ಸ್ಥಳದಿಂದ ಎರಡು ಶವಗಳನ್ನು ಹೊರತೆಗೆಯಲಾಗಿದೆ. ಅವು ಪೈಲಟ್‌ಗಳದ್ದಾಗಿರಬಹುದು ಎಂದು ನಂಬಲಾಗಿದೆ. ರಾಜಸ್ಥಾನದ ಚುರು ಜಿಲ್ಲೆಯಲ್ಲಿ ಬುಧವಾರ ಮಧ್ಯಾಹ್ನ ಭಾರತೀಯ ವಾಯುಪಡೆಯ ಜಾಗ್ವಾರ್ ಯುದ್ಧ ವಿಮಾನ ಪತನವಾಗಿದೆ ಎಂದು ಸುದ್ದಿ ಸಂಸ್ಥೆ ANI ವರದಿ ಮಾಡಿದೆ. ಯುದ್ಧ ವಿಮಾನ ಪತನಕ್ಕೆ ಕಾರಣ ಇನ್ನೂ ತಿಳಿದುಬಂದಿಲ್ಲ. ವಿಮಾನ ಅಪಘಾತದ ಸ್ಥಳದ ಬಳಿ ಮಾನವ ಅವಶೇಷಗಳು ಪತ್ತೆಯಾಗಿವೆ. ಪೈಲಟ್‌ನ ದೇಹವು ತೀವ್ರ ಸುಟ್ಟುಹೋದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಆದರೆ ಮೃತ ಎರಡನೇ ವ್ಯಕ್ತಿಯ ಗುರುತನ್ನು ವಾಯುಪಡೆ ಮತ್ತು ಸ್ಥಳೀಯ ಆಡಳಿತ ಇನ್ನೂ ದೃಢಪಡಿಸಿಲ್ಲ ಎಂದು ರಾಜಲ್ದೇಸರ್‌ನ ಸ್ಥಳೀಯ ಪೊಲೀಸ್ ಅಧಿಕಾರಿ ಕಮ್ಲೇಶ್ ಪಿಟಿಐಗೆ ತಿಳಿಸಿದ್ದಾರೆ.

ಮೈಸೂರು ನಗರ, ಜಿಲ್ಲಾ ಪೊಲೀಸರಿಗೆ ಹೊಸ ವಾಹನ

ಮೈಸೂರಲ್ಲಿ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ ಭರವಸೆ

ಮೈಸೂರು, ಜು.9(ಆರ್‌ಕೆ)– ಮೈಸೂರು ನಗರ ಮತ್ತು ಜಿಲ್ಲಾ ಪೊಲೀಸರಿಗೆ ಹೊಸ ವಾಹನಗಳನ್ನು ಪೂರೈಸುವುದಾಗಿ ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ & ಐಜಿಪಿ) ಡಾ.ಎಂ.ಎ. ಸಲೀಂ ಇಂದು ಭರವಸೆ ನೀಡಿದ್ದಾರೆ.

ಆಷಾಢ ಶುಕ್ರವಾರದ ಬಂದೋಬಸ್ತ್ ಮತ್ತು ಭದ್ರತಾ ವ್ಯವಸ್ಥೆ ಸಂಬಂಧ ಗುರುವಾರ ಬೆಳಗ್ಗೆ ಮೈಸೂರಿಗೆ ಆಗಮಿಸಿದ ಅವರು, ಚಾಮುಂಡಿಬೆಟ್ಟಕ್ಕೆ ತೆರಳಿ ಅಧೀನ ಪೊಲೀಸ್ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿದ ಬಳಿಕ ನಜರ್‌ಬಾದ್‌ನ ಎಸ್ಪಿ ಕಚೇರಿ ಎದುರಿನ ಡಿಜಿ ಸೂಟ್‌ನಲ್ಲಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದರು.

15 ವರ್ಷ ಕಳೆದಿರುವ ವಾಹನಗಳನ್ನು ಬಳಸಲು ಸಾಧ್ಯವಿಲ್ಲವಾದ್ದರಿಂದ ನ್ಯಾಯಾಲಯದ ಅನುಮತಿ ಪಡೆದು ಅಂತಹ ವಾಹನಗಳನ್ನು ಹರಾಜು ಮಾಡಬೇಕಾಗುತ್ತದೆ. ಅದರಂತೆ ಮೈಸೂರು ನಗರ ಮತ್ತು ಜಿಲ್ಲಾ ಪೊಲೀಸ್ ಘಟಕಗಳಲ್ಲಿ ಅವಧಿ ಮೀರಿರುವ ವಾಹನಗಳನ್ನು ಬಳಸಲಾಗುತ್ತಿಲ್ಲ ಎಂದು ತಿಳಿಸಿದರು.

ಈಗಾಗಲೇ ಕೋರಿಕೆ ಪ್ರಸ್ತಾವನೆ ಸಲ್ಲಿಸಿರುವ ಪೊಲೀಸ್ ಘಟಕಗಳಿಗೆ ಪೂರೈಸಲು ಹೊಸ ವಾಹನಗಳ ಖರೀದಿ ಪ್ರಕ್ರಿಯೆ ನಡೆಯುತ್ತಿದ್ದು, ಕೊರತೆ ಇರುವ ಘಟಕಗಳಿಗೆ ಪೂರೈಸಲಾಗುವುದು ಎಂದರು.

ಆಷಾಢ ಶುಕ್ರವಾರ ಧಾರ್ಮಿಕ ಆಚರಣೆ ವೇಳೆ ಅಧಿಕ ಸಂಖ್ಯೆಯಲ್ಲಿ ಭಕ್ತಾದಿಗಳು ಚಾಮುಂಡಿಬೆಟ್ಟಕ್ಕೆ ಬರುತ್ತಿರುವುದರಿಂದ ನೂಕು–ನುಗ್ಗಲು ಉಂಟಾಗದಂತೆ ವ್ಯವಸ್ಥೆ ಕಲ್ಪಿಸಿ ದೇವರ ದರ್ಶನಕ್ಕೆ ಅವಕಾಶ ಕಲ್ಪಿಸುವ ದೃಷ್ಟಿಯಿಂದ ಸೂಕ್ತ ಬಂದೋಬಸ್ತ್ ಹಾಗೂ ರಕ್ಷಣೆ ಒದಗಿಸುವ ಸಲುವಾಗಿ ಇಂದು ತಾವು ಚಾಮುಂಡಿಬೆಟ್ಟಕ್ಕೆ ತೆರಳಿ ಪರಿಶೀಲನೆ ನಡೆಸಿದ್ದೇನೆ ಎಂದು ಡಾ.ಸಲೀಂ ತಿಳಿಸಿದರು.

2025ರ ದಸರಾ ಮಹೋತ್ಸವವನ್ನು ದೊಡ್ಡ ಪ್ರಮಾಣದಲ್ಲಿ ವಿಜೃಂಭಣೆಯಿಂದ ಆಚರಿಸಲು ಸರ್ಕಾರ ನಿರ್ಧರಿಸಿರುವ ಹಿನ್ನೆಲೆಯಲ್ಲಿ ಸೂಕ್ತ ಬಂದೋಬಸ್ತ್ ಮಾಡುವ ಸಂಬಂಧ ಯೋಜನೆ ರೂಪಿಸಲಾಗುವುದು ಎಂದ ಅವರು, ಅದಕ್ಕೆ ಇನ್ನೂ ಸಾಕಷ್ಟು ಕಾಲಾವಕಾಶವಿದೆ ಎಂದರು.



ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ ಅವರು ಅಧೀನ ಪೊಲೀಸ್ ಅಧಿಕಾರಿಗಳೊಂದಿಗೆ ಚಾಮುಂಡಿಬೆಟ್ಟಕ್ಕೆ ತೆರಳಿ ಪರಿಶೀಲನೆ ನಡೆಸಿದರು.

ಅಧಿಕಾರ ಸ್ವೀಕಾರ...



ಮೈಸೂರಿನ ಬೋಗಾದಿ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿಯಾಗಿ ಸುಜಯ್‌ಕುಮಾರ್ ನಿರ್ಗಮಿತ ಮುಖ್ಯಾಧಿಕಾರಿ ಬಸವರಾಜು ಅವರಿಂದ ಅಧಿಕಾರ ಸ್ವೀಕರಿಸಿದರು. ಆರೋಗ್ಯ ನಿರೀಕ್ಷಕ ಪುನೀತ್ ಕುಮಾರ್, ಇಂಜಿನಿಯರ್ ಸೌಮ್ಯಗೌಡ ಹಾಗೂ ಸಿಬ್ಬಂದಿ ಇದ್ದರು. ಇದೇ ವೇಳೆ ಕಂದಾಯ ನಿರೀಕ್ಷರಾಗಿ ಶಿವಾನಂದ ಸಹ ಅಧಿಕಾರ ಸ್ವೀಕರಿಸಿದರು.

ನಾಳೆ ಶಾಸ್ತ್ರೀಯ ಸಂಗೀತ

ಮೈಸೂರು: ಮೈಸೂರಿನ ನರಸಿಂಹರಾಜ ಮೊಹಲ್ಲಾ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ ವತಿಯಿಂದ ವಿದ್ವಾನ್ ಸಂಪಗೋಡು ಎಸ್. ವಿಘ್ನರಾಜ ಅವರಿಂದ ಅಮೋಘ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ವಿದ್ವಾನ್ ಕೇಶವ್ ಮೋಹನ್‌ಕುಮಾರ್‌ರಿಂದ ವಯೋಲಿನ್, ವಿದ್ವಾನ್ ರಾಮನುಜನ್ ಮೃದಂಗವನ್ನು ಜು.11ರಂದು ಸಂಜೆ 6.30ಕ್ಕೆ ಗಂಟೆಗೆ ಸಚ್ಚಿದಾನಂದ 'ವಿಲಾಸ ಶೃಗೇಂರಿ ಶಂಕರ ಮಠ ಫೋರ್ಟ್ ಮೊಹಲ್ಲಾ ಮೈಸೂರು ಇಲ್ಲಿ ಏರ್ಪಡಿಸಲಾಗಿದೆ.

ಸೌಹಾರ್ದ ಸಹಕಾರಿ ಸಂಘಗಳು ಸಂಕಷ್ಟದಲ್ಲಿರುವವರಿಗೆ ನೆರವಾಗಬೇಕು

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಸಲಹೆ



ಮೈಸೂರು, ಜು.9(ಎಂಟಿವೈ)– ಖಾಸಗಿ ಹಣಕಾಸು ಸಂಸ್ಥೆಗಳು ಹಾಗೂ ಲೇವಾದೇವಿದಾರರು ವಿಧಿಸುವ ಹೆಚ್ಚಿನ ಬಡ್ಡಿಯಿಂದ ತೊಂದರೆಗೀಡಾಗುತ್ತಿರುವ ಜನರ ರಕ್ಷಣೆಗಾಗಿ ಸೌಹಾರ್ದ ಸಹಕಾರಿ ಸಂಘಗಳು ನೆರವಾಗಬೇಕು ಎಂದು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಸಲಹೆ ನೀಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭೀಮ ಜ್ಯೋತಿ ಸೌಹಾರ್ದ ಸಹಕಾರ ಸಂಘದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನೂತನವಾಗಿ ನೇಮಕವಾಗಿರುವ ವೃತ್ತಿಪರ ನಿರ್ದೇಶಕ ಪ್ರೊ.ಹೆಚ್.ಗೋವಿಂದಯ್ಯ ಹಾಗೂ ಎನ್.ಶ್ರೀನಿವಾಸಲು ಅವರನ್ನು ಅಭಿನಂದಿಸಿ ಮಾತನಾಡಿದ ಅವರು, ಪರಿಶಿಷ್ಟ ಸಮುದಾಯದವರು ಹಣಕಾಸಿನ ವಿಚಾರದಲ್ಲಿ ಅಧಿಕ ಬಡ್ಡಿ ಜಾಲಕ್ಕೆ ಸಿಲುಕಿ ಶೋಷಣೆಗೆ ಒಳಗಾಗುವುದು ಹೆಚ್ಚು. ಅಂತಹ ಸನ್ನಿವೇಶವನ್ನು ತೊಡೆದು ಹಾಕಲು ಭೀಮಜ್ಯೋತಿ ಸಹಕಾರ ಸಂಘ ಕೆಲಸ ಮಾಡುತ್ತಿದೆ. ಸಮುದಾಯದಲ್ಲಿ ಇಂತಹ ಸಂಘಗಳು ಹೆಚ್ಚಬೇಕು, ಉಳಿತಾಯ ಮನೋಭಾವನೆ ಬೆಳೆಯಬೇಕು ಎಂದು ಸಲಹೆ ನೀಡಿದರು.

ಭೀಮ ಜ್ಯೋತಿ ಸೌಹಾರ್ದ ಸಹಕಾರ ಸಂಘದ ವೃತ್ತಿಪರ ನಿರ್ದೇಶಕ ಪ್ರೊ.ಹೆಚ್. ಗೋವಿಂದಯ್ಯ ಮಾತನಾಡಿ, ಇಂದು ಸಹಕಾರ ಸಂಘಗಳು ಆಯಾ ಜಾತಿಯೊಳಗೆ ಸೌಹಾರ್ದ ಸಹಕಾರವನ್ನು ಸ್ಥಾಪಿಸಲು ಕೆಲಸ ಮಾಡುತ್ತಿವೆ. ಇದರಿಂದಾಗಿ ಕರಾಳ ಜಾತಿ ವ್ಯವಸ್ಥೆ ಇನ್ನೂ ಸದೃಢವಾಗುತ್ತಿದೆ. ಇದಕ್ಕೆ ಪ್ರತಿಯಾಗಿ ಸಹಕಾರ ಸಂಘಗಳು ಬೆಳೆಯಬೇಕು. ಎಲ್ಲರನ್ನು ಒಳಗೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ರಾಜ್ಯ ಸಂಯುಕ್ತ ಸೌಹಾರ್ದ ಸಹಕಾರಿ ಸಂಘದ ಅಭಿವೃದ್ಧಿ ಅಧಿಕಾರಿ ಆರ್.ಎಸ್. ಸುರೇಶ್, ಮಾತಂಗ ಮಹಾ ಪರಿಷತ್ ರಾಜ್ಯಾಧ್ಯಕ್ಷ ಅರಕಲವಾಡಿ ನಾಗೇಂದ್ರ, ಸಂಘದ ಅಧ್ಯಕ್ಷ ಆರ್.ಲಕ್ಷ್ಮಣ್, ಉಪಾಧ್ಯಕ್ಷ ಎನ್. ಬಸವರಾಜು, ತಿಪ್ಪಯ್ಯ ಇದ್ದರು.

ಜು.12, ಮೈಸೂರಲ್ಲಿ ಉದ್ಯೋಗ ಮೇಳ

ಮೈಸೂರು, ಜು.9(ಎಂಟಿವೈ)– ಮೈಸೂರಿನ ಹೆಬ್ಬಾಳು ರಿಂಗ್ ರಸ್ತೆಯಲ್ಲಿರುವ ಶುಭೋದಿನಿ ಕಲ್ಯಾಣ ಮಂಟಪದಲ್ಲಿ ಜು.12ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ ವಿಗ್ಯಾನ್ ಹಬ್ ಸಂಸ್ಥೆ ವತಿಯಿಂದ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ವಿಗ್ಯಾನ್ ಹಬ್ ಸಂಸ್ಥೆ ನಿರ್ದೇಶಕ ಶರತ್‌ಗೌಡ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳುವ ಅಭ್ಯರ್ಥಿಗಳನ್ನು ತಮ್ಮ ಕಚೇರಿಯಲ್ಲಿ ಆನ್‌ಲೈನ್ ಪರೀಕ್ಷೆ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ಒಂದು ವಾರ ತರಬೇತಿ ನೀಡಿ, ಯಾವ ಕಂಪನಿಗೆ ಅಗತ್ಯವಿದೆಯೋ ಅಲ್ಲಿಗೆ ಕಳುಹಿಸಲಾಗುವುದು. ಈ ಪ್ರಕ್ರಿಯೆ ಉಚಿತವಾಗಿ ನಡೆಸಲಾಗುತ್ತದೆ. ಹೆಚ್ಚಿನ ತರಬೇತಿ ಅಗತ್ಯವಾದಲ್ಲಿ ಶುಲ್ಕ ಪಡೆದ ಒಂದು ತಿಂಗಳು ತರಬೇತಿ ನೀಡಿ, ಉದ್ಯೋಗ ದೊರಕಲು ನೆರವಾಗುತ್ತೇನೆ. ಮಾಹಿತಿಗಾಗಿ ದೂ. 99804 57450 ಸಂಪರ್ಕಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ನಿರ್ದೇಶಕರಾದ ಬಿಂದು ಶರತ್‌ಗೌಡ, ನೇಹಾ ಹಾಗೂ ಪ್ರವೀಣ್ ಇದ್ದರು.

ಗುರು ಪೂರ್ಣಿಮಾ ವಿಶೇಷ ಸುದರ್ಶನ ಕ್ರಿಯೆ ಶಿಬಿರ

ಮೈಸೂರು, ಜು. 9–ಶ್ರೀ ಶ್ರೀ ರವಿ ಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಜುಲೈ 15ರಿಂದ 19ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರವು ಬೆಳಿಗ್ಗೆ 6ರಿಂದ 8.30 ಹಾಗೂ ಸಂಜೆ 6ರಿಂದ 8.30 ವರೆಗೆ ಎರಡು ಅವಧಿಯಲ್ಲಿ ಶಿಬಿರ ನಡೆಯಲಿದೆ. ಮಾಹಿತಿಗೆ, 9480476825, 9483589825, ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.07.2025 ಗುರುವಾರ, ಮಳೆ ನಕ್ಷತ್ರ: ಪುನರ್ವಸು, 6.07.2025 ರಿಂದ 19.07.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ,
ತಿಥಿ: ಹುಣ್ಣಿಮೆ, ನಕ್ಷತ್ರ: ಪೂಷಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ವೆರಿಕೋಸ್ ವೇನ್ಸ್ ಮತ್ತು ವೆರಿಕೋಸ್ ಅಲ್ಸರ್‌ಗಳ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಶ್ರೀ ಪ್ರಸನ್ನ ಗಣಪತಿ, ಶ್ರೀ ಶಿರಡಿ ಸಾಯಿ ಶಕ್ತಿ ಸನ್ನಿಧಿ ಟ್ರಸ್ಟ್ :** ಗುರುಪೂರ್ಣಿಮೆ ಕಾರ್ಯಕ್ರಮ, ಬೆಳಗ್ಗೆ 7 ಗಂಟೆಯಿಂದ ಕಾಕಡಾರತಿ, 7.30ಕ್ಕೆ ಪ್ರತಿಷ್ಠಾಪನಾ ಮೂರ್ತಿಗೆ ವೇದಘೋಷಗಳೊಂದಿಗೆ ಅಭಿಷೇಕ, ಪುಷ್ಪಾರ್ಚನೆ, 8.30ಕ್ಕೆ ಅಷ್ಟಧಾತು ಮೂರ್ತಿಗೆ ಪ್ರಾಕಾರೋತ್ಸವ, ಕ್ಷೀರಾಭಿಷೇಕ, ಪಂಚಾಮೃತಾಭಿಷೇಕ, ಮಧ್ಯಾಹ್ನ 12ಕ್ಕೆ ನೈವೇದ್ಯಾರತಿ, ಪ್ರಸಾದ ವಿನಿಯೋಗ, ಸಂಜೆ 6ಕ್ಕೆ ಧೂಪಾರತಿ, ಪ್ರಸಾದ ವಿನಿಯೋಗ, ರಾತ್ರಿ 9ಕ್ಕೆ ಶೇಜಾರತಿ, ಸ್ಥಳ: ಶ್ರೀ ಪ್ರಸನ್ನ ಗಣಪತಿ, ರಾಮಕೃಷ್ಣನಗರ.

■ **ವಿಶ್ವಕರ್ಮ ಜಗದ್ಗುರು ಪೀಠ ಅರೇಮಾದನಹಳ್ಳಿ ವಿಶ್ವ ಬ್ರಾಹ್ಮಣ ಮಹಾಸಂಸ್ಥಾನ ಮಠ :** ಶ್ರೀ ಅನಂತ ಶ್ರೀವಿಭೂಷಿತ ಶಿವಸುಜ್ಞಾನತೀರ್ಥ ಮಹಾಸ್ವಾಮಿಗಳವರ ಶ್ರೀ ವಿಶ್ವಾವಸು ನಾಮ ಸಂವತ್ಸರದ 43ನೇ ಚಾತುರ್ಮಾಸ್ಯ ವ್ರತಾನುಷ್ಠಾನ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ವಿಶ್ವಕರ್ಮ ಸಮಾಜದ ಅಧ್ಯಕ್ಷ ಈಶ್ವರಾಚಾರ್, ಕಾರ್ಯಾಧ್ಯಕ್ಷ ಬಾಬುಪತ್ತಾರ್, ಶ್ರೀ ಕಾಳಿಕಾಂಬಾ ಕಮಟೇಶ್ವರಸ್ವಾಮಿ ದೇವಸ್ಥಾನದ ಅಧ್ಯಕ್ಷ ರಾಜಾರಾಮ್, ಜಿಲ್ಲಾ ವಿಶ್ವಕರ್ಮ ಸಮಾಜ ಮಹಾ ಒಕ್ಕೂಟದ ಹುಚ್ಚಪ್ಪಾಚಾರ್, ಕೆ.ಎಸ್. ಪ್ರಭಾಕರ್, ಎ.ಎನ್. ಸ್ವಾಮಿ, ವೇದಮೂರ್ತಿ, ಸ್ಥಳ: ಚಿಕ್ಕಹಳ್ಳಿ, ಟಿ. ನರಸೀಪುರ ರಸ್ತೆ, ಬೆಳಗ್ಗೆ.

■ **ಶ್ರೀ ಸತ್ಯ ಸಾಯಿ ಸೇವಾ ಸಂಘ:** ವಾಹಿನಿ ಮಹೋತ್ಸವ, ಭಗವದ್ ಗೀತಾ ಎಕ್ಸಿಬಿಷನ್, ಸ್ಥಳ: ಶ್ರೀ ಸತ್ಯ ಸಾಯಿಬಾಬಾ ಶಾಲೆ, ಜಯಲಕ್ಷ್ಮಿಪುರಂ, ಬೆಳಗ್ಗೆ 10ರಿಂದ.

■ **ಕೆಎಸ್‌ಎಫ್ ಸ್ಕೂಲ್ ಆಫ್ ಬ್ಯುಸಿನೆಸ್ ಅಂಡ್ ಟೆಕ್ನಾಲಜಿ :** ಬಿ.ಕಾಂ. ಮತ್ತು ಬಿಸಿಎ ಕೋರ್ಸ್‌ಗಳ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಕೆಎಸ್‌ಎಫ್ ಮೈಸೂರು ಶಾಖೆ ಅಧ್ಯಕ್ಷ ಡಾ.ಎನ್.ಎಸ್. ರಾಮೇಗೌಡ, ಸ್ಥಳ: ಕೆಎಸ್‌ಎಫ್ ಭವನ, ಜನರಲ್ ತಿಮ್ಮಯ್ಯ ರಸ್ತೆ, ವಿಜಯನಗರ 2ನೇ ಹಂತ, ಬೆಳಗ್ಗೆ 10ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಕಣ್ಣಿನ ಪೊರೆ, ದೃಷ್ಟಿದೋಷ, ಮಧುಮೇಹದಿಂದ ಉಂಟಾಗುವ ಕಣ್ಣಿನ ಕಾಯಿಲೆ, ರಾತ್ರಿ ಕುರುಡುತನ ಉಚಿತ ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಬೆಂಗಳೂರು ಹಾಗೂ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ** : ತತ್ವಪದಗಳು ಮತ್ತು ಸಂಗೀತ ವೈವಿಧ್ಯ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ನಾಗೇಶ ವಿ. ಬೆಟ್ಟಕೋಟೆ, ಅಧ್ಯಕ್ಷತೆ : ಬೆಂಗಳೂರಿನ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ, ಮುಖ್ಯ ಅತಿಥಿಗಳು : ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ ಕುಲಸಚಿವರಾದ ಶ್ರೀಮತಿ ಕೆ.ಎಸ್. ರೇಖಾ, ಬೆಳಗ್ಗೆ 11 ಗಂಟೆಯಿಂದ ಡಾ. ಸುಕನ್ಯಾ ಪ್ರಭಾಕರ್ ಅವರಿಂದ ತತ್ವಪದ – ಕರ್ನಾಟಕ ಸಂಗೀತ; ಹುಸೇನ್ ಸಾಬ್ ಅವರಿಂದ ತತ್ವಪದ ಮತ್ತು ಕನಕ ಕೀರ್ತನೆಗಳಲ್ಲಿ ಸಂಗೀತ ಸಹಚರ್ಯ; ಹಾಸನ ಬಿ.ಡಿ. ಶಂಕರೇಗೌಡ ಅವರಿಂದ ತತ್ವಪದ–ಗಮಕ; ಮೈಸೂರು ಡಾ. ತುಳಸಿರಾಮಚಂದ್ರ ಅವರಿಂದ ತತ್ವಪದ–ನೃತ್ಯಕಲೆ; ಕೆರಗೋಡು ಪುಟ್ಟಮುತ್ತಮ್ಮ ಮತ್ತು ತಂಡದಿಂದ ತತ್ವಪದ ಗಾಯನ, ಸ್ಥಳ: ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಮಹಿಳಾ ಕಾಲೇಜು :** ದೀಕ್ಷಾರಂಭ, ಯುಜಿ ವಿದ್ಯಾರ್ಥಿಗಳ ಸೇರ್ಪಡೆ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರ ಮಠ, ಮುಖ್ಯ ಅತಿಥಿಗಳು : ನಿವೃತ್ತ ಪ್ರಾಧ್ಯಾಪಕ ಪ್ರೊ. ಸಿ. ನಾಗಣ್ಣ, ಅಧ್ಯಕ್ಷತೆ : ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ಶಿರಡಿ ಸಾಯಿ ಸೇವಾಶ್ರಮ ಟ್ರಸ್ಟ್ :** ಶ್ರೀ ಸಾಯಿ ಅನುಗ್ರಹ ವಿಶ್ವಶಾಂತಿ ಮತ್ತು ಸಾಮೂಹಿಕ ಗ್ರಹದೋಷ ನಿವಾರಣೆಗಾಗಿ ಸಾಯಿ ಗುರುಪೂರ್ಣಿಮೆ ಕಾರ್ಯಕ್ರಮ, ಶ್ರೀ ಸಾಯಿ ಸ್ಮರಣೆ, ಸಾಯಿ ಕಳಸ ಸ್ಥಾಪನೆ, ಗುರುಭಜನೆ, ಲಕ್ಷ್ಮೀಪೂಜೆ, ನವಗ್ರಹ ಹೋಮ, ಪುಷ್ಪಾರ್ಚನೆ, ಕಾಕಡಾರತಿ ಪೂಜೆ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಶಿರಡಿ ಸತ್ಯಸಾಯಿಬಾಬಾ ಸನ್ನಿಧಿ, ಸಂಕ್ರಾಂತಿ ಸರ್ಕಲ್ ಹತ್ತಿರ, ಹೆಬ್ಬಾಳು 2ನೇ ಹಂತ, ಮಧ್ಯಾಹ್ನ 3 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಶ್ರೀ ಗುರುಪೂರ್ಣಿಮೆ, ಬೆಳಗ್ಗೆ 5.15 ರಿಂದ ವೇದಮಂತ್ರ ಪಠಣ, 5.30 ರಿಂದ ಮಂಗಳಾರತಿ, ಭಜನೆ, ಶ್ರೀ ವಿಷ್ಣುಸಹಸ್ರನಾಮ ಪಾರಾಯಣ, ಪೂಜೆ ಮತ್ತು ಭಜನೆ, ಗ್ರಂಥವಾಚನ, ಶ್ರೀ ಗುರುಪೂರ್ಣಿಮೆಯ ಬಗ್ಗೆ ಪ್ರವಚನ, ಶ್ರೀ ರಾಮಕೃಷ್ಣ ಅಷ್ಟೋತ್ತರ ಅರ್ಚನೆ, ಆರತಿ ಮತ್ತು ಪುಷ್ಪಾಂಜಲಿ, ಮಧ್ಯಾಹ್ನ 12ಕ್ಕೆ ಪ್ರಸಾದ ವಿನಿಯೋಗ, ಸಂಜೆ 7ಕ್ಕೆ ಸಂಧ್ಯಾರತಿ, ವಿಶೇಷ ಭಜನೆ, ಸ್ಥಳ: ಆಶ್ರಮದ ಆವರಣ.

■ **ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು :** ಗುರುಪೂರ್ಣಿಮಾ ಬೆಳದಿಂಗಳ ಸಂಗೀತ–281, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರಭುಸ್ವಾಮಿ ಚ. ಮಳಿಮಠ ಅವರಿಂದ ಉಪನ್ಯಾಸ, ವಿದ್ವಾನ್ ಸಂಪಗೋಡು ಎಸ್.ವಿಘ್ನರಾಜ ಅವರಿಂದ ಗಾಯನ, ವಿದ್ವಾನ್ ಎಸ್. ಜನಾರ್ಧನ್–ಪಯೋಲಿನ್, ವಿದ್ವಾನ್ ಅನಿರುದ್ಧ ಎಸ್. ಭಟ್–ಮೃದಂಗ, ವಿದ್ವಾನ್ ಎಂ.ಆರ್. ಮಂಜುನಾಥ್–ಘಟಂ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ಬೆಸ್ಟ್–ಬೋಧಿಸತ್ವ ಶೈಕ್ಷಣಿಕ ಮತ್ತು ಆಧ್ಯಾತ್ಮಿಕ ಟ್ರಸ್ಟ್ :** ಧಮ್ಮಚಕ್ಕ ಪವತ್ತನ ದಿನ ಆಚರಣೆ, ಮಧ್ಯಾಹ್ನ 3.30ಕ್ಕೆ ಧಮ್ಮ ನಡಿಗೆಗೆ ಚಾಲನೆ : ಪೂಜ್ಯ ಮನೋರಕ್ಕಿತ ಭಂತೇಜಿ, ಪೂಜ್ಯ ಬುದ್ಧರತ್ನ ಭಂತೇಜಿ, ಪೂಜ್ಯ ಜ್ಞಾನಪ್ರಕಾಶ ಸ್ವಾಮೀಜಿ, ಮಾಜಿ ಮೇಯರ್ ಪುರುಷೋತ್ತಮ್, ಸಂಜೆ 6.30ಕ್ಕೆ ಧಮ್ಮಚಕ್ಕ ಪವತ್ತನ ಸುತ್ತ ಪಠಣ, ಸ್ಥಳ: ಬೋಧಿಸತ್ವ ಧ್ಯಾನಮಂದಿರ, ಮಾನಸಿನಗರ.

■ **ಶ್ರೀ ವಿದ್ಯಾಗಣಪತಿ ಹಾಗೂ ಶ್ರೀ ಮಹಾಲಕ್ಷ್ಮೀ ದೇವಸ್ಥಾನ ಟ್ರಸ್ಟ್ :** 6ನೇ ವರ್ಷದ ಶ್ರೀನಿವಾಸ ಕಲ್ಯಾಣೋತ್ಸವ, ಬೆಳಗ್ಗೆ 7 ಗಂಟೆಯಿಂದ ಮಹಾಗಣಪತಿ ಪೂಜೆ, ಪುಣ್ಯಾಹ, ಅಂಕುರಾರ್ಪಣೆ, ಪಂಚಗವ್ಯ, ದೇವನಾಂದಿ, ಧ್ವಜಾರೋಹಣ, ಶ್ರೀ ಸ್ವಾಮಿಯವರಿಗೆ ಪಂಚಾಮೃತಾಭಿಷೇಕ, ಶೋಡಷ ದ್ರವ್ಯಾಭಿಷೇಕ, ತೈಲಮಜ್ಜನ ಸ್ನಾನ, ಶ್ರೀ ಸತ್ಯನಾರಾಯಣಸ್ವಾಮಿ ಪೂಜೆ, ಮಹಾಮಂಗಳಾರತಿ, ಸಂಜೆ 6ಕ್ಕೆ ಕಾಶಿಯಾತ್ರೆ, ಕಂಕಣಧಾರಣೆ, ಅಂತರಪಟ, ಅಕ್ಷತರೋಹಣ, ಕನ್ಯಾದಾನ, ನಂತರ ಶ್ರೀನಿವಾಸಸ್ವಾಮಿರವರಿಗೆ ಕಲ್ಯಾಣೋತ್ಸವ, ಮಹಾಮಂಗಳಾರತಿ, ಪುಷ್ಪವೃಷ್ಟಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ವಿನಾಯಕನಗರ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು :** ಪದ್ಮಶ್ರೀ ಡಾ. ದೇ. ಜವರೇಗೌಡ ಅವರ 110ನೇ ಹುಟ್ಟುಹಬ್ಬದ ಅಂಗವಾಗಿ ದೇಜಗೌ ನೆನಪಿನಂಗಳ ಕಾರ್ಯಕ್ರಮ, ಉಪಸ್ಥಿತರು : ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಮಡ್ಡೀಕೆರೆ ಗೋಪಾಲ್, ಪ್ರೊ. ಪದ್ಮಾಶೇಖರ್, ಡಾ. ಪ್ರಧಾನ ಗುರುದತ್ತ, ಡಾ. ಸಿ. ನಾಗಣ್ಣ, ಡಾ. ಲತಾರಾಜಶೇಖರ್, ಡಾ. ರಾಜಶೇಖರ್, ಡಾ. ಕೆ. ಲೀಲಾ ಪ್ರಕಾಶ್, ಡಾ. ಎಸ್.ಪಿ. ಯೋಗಣ್ಣ, ಶ್ರೀಮತಿ ಮಂಜುಳಾ ಮಾನಸ, ಪ್ರೊ. ಸ.ನಾ. ಗಾಯತ್ರಿ, ಮ.ನ. ಲತಾ ಮೋಹನ್, ಡಾ. ವೈ.ಡಿ. ರಾಜಣ್ಣ, ಡಾ. ರಾಜಶೇಖರ ಕದಂಬ, ಚಂದ್ರಶೇಖರ್, ಡಾ. ಜಯಪ್ಪ ಹೊನ್ನಾಳಿ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 4.30ಕ್ಕೆ.

■ **ಆಯುರ್ವೇದ ಪಂಚಕರ್ಮ ದೀಕ್ಷಿತ್ ಆರೋಗ್ಯ ಧಾಮ :** ಆನಂದ ಆರೋಗ್ಯ ಗುರು ಪೂರ್ಣಿಮೆಯ ವಿಶೇಷ ಕಾರ್ಯಕ್ರಮ, ವಿದುಷಿ ಶ್ರೀಮತಿ ಕಿರಣ್ಮಯೀ ದೇಸಾಯಿ ಅವರಿಂದ ಭಕ್ತಿ ಸಂಗೀತ, ಪಂಡಿತ್ ಪ್ರಸಾದ್ ಕೋಮರ್–ತಬಲ, ಪಂಡಿತ್ ವೆಂಕಟೇಶ್ ಕುಲಕರ್ಣಿ–ಹಾರ್ಮೋನಿಯಂ, ದೀಕ್ಷಿತ್ ಆರೋಗ್ಯಧಾಮ ನಿರ್ದೇಶಕ ಡಾ. ಸಿ.ಎಸ್. ಅನಿಲ್ ಕುಮಾರ್ ಅವರಿಂದ ಪ್ರಾಣಾಯಾಮ–ಉಸಿರಿನ ಗರಿಮ ಕುರಿತು ಉಪನ್ಯಾಸ, ಸ್ಥಳ: ದೀಕ್ಷಿತ್ ಆರೋಗ್ಯಧಾಮ, ವಿಜಯನಗರ 3ನೇ ಹಂತ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ :** ಉಪನ್ಯಾಸ ಕಾರ್ಯಕ್ರಮ ತಿಂಗಳ ತಿಳಿವು, ಸಾನ್ನಿಧ್ಯ : ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ತಿಂಗಳ ಅತಿಥಿ : ಪ್ರೊ. ಸುತ್ತೂರು ಎಸ್. ಮಾಲಿನಿ, ಉಪಸ್ಥಿತರು : ಮಾಜಿ ಎಂಎಲ್‌ಸಿ ಡಿ. ಮಾದೇಗೌಡ, ಡಾ. ಎಸ್.ಪಿ. ಯೋಗಣ್ಣ, ಪ್ರೊ.ಜಿ. ಚಂದ್ರಶೇಖರ್, ಬಸವಣ್ಣ, ಎಸ್. ಪುರುಷೋತ್ತಮ್, ಸ್ಥಳ: ಪರಮಹಂಸ ಧ್ಯಾನ ಕೇಂದ್ರ, ರಾಮಕೃಷ್ಣ ವೃತ್ತದ ನೆಲಮಹಡಿ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್ :** ಗುರುಪೂರ್ಣಿಮಾ ಕಾರ್ಯಕ್ರಮ, ಉಪಸ್ಥಿತರು : ಶ್ರೀ ವೇಂಕಟಾಚಲ ಅವಧೂತ ಗುರುಮಹಾರಾಜ, ಶ್ರೀ ಅರ್ಜುನ ಅವಧೂತ ಗುರುಮಹಾರಾಜ, ಸ್ಥಳ: ಶ್ರೀ ವೇಂಕಟಾರ್ಜುನ ಧ್ಯಾನ ಮಂದಿರ, ಹಾರೋಹಳ್ಳಿ ಗ್ರಾಮ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ : ಪ್ರೊಫೆಸರ್. ಸಿ. ನಾಗಣ್ಣ, ನಿರ್ಮಾಣ–ಜಾಂಪಣ್ಣ ಆಶೀಹಾಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಸದಾಶಿವ ಪಾಟೀಲ್ ಹಾಗೂ ಪಿ. ಎಸ್. ರಂಜನಿ, ವ್ಯಾಖ್ಯಾನ : ಡಾ. ಬಿ.ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಕದ್ರಿ ಗೋಪಾಲನಾಥ್ – ಸ್ಯಾಕ್ಸೋಫೋನ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ : ಶಾಂತಕುಮಾರ್ .ಜಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 3.00 ಹಿಂದಿ ಚಿತ್ರಗೀತೆಗಳು, 4.00 ಜನಪದ ಸಂಗೀತ–ಮಹದೇವಸ್ವಾಮಿ ಮತ್ತು ಸಂಗಡಿಗರಿಂದ, 4.30 ರಸಮಂಜರಿ, 6.50 ಕೃಷಿರಂಗ–ಕಿಸಾನ್‌ವಾಣಿ – ಪ್ರಾಯೋಜಕರು: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಂ ಕಂಪನಿ ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ಎಣ್ಣೆಕಾಳು ಬೆಳೆಗಳ ಮೌಲ್ಯವರ್ಧಿತ ಉತ್ಪನ್ನಗಳು ಈ ಕುರಿತು ಸಂವಾದ ಭಾಗವಹಿಸುತ್ತಾರೆ –ಮೈಸೂರಿನ ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾಲಯದ ಪ್ರಧಾನ ತಾಂತ್ರಿಕ ಅಧಿಕಾರಿ ಡಾ. ಗೋವಿಂದರಾಜು ಮತ್ತು ಹಿರಿಯ ತಾಂತ್ರಿಕ ಅಧಿಕಾರಿ ಎಸ್.ಎ ರಾಘವೇಂದ್ರ, ಪ್ರಸ್ತುತಿ : ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ–ಹಲೋ ಯುವವಾಣಿ–ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಕುರಿತ ಸಾಮಾನ್ಯ ಜ್ಞಾನ ರಸಪ್ರಶ್ನೆ ಕಾರ್ಯಕ್ರಮ – ನಡೆಸಿಕೊಡುತ್ತಾರೆ ನಿವೇದಿತಾ ಎಚ್., 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಆರ್.ಎ. ರಮಾಮಣಿ – ಹಾಡುಗಾರಿಕೆ, 10.00 ನಾಟಕ – ಚದುರಂಗ, 10.30 ಸವಿನೆನಪು



ಅದ್ದೂರಿ ದಸರಾ ಆಚರಿಸುವುದೇನೋ ಸರಿ...

ಆದರೆ ದೇಶ-ವಿದೇಶದ ಪ್ರವಾಸಿಗರಿಗೆ ಮೈಸೂರಿನಿಂದ ಸಮರ್ಪಕ ವಿಮಾನ ಸೇವೆಯೇ ಇಲ್ಲ!



● ಪ್ರವಾಸೋದ್ಯಮ, ಹೂಡಿಕೆ ಕ್ಷೇತ್ರಕ್ಕೆ ಹಿನ್ನಡೆ ● ಮುಖ್ಯಮಂತ್ರಿ ಆದಿಯಾಗಿ ಯಾರೂ ಈ ವಿಚಾರ ಮನಗಾಣದ ಬಗ್ಗೆ ಬೇಸರ

ಮೈಸೂರು, ಜು.9(ಜಿಎ)-ಅದ್ದೂರಿ ದಸರಾ ಮಾಡೋಣ ಎಂದು ಮುಖ್ಯಮಂತ್ರಿಗಳೇನೋ ಘೋಷಣೆ ಮಾಡಿದ್ದಾರೆ. ಆದರೆ, ದೇಶ-ವಿದೇಶದ ಪ್ರವಾಸಿಗರು ಮೈಸೂರಿಗೆ ಬರಲು, ಹೋಗಲು ವಿಮಾನಗಳ ಸಂಖ್ಯೆ ಮಾತ್ರ ದಿನದಿಂದ ದಿನಕ್ಕೆ ಇಳಿಮುಖವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರವಾಸೋದ್ಯಮದ ಜೊತೆಗೆ ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಉದ್ಯಮಿಗಳು ಹಿಂದೇಟು ಹಾಕುತ್ತಿದ್ದಾರೆ.



ಸಿದ್ದರಾಮಯ್ಯ

ಹೌದು, ವಿಶ್ವವಿಖ್ಯಾತ ಮೈಸೂರು ದಸರಾ ವೈಭವವನ್ನು ಕಣ್ತುಂಬಿಕೊಳ್ಳಲು ವಿಶ್ವದ ನಾನಾ ಕಡೆಗಳಿಂದ ಮೈಸೂರಿಗೆ ಬರುತ್ತಾರೆ. ಈ ವೇಳೆ ಮೈಸೂರಿನ ಪ್ರವಾಸಿ ತಾಣಗಳ ಜೊತೆಗೆ ಅಕ್ಕಪಕ್ಕದ ಜಿಲ್ಲೆಯ ಪ್ರವಾಸಿ ಸ್ಥಳಗಳಿಗೂ ಭೇಟಿ ನೀಡುವುದು ವಾಡಿಕೆ. ಇದರಿಂದ ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ತಮಿಳ್ನಾಡು, ಆಂಧ್ರಪ್ರದೇಶ, ಮುಂಬೈ, ಗೋವಾ, ಕೇರಳ, ಮಹಾರಾಷ್ಟ್ರ, ಪುಣೆ ಸೇರಿದಂತೆ ದೇಶ-ವಿದೇಶಗಳಿಂದ ಪ್ರವಾಸಿಗರು ಮೈಸೂರಿಗೆ ಬರಲು ಅವರ ಮೊದಲ ಆಯ್ಕೆ ವಾಯುಯಾನ ಆಗಿರುತ್ತದೆ. ಆದರೆ, ಮೈಸೂರಿನಲ್ಲಿ ವಿಮಾನ ನಿಲ್ದಾಣವಿದೆ. ಆದರೆ ಸಮರ್ಪಕ ವಿಮಾನ ಸೇವೆ ಇಲ್ಲ. ಇಲ್ಲಿಂದ ಸದ್ಯಕ್ಕೆ ಚೆನ್ನೈ ಮತ್ತು ಹೈದರಾಬಾದ್‌ಗೆ ವಿಮಾನ ಹಾರಾಟವಿದೆ. ಸಮರ್ಪಕ ವಿಮಾನ ಸೇವೆ ಇಲ್ಲಾ ಎಂದಾಗ ಹಿಂದೇಟು ಹಾಕುತ್ತಾರೆ. ಮತ್ತೊಂದೆಡೆ ಮೈಸೂರಿನಲ್ಲಿ ನೂತನ ಕೈಗಾರಿಕೆಗಳ ಸ್ಥಾಪಿಸಲು ಉದ್ಯಮಿಗಳು ಆಸಕ್ತಿ ಹೊಂದಿದ್ದಾರೆ. ಅದಕ್ಕೂ ಸಮರ್ಪಕ ವಿಮಾನ ಸೇವೆ ಇಲ್ಲದೆ ಉದ್ಯಮಿಗಳು ಅಕ್ಕಪಕ್ಕದ ರಾಜ್ಯಗಳತ್ತ ವಲಸೆ ಹೋಗುತ್ತಿದ್ದಾರೆ.

ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಿಂದ ಪ್ರಸ್ತುತ ಚೆನ್ನೈ ಮತ್ತು ಹೈದರಾಬಾದ್‌ಗೆ ಇಂಡಿಗೋ ವಿಮಾನ ಹಾರಾಟ ನಡೆಸುತ್ತಿದ್ದು, ಕಳೆದ ಒಂದು ವಾರದಿಂದ ಚೆನ್ನೈ ಮಾರ್ಗ ಹಾರಾಟ ನಡೆಸುತ್ತಿದ್ದ ವಿಮಾನ ವಾರಕ್ಕೆ ಮೂರು ದಿನ ಸ್ಥಗಿತಗೊಂಡಿದೆ.


ಬೆಳಗಾವಿ, ಹುಬ್ಬಳ್ಳಿ, ಕಲಬುರ್ಗಿಗೆ ಹಾರಾಟ ನಡೆಸುತ್ತಿದ್ದ ವಿಮಾನಗಳ ಸೇವೆಯನ್ನು ಕಳೆದ ವರ್ಷ ನಿಲ್ಲಿಸಲಾಯಿತು. ನಂತರ ಕೆಲವೇ ತಿಂಗಳಲ್ಲಿ ಕೊಚ್ಚಿನ್, ಗೋವಾ ಹಾರಾಟವೂ ಸ್ಥಗಿತಗೊಂಡಿದೆ. ಮೊದಲು ಮೈಸೂರಿನಿಂದ ಚೆನ್ನೈಗೆ ಇಂಡಿಗೋ ಸಂಸ್ಥೆಯ ಎರಡು ವಿಮಾನ ಹಾರಾಟ ನಡೆಸುತ್ತಿದ್ದವು. ಈಗ ಚೆನ್ನೈ ಮಾರ್ಗದಲ್ಲಿ ವಾರಕ್ಕೆ ಮೂರು ದಿನ ಅಂದರೆ ಸೋಮವಾರ, ಬುಧವಾರ, ಶುಕ್ರವಾರ ವಿಮಾನ ಸೇವೆಯನ್ನು ರದ್ದುಗೊಳಿಸಲಾಗಿದ್ದು, ಉಳಿದ ನಾಲ್ಕು ದಿನ ಸಂಚರಿಸುತ್ತಿದೆ. ಹೈದರಾಬಾದ್‌ಗೆ ಈಗ ವಿಮಾನ ಹಾರಾಟವಿದೆ.

ಹೈದರಾಬಾದ್ ಮತ್ತು ಚೆನ್ನೈಗೆ ಇಂಡಿಗೋ ಏರ್‌ಲೈನ್ ಸಂಸ್ಥೆಯು ಪ್ರತಿನಿತ್ಯ ಕಾರ್ಯಾಚರಣೆ ನಡೆಸುತ್ತಿದೆ. ಈಗ ಚೆನ್ನೈ ಮಾರ್ಗದಲ್ಲಿ ಮೂರು ದಿನ, ಹಾರಾಟ ರದ್ದಾಗಲು ಇಂಡಿಗೋ ಸಂಸ್ಥೆಯೂ ಯಾವುದೇ ಸೂಕ್ತ ಕಾರಣ ನೀಡಿಲ್ಲ. ಮಂಡಕಳ್ಳಿ ಏರ್‌ಪೋರ್ಟ್‌ನ ರನ್ ವೇ ಕೇವಲ ಸಣ್ಣ ಪ್ರಮಾಣದ ವಿಮಾನಗಳ ಹಾರಾಟಕ್ಕೆ ಮಾತ್ರ ಸೂಕ್ತವಾಗಿದ್ದು, ಭಾರೀ ವಿಮಾನಗಳು ಹಾರಾಟ ಮಾಡಲು ರನ್‌ವೇಯನ್ನು ವಿಸ್ತರಣೆ ಮಾಡಬೇಕಾದ ಅಗತ್ಯವೂ ಇದೆ. ಈ ವಿಷಯದಲ್ಲಿ ರಾಜ್ಯ ಹಾಗೂ ಕೇಂದ್ರಗಳ ಮಧ್ಯೆ ಹಗ್ಗ-ಜಗ್ಗಾಟ ನಡೆಯುತ್ತಿದೆ.

ಇನ್ನೇನು ಕೆಲವೇ ದಿನಗಳಲ್ಲಿ ನಾಡಹಬ್ಬ ದಸರಾ ಪ್ರಾರಂಭವಾಗುತ್ತದೆ. ಇಂತಹ ಸಂದರ್ಭದಲ್ಲೇ ವಿಮಾನ ಹಾರಾಟ ಸಮರ್ಪಕವಾಗಿಲ್ಲದೆ ಇದ್ದರೆ, ಪ್ರವಾಸೋದ್ಯಮದ ಮೇಲೆ ಭಾರಿ ಹೊಡೆತ ಬೀಳುತ್ತದೆ. ಜೊತೆಗೆ ವಿದೇಶಿ ಪ್ರವಾಸಿಗರ ಸಂಖ್ಯೆಯೂ ಸಹಜವಾಗಿ ಇಳಿಮುಖವಾಗಲಿದೆ. ಕೇರಳ-ತಮಿಳುನಾಡು ರಾಜ್ಯಗಳ ಗಡಿಯು ಸಮೀಪವಿರುವ ಕಾರಣ ಸಾಂಸ್ಕೃತಿಕ ನಗರಿ ಮೈಸೂರು ಪ್ರವಾಸೋದ್ಯಮದ ಹಬ್ಬ ಆಗುವ ಆಶಾಭಾವವಿತ್ತು. ವಿಮಾನಗಳ ಹಾರಾಟ ಸಮರ್ಪಕವಾಗಿದ್ದಾಗ ಪ್ರವಾಸಿಗರ ಸಂಖ್ಯೆಯೂ ಹೆಚ್ಚಿತ್ತು. ಈಗ ವಿಮಾನಗಳ ಹಾರಾಟ ಕಡಿತಗೊಂಡಿದ್ದರಿಂದ ಮೈಸೂರು ಪ್ರವಾಸೋದ್ಯಮಕ್ಕೆ ಹಿನ್ನಡೆ ಜೊತೆಗೆ ಆರ್ಥಿಕತೆಗೂ ಹೊಡೆತ ಬೀಳಲಿದೆ. ವಿಮಾನಯಾನಕ್ಕೆ ಒಗ್ಗಿಕೊಂಡಿದ್ದವರು, ಬೇರೆ ಸಂಚಾರಿ ವ್ಯವಸ್ಥೆಗೆ ಹೊಂದಿಕೊಂಡರೆ ಅದಕ್ಕೆ ವ್ಯವಸ್ಥೆ ಮಾಡಬಹುದಿತ್ತು ಎನ್ನುವುದು ಪ್ರವಾಸೋದ್ಯಮ ವಲಯದಲ್ಲಿ ಸಕ್ರಿಯವಾಗಿರುವವರ ಅಭಿಪ್ರಾಯ.

ಆಸಕ್ತಿಯ ಕೊರತೆ

ಮುಖ್ಯಮಂತ್ರಿಗಳು ಅದ್ದೂರಿ ದಸರಾ ಮಾಡೋಣ ಎಂದೇನೋ ಹೇಳುತ್ತಿದ್ದಾರೆ. ಆದರೆ, ಪ್ರವಾಸಿಗರಿಗೆ ಅವಶ್ಯವಿರುವ ವಿಮಾನಗಳ ಸೇವಾ ವ್ಯವಸ್ಥೆ ಇಲ್ಲದಿರುವುದರಿಂದ ದೇಶ-ವಿದೇಶಗಳಿಂದ ಬರುವ ಪ್ರವಾಸಿಗರ ಸಂಖ್ಯೆ ಕಡಿಮೆ ಆಗುತ್ತಿದೆ. ಮೊದಲಿದ್ದ ಗೋವಾ ವಿಮಾನದಲ್ಲಿ ಶೇ.80ರಷ್ಟು ಸೀಟು ಭರ್ತಿಯಾಗುತ್ತಿತ್ತು. ಆದರೆ, ಆ ವಿಮಾನ ಏಕೆ ಸ್ಥಗಿತವಾಯಿತು ಎಂದು ಯಾರಿಗೂ ಗೊತ್ತಿಲ್ಲ. ಇದಕ್ಕೆ ಯಾರ ಬಳಿಯೂ ಉತ್ತರವೂ ಇಲ್ಲ. ಎಲ್ಲದಕ್ಕೂ ರನ್ ವೇ ವಿಸ್ತರಣೆ ಮಾಡಬೇಕು ಎಂದು ಸಬೂಬು ನೀಡುತ್ತಿದ್ದಾರೆ. ಮೈಸೂರಿನವರೇ ಮುಖ್ಯಮಂತ್ರಿಗಳಾಗಿದ್ದರೂ ಏಕೆ ಈ ಕಾಮಗಾರಿ ತಡವಾಗುತ್ತಿದೆ ಎಂಬುದು ತಿಳಿಯುತ್ತಿಲ್ಲ. ಆಸಕ್ತಿ ಕೊರತೆಯಿಂದ ಈ ರೀತಿ ಹಿನ್ನಡೆಯಾಗುತ್ತಿರಬಹುದು. ಈ ಹಿಂದಿನ ಸಂಸದ ಪ್ರತಾಪ್ ಸಿಂಹ ದೆಹಲಿಗೆ ಹೋಗಿ ತ್ವರಿತವಾಗಿ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದರು. ಹಾಲಿ ಸಂಸದರೂ ಆಸಕ್ತಿ ವಹಿಸಿ ಅದೇ ರೀತಿ ಕೆಲಸ ಮಾಡಬೇಕಿದೆ.



- ಬಿ.ಎಸ್.ಪ್ರಶಾಂತ್, ಅಧ್ಯಕ್ಷ, ಮೈಸೂರು ಸಂಘ ಸಂಸ್ಥೆಗಳ ಒಕ್ಕೂಟ

ಪತ್ರ ಬರೆದು ಒತ್ತಡ ಹಾಕಲಾಗಿದೆ

ಮೈಸೂರಿನಿಂದ ವಿವಿಧೆಡೆಗೆ ಇದುವರೆಗೆ ವಿಮಾನ ಸೇವೆ ಕಲ್ಪಿಸುತ್ತಿರುವುದು ಖಾಸಗಿ ಸಂಸ್ಥೆಗಳು. ಅವರವರ ನಿಯಮಗಳಂತೆ ಹಾರಾಟ ಮಾಡುತ್ತಿವೆ. ಇಂಡಿಗೋ ಸಂಸ್ಥೆ ಚೆನ್ನೈಗೆ ಹಾರಾಟದ ದಿನಗಳನ್ನ ಆಪರೇಷನಲ್ ದೃಷ್ಟಿಯಿಂದ ಕಡಿತ ಮಾಡಿದ್ದಾರೆಯೇ ಹೊರತು ಕೇಂದ್ರವಾಗಲೀ, ವಿಮಾನ ಪ್ರಾಧಿಕಾರ ನಿರ್ಣಯ ತೆಗೆದುಕೊಂಡಿಲ್ಲ. ಸಮರ್ಪಕವಾಗಿ ವಿಮಾನ ಹಾರಾಟ ನಡೆಸುವಂತೆ ನಾಗರಿಕ ವಿಮಾನಯಾನ ಪ್ರಾಧಿಕಾರಕ್ಕೂ ಪತ್ರ ಬರೆಯಲಾಗುತ್ತದೆ.

ಕೇರಳ ವಿಮಾನ ಹಾರಾಟದ ಬಗ್ಗೆಯೂ ನಿರಂತರ ಚರ್ಚೆಗಳು ನಡೆಯುತ್ತಿವೆ. ಆದರೆ, ಅದು ಖಾಸಗಿ ಸಂಸ್ಥೆ ಆಗಿರುವುದರಿಂದ ಅವರು ಎಲ್ಲವನ್ನು ಲೆಕ್ಕಾಚಾರ ಹಾಕುತ್ತಿದ್ದಾರೆ. ಆದರೆ, ನಮ್ಮ ಕಡೆಯಿಂದ ಒತ್ತಡವಿದೆ. ಇದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ. ಗೋವಾ ವಿಮಾನವನ್ನು ಇಂಡಿಗೋ ಸಂಸ್ಥೆ ನಿಲ್ಲಿಸಿದೆ. ಈ ಬಗ್ಗೆಯೂ ಸಂಸ್ಥೆಗೆ ಪತ್ರ ಬರೆದಿದ್ದೇನೆ. ವಿಮಾನ ನಿಲ್ದಾಣದ ರನ್ ವೇ ವಿಸ್ತರಣೆ ಬಗ್ಗೆ ಈಗಾಗಲೇ ಭೂ ಸ್ವಾಧೀನ ಪ್ರಕ್ರಿಯೆ ಆರಂಭವಾಗಿದೆ. ಒಂದು ತಿಂಗಳಿನಲ್ಲಿ ಎಲ್ಲಾ ಕೆಲಸಗಳು ಆರಂಭವಾಗುತ್ತದೆ. ರನ್ ವೇ ವಿಸ್ತರಣೆ ಆದ ನಂತರ ಭಾರಿ ವಿಮಾನಗಳು ಇಲ್ಲಿಂದ ಕಾರ್ಯಾಚರಿಸಲಿವೆ. ಜೊತೆಗೆ ವಿಮಾನಗಳ ಸಂಖ್ಯೆಯೂ ಹೆಚ್ಚಳವಾಗಲಿದೆ.



- ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ, ಮೈಸೂರು-ಕೊಡಗು



ರನ್ ವೇ ವಿಸ್ತರಣೆ ನಂತರವೇ ಹೊಸ ವಿಮಾನಗಳ ಹಾರಾಟ ಸಾಧ್ಯ

ಈಗ ಮೈಸೂರಿನಿಂದ ಪ್ರಸ್ತುತ ಚೆನ್ನೈ ಮತ್ತು ಹೈದರಾಬಾದ್‌ಗೆ ವಿಮಾನಗಳು ಹಾರಾಟ ನಡೆಸುತ್ತಿವೆ. ಇಂಡಿಗೋ ಸಂಸ್ಥೆಯೂ ಚೆನ್ನೈ ಮಾರ್ಗದಲ್ಲಿ ವಾರಕ್ಕೆ ಮೂರು ದಿನ ಹಾರಾಟವನ್ನು ನಿಲ್ಲಿಸಿರುವುದು ಸೆಪ್ಟೆಂಬರ್ ತಿಂಗಳ ಮಧ್ಯಭಾಗದವರೆಗೆ ಮಾತ್ರ ಎಂದು ಸೇವಾದಾತ ಸಂಸ್ಥೆಯು ತಿಳಿಸಿದೆ. ಆದರೆ ಸೂಕ್ತ ಕಾರಣ ನೀಡಿಲ್ಲ. ಏರ್ ಕೇರಳ ಸಂಸ್ಥೆಯೂ ಮೈಸೂರಿನಿಂದ ಕೇರಳಾಗೆ ಜುಲೈ ಅಂತ್ಯದಲ್ಲಿ ವಿಮಾನ ಹಾರಾಟ ನಡೆಸಲು ಕೆಲವು ತಿಂಗಳ ಹಿಂದೆ ಚರ್ಚೆ ನಡೆದಿತ್ತು. ಆದರೆ, ಈ ಬಗ್ಗೆ ಸಂಸ್ಥೆ ಯಾವುದೇ ಮಾಹಿತಿ ನೀಡಿಲ್ಲ. ಹೊಸ ವಿಮಾನಗಳು ಹಾರಾಟ ನಡೆಸಲು ರನ್ ವೇ ವಿಸ್ತರಣೆ ಆಗಬೇಕಿದೆ. ಅದು ಆದ ನಂತರವೇ ಭಾರಿ ವಿಮಾನಗಳು ಮೈಸೂರಿನಿಂದ ಹಾರಾಟ ನಡೆಸಲಿವೆ. ರನ್ ವೇ ವಿಸ್ತರಣೆ ಬೇಕಿರುವ ಭೂಮಿಯ ಸ್ವಾಧೀನ ಪ್ರಕ್ರಿಯೆ ನಡೆಯುತ್ತಿದ್ದು, ಸಂಬಂಧ ಪಟ್ಟ ಇಲಾಖೆಗಳು ಈ ಕಾರ್ಯದಲ್ಲಿ ತೊಡಗಿವೆ.

- ಎ.ಜಿ.ಅನೂಪ್, ನಿರ್ದೇಶಕರು, ಮೈಸೂರು ವಿಮಾನ ನಿಲ್ದಾಣ

ಪ್ರವಾಸೋದ್ಯಮ, ಉದ್ಯಮ ಎರಡಕ್ಕೂ ಪೆಟ್ಟು

ಮೈಸೂರಿನಲ್ಲಿ ವಿಮಾನ ಸೇವೆ ಸಮರ್ಪಕವಾಗಿಲ್ಲದೆ ಇರುವುದರಿಂದ ಪ್ರವಾಸಿಗರ ಸಂಖ್ಯೆ ಇಳಿಮುಖವಾಗಿದೆ. ಮತ್ತೊಂದೆಡೆ ಮೈಸೂರಿನ ಸುತ್ತಮುತ್ತ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಉದ್ಯಮಿಗಳು ಹಿಂದೇಟು ಹಾಕುತ್ತಿದ್ದಾರೆ. ಮೈಸೂರು ಪ್ರವಾಸೋದ್ಯಮ ಉತ್ತೇಜಿಸಲು ಸಾಕಷ್ಟು ದಾರಿಗಳಿವೆ. ಅದರಲ್ಲಿ ಪ್ರಮುಖವಾಗಿ ವಿಮಾನ ಸೇವೆ ಸುಧಾರಿಸಬೇಕು. ಇದರಿಂದ ಪ್ರವಾಸೋದ್ಯಮ ಮತ್ತು ಹೊಸ ಕೈಗಾರಿಕೆಗಳ ಸ್ಥಾಪನೆಗೆ ಉದ್ಯಮಿಗಳು ಮುಂದೆ ಬರುತ್ತಾರೆ. ರಾಜ್ಯ ಮತ್ತು ಕೇಂದ್ರ ಸರ್ಕಾರ ಈ ಬಗ್ಗೆ ಗಮನ ಹರಿಸುತ್ತಿಲ್ಲ. ವಿಮಾನಗಳ ಸಂಖ್ಯೆ ದಿನದಿಂದ ದಿನಕ್ಕೆ ಇಳಿಮುಖವಾಗುತ್ತಿದೆ. ಈ ಬಗ್ಗೆ ಪ್ರಶ್ನಿಸಿದರೆ, ಸೂಕ್ತ ವ್ಯವಸ್ಥೆ ಮೈಸೂರಿನಲ್ಲಿ ಇಲ್ಲ ಎಂಬ ಉತ್ತರಗಳು ಕೇಳಿ ಬರುತ್ತಿವೆ



- ನಾರಾಯಣಗೌಡ, ಅಧ್ಯಕ್ಷರು, ಮೈಸೂರು ಹೋಟೆಲ್ ಮಾಲೀಕರ ಸಂಘ

ಜಾತಿಗಣತಿಯಲ್ಲಿ ಎಲ್ಲಾ ಸಮುದಾಯಗಳ ಹಿತ ದೃಷ್ಟಿಯಿಂದ ವೈಜ್ಞಾನಿಕ ವಿಧಾನ ಅನುಸರಿಸಿ

ಕೇಂದ್ರ ಸಚಿವ ಕುಮಾರಸ್ವಾಮಿಯವರಿಗೆ ಒಕ್ಕಲಿಗ ಮುಖಂಡರ ಮನವಿ



ಕೇಂದ್ರ ಸರ್ಕಾರ ನಡೆಸುವ ಜಾತಿಗಣತಿಯಲ್ಲಿ ವೈಜ್ಞಾನಿಕ ವಿಧಾನ ಅನುಸರಿಸುವಂತೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಒಕ್ಕಲಿಗ ಸಮುದಾಯದ ಮುಖಂಡರಿಂದ ಮನವಿ ಸಲ್ಲಿಸಲಾಯಿತು.

ಮೈಸೂರು, ಜು.9(ಎಂಕೆ)- ಕೇಂದ್ರ ಸರ್ಕಾರ ನಡೆಸುವ ಜಾತಿ ಗಣತಿಯಲ್ಲಿ ರಾಜ್ಯ ಸರ್ಕಾರ ಮಾಡಿರುವ ತಪ್ಪುಗಳನ್ನು ಮಾಡದೆ, ಎಲ್ಲಾ ಸಮುದಾಯಗಳಿಗೆ ಒಳಿತಾಗುವ ನಿಟ್ಟಿನಲ್ಲಿ ವೈಜ್ಞಾನಿಕವಾಗಿ ಕಾರ್ಯರೂಪಿಸುವಂತೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಒಕ್ಕಲಿಗ ಸಮುದಾಯದ ಮುಖಂಡರು ಮನವಿ ಸಲ್ಲಿಸಿದ್ದಾರೆ.

ಪ್ರತೀ ಮನೆಗೂ ಭೇಟಿ ನೀಡಿ ಆಧಾರ್ ಇನ್ನಿತರ ದಾಖಲೆಗಳನ್ನು ಪರಿಶೀಲಿಸಿ, ಪಾರದರ್ಶಕವಾಗಿ ಜಿಯೋ ಟ್ಯಾಗ್ ತಂತ್ರಜ್ಞಾನ ಹಾಗೂ ಬಯೋಮೆಟ್ರಿಕ್ ಬಳಸಿ ಜಾತಿ ಗಣತಿ ನಡೆಸಬೇಕು. ಜಾತಿ ಕಾಲಂನಲ್ಲಿ ಉಪ ಜಾತಿ ನಮೂದಿಸಲು ಅವಕಾಶ ನೀಡಿರಬೇಕು. ಗಣತಿ ನಂತರ ಹಳ್ಳಿವಾರು, ವಾರ್ಡ್‌ವಾರು ಜಾತಿ ಗಣತಿಯನ್ನು ಪ್ರಕಟಿಸಿ, ಆಕ್ಷೇಪಣೆಗಳು ಬಂದರೆ ಮರು ಸಮೀಕ್ಷೆಗೆ ಅವಕಾಶ ನೀಡಬೇಕು.

ರಾಜ್ಯ ಸರ್ಕಾರವು ಕರ್ನಾಟಕದಲ್ಲಿ ಒಂದೇ ಜಾತಿಗಳಿಗೆ ವಿಭಿನ್ನ ಕೋಡ್‌ಗಳನ್ನು ನೀಡಿ ಈಗಾಗಲೇ ಗೊಂದಲ ಉಂಟಾಗಿದೆ. ಸದರಿ ಗೊಂದಲಗಳು ಮತ್ತೆ ಸೃಷ್ಟಿಯಾಗದಂತೆ ಕೇಂದ್ರ ಸರ್ಕಾರವು ಕ್ರಮವಹಿಸಬೇಕು. ರಾಜ್ಯ ಮಟ್ಟದಲ್ಲಿ ಜಾತಿಗಣತಿ ಉಸ್ತುವಾರಿಗೆ ಪ್ರತ್ಯೇಕ ಸಮಿತಿಯನ್ನು ನೇಮಿಸಬೇಕು. ಸದರಿ ಸಮಿತಿಯಲ್ಲಿ ಎಲ್ಲಾ ವರ್ಗಗಳ ಪ್ರಮುಖರು, ಕೇಂದ್ರ ಸರ್ಕಾರದ ಮಂತ್ರಿಗಳು ಹಾಗೂ ಸಂಸದರು ಒಳಗೊಂಡಿರಬೇಕು.

ಒಕ್ಕಲಿಗ ಒಂದೇ ಕೋಡ್: ಕೃಷಿ ಚಟುವಟಿಕೆಯಲ್ಲಿ ಪ್ರಧಾನವಾಗಿರುವ ಒಕ್ಕಲಿಗ ಸಮಾಜ ಓಬಿಸಿ ಪಟ್ಟಿಯಲ್ಲಿದ್ದು, ಒಕ್ಕಲಿಗ, ವಕ್ಕಲಿಗ, ಗೌಡ ವಕ್ಕಲಿಗ, ಗೌಡ, ಕನ್ನಡ ಗೌಡ ಎಂದು ಹಲವು ಕೋಡ್‌ಗಳನ್ನು ನೀಡಿ ಸಮಾಜವನ್ನು ವಿಭಜಿಸುವ ಪ್ರಯತ್ನ ನಡೆದಿದೆ. ಆದರೆ, ಇದೆಲ್ಲವೂ ಒಂದೇ ಆಗಿದ್ದು, ಒಕ್ಕಲಿಗ ಎಂದು ಒಂದೇ ಕೋಡ್ ನೀಡಬೇಕು.

ಒಕ್ಕಲಿಗ ಸಮಾಜದಲ್ಲಿ ಹಲವಾರು ಉಪಜಾತಿಗಳು ಇದ್ದು, ಗಂಗಡಕಾರ ಒಕ್ಕಲಿಗ, ಮೊರಸು ಒಕ್ಕಲಿಗ, ಮರಸು ಒಕ್ಕಲಿಗ, ಮುಸುಕು ಒಕ್ಕಲಿಗ, ದಾಸ ಒಕ್ಕಲಿಗ, ನಾಮಧಾರಿ ಒಕ್ಕಲಿಗ, ನಾಮಧಾರಿ ಗೌಡ, ರೆಡ್ಡಿ, ರೆಡ್ಡಿ ಒಕ್ಕಲಿಗ, ಕುಂಚ ವಕ್ಕಲ್, ಕುಂಚಿಟಿಗ, ಕುಂಚಿಟಿಗ ಒಕ್ಕಲಿಗ, ಸರ್ಪ ಒಕ್ಕಲಿಗ, ಸಲಪು ಒಕ್ಕಲಿಗ, ತೆಲುಗು ಗೌಡ (ಹಾಸನ & ಚಿಕ್ಕಮಗಳೂರು), ಯಲ್ಲಮ ಒಕ್ಕಲಿಗ, ಉಪ್ಪಿನಕೊಳಗ, ಉತ್ತಮ ಕೊಳಗ ಒಕ್ಕಲಿಗ, ವೆಲ್ಲಾಳ ಒಕ್ಕಲಿಗ, ಚೇಳರು ಒಕ್ಕಲಿಗ, ಹಳ್ಳಿಕಾರ್ ಒಕ್ಕಲಿಗ, ಅರಿಕಾರ್ ಒಕ್ಕಲಿಗ, ಶಿಲ್ ವಕ್ಕಲ್ ಹಾಗೂ ತಮಿಳು ಮಾತನಾಡುವ ತಮಿಳು ಮೂಲದ ಒಕ್ಕಲಿಗರಿಗೆ ಸಂಬಂಧಪಟ್ಟಂತೆ ಪನಿಯಲ್ ಒಕ್ಕಲಿಗ, ಗೌಂಡರ್ ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ಪ್ರವರ್ಗ- 1ರಲ್ಲಿ ಬರುವ ಕರೆ ಒಕ್ಕಲಿಗ, ಅಟ್ಟೆ ಒಕ್ಕಲ್, ಅಟ್ಟೆ ಒಕ್ಕಲಿಗ, ಹಾಲಕ್ಕಿ ವಕ್ಕಲ್, ಹಾಲವಕ್ಕಿ ಒಕ್ಕಲ್, ಹಾಲಕ್ಕಿ ಒಕ್ಕಲಿಗ, ತೆಲುಗು ಗೌಡ ಹೀಗೆ ಇತರೆ ಎಲ್ಲಾ ಒಕ್ಕಲಿಗ ಉಪಪಂಗಡಗಳ ಜನಸಂಖ್ಯೆಯನ್ನು ಒಂದು ಕಡೆ ಕ್ರೋಢೀಕರಿಸಿ ನಮೂದಿಸಿ ವೈಜ್ಞಾನಿಕವಾಗಿ ಪಾರದರ್ಶಕವಾಗಿ ಸಮಾಜಕ್ಕೆ ಅನ್ಯಾಯವಾಗದಂತೆ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದ್ದಾರೆ.

ಈ ವೇಳೆ ಹುಣಸೂರು ವಿಧಾನಸಭಾ ಕ್ಷೇತ್ರದ ಶಾಸಕ ಜಿಡಿ ಹರೀಶ್ ಗೌಡ, ಮಾಜಿ ಸಚಿವ ಸಾರಾ ಮಹೇಶ್ ಹಾಗೂ ಮೈಸೂರು ತಾಲೂಕು ಒಕ್ಕಲಿಗರ ಸಂಘದ ಕೃಷ್ಣಪ್ಪ, ಬೀಡನಹಳ್ಳಿ ಸತೀಶ್‌ಗೌಡ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಜನಸ್ನೇಹಿ, ಮನೆ-ಮನೆ ಪೊಲೀಸ್ ವ್ಯವಸ್ಥೆಯನ್ನು ಜಾರಿಗೊಳಿಸಿ

ಮೈಸೂರು ನಗರ ಪೊಲೀಸ್ ಅಧಿಕಾರಿಗಳಿಗೆ ಡಿಜಿ-ಐಜಿಪಿ ಡಾ. ಎಂ.ಎ.ಸಲೀಂ ತಾಕೀತು



ಮೈಸೂರಿನ ನಜರ್‌ಬಾದ್‌ನಲ್ಲಿರುವ ನಗರ ಪೊಲೀಸ್ ಕಮಿಷ್ನರ್ ಕಚೇರಿ ಸಭಾಂಗಣದಲ್ಲಿ ಡಿಜಿಪಿ ಡಾ. ಎಂ.ಎ.ಸಲೀಂ ಅವರು ಅಧಿಕಾರಿಗಳ ಸಭೆ ನಡೆಸಿದರು.

ಮೈಸೂರು, ಜು.9(ಆರ್‌ಕೆ)-ಸಾರ್ವಜನಿಕರು, ಹಿರಿಯ ನಾಗರಿಕರು, ಮಹಿಳೆಯರ ರಕ್ಷಣೆ ಜವಾಬ್ದಾರಿ ಹೊತ್ತಿರುವ ಪೊಲೀಸರು, 'ಮನೆ-ಮನೆ ಪೊಲೀಸ್' ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಮೂಲಕ 'ಜನಸ್ನೇಹಿ'ಯಾಗಿ ಕರ್ತವ್ಯ ನಿರ್ವಹಿಸಬೇಕೆಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ.ಸಲೀಂ, ಮೈಸೂರು ನಗರ ಘಟಕದ ಪೊಲೀಸ್ ಅಧಿಕಾರಿಗಳಿಗೆ ಇಂದಿಲ್ಲಿ ತಾಕೀತು ಮಾಡಿದ್ದಾರೆ.

ಮೈಸೂರು ನಗರ ಪೊಲೀಸ್ ಕಮಿಷ್ನರ್ ಕಚೇರಿ ಸಭಾಂಗಣದಲ್ಲಿ ನಗರದ ಎಲ್ಲಾ ಉಪ ವಿಭಾಗಗಳ ಎಸಿಪಿ ಮತ್ತು ಮೇಲ್ಪಟ್ಟದ ಅಧಿಕಾರಿಗಳ ಸಭೆ ನಡೆಸಿದ ಅವರು, ತೊಂದರೆಯಾದಾಗ ಸಮಸ್ಯೆ ಹೊತ್ತು ಪೊಲೀಸ್ ಠಾಣೆಗೆ ಬರುವ ಯಾವುದೇ ಪ್ರಜೆಯನ್ನು ಗೌರವದಿಂದ ಬರಮಾಡಿಕೊಂಡು ಸಾವಕಾಶವಾಗಿ ಅವರ ದೂರು-ದುಮ್ಮಾನಗಳನ್ನು ಆಲಿಸಿ, ಲಿಖಿತ ದೂರು ಪಡೆದು ಪರಿಹಾರ ಸೂಚಿಸಿ, ಇಲ್ಲವಾದರೆ, ಕಾನೂನು ರೀತಿ ಅವರಿಗೆ ಯಾವ ರೀತಿ ಸಹಾಯ ಮಾಡಬಹುದೆಂದು ನೋಡಿ ಕ್ರಮ ವಹಿಸಿ ಎಂದರು.

ದಾಖಲಾಗುವ ಪ್ರತಿಯೊಂದು ಪ್ರಕರಣಗಳ ದೂರುದಾರನಿಗೆ ಕೈಗೊಂಡ ಕ್ರಮದ ಬಗ್ಗೆ ಮಾಹಿತಿ ನೀಡಿ, ಎಂದೂ ನಿರಪರಾಧಿಗೆ ತೊಂದರೆಯಾಗದಂತೆ ನಿಷ್ಠೆಯಿಂದ ಕೆಲಸ ಮಾಡುವ ಮೂಲಕ ಜನಸ್ನೇಹಿಯಾಗಿ ಪೊಲೀಸ್ ವ್ಯವಸ್ಥೆ ರೂಪಿಸಿ ಎಂದ ಅವರು, ಹಿರಿಯ ನಾಗರಿಕರು, ಒಬ್ಬಂಟಿಯಾಗಿ ವಾಸಿಸುವವರು, ವೃದ್ಧರು, ಮಹಿಳೆಯರಿಗೆ ರಕ್ಷಣೆ ನೀಡುವ ಜತೆಗೆ ಅವರಿಗೆ ಸಹಾಯ ಮಾಡುವ ಔದಾರ್ಯ ತೋರಿಸಿ ಎಂದು ಸಲಹೆ ನೀಡಿದರು.

ಪ್ರತೀ ಮನೆಯ ಒಬ್ಬರೊಂದಿಗೆ ಸಂಪರ್ಕ ಇರಿಸಿಕೊಂಡು ಅಲ್ಲಿನ ಸುತ್ತಮುತ್ತ ಏನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಂಡು ಕಾನೂನು-ಸುವ್ಯವಸ್ಥೆಗೆ ಭಂಗ ಉಂಟಾಗದಂತೆ ತಡೆಯಬೇಕು. ಅಪರಾಧ ತಡೆ ಮತ್ತು ಪತ್ತೆಗೂ ಈ ವ್ಯವಸ್ಥೆ ಅನುಕೂಲವಾಗುತ್ತದೆ. ಆ ಕಾರಣದಿಂದಲೇ 'ಮನೆ-ಮನೆ ಪೊಲೀಸ್' ವ್ಯವಸ್ಥೆಯನ್ನು ಈ ಹಿಂದೆ ಮೈಸೂರಲ್ಲಿ ಜಾರಿಗೊಳಿಸಲಾಗಿತ್ತು ಎಂದ ಡಾ. ಸಲೀಂ ಅವರು, ಅದನ್ನು ಯಥಾವತ್ತಾಗಿ ಮುಂದುವರೆಸುವಂತೆಯೂ ಸಲಹೆ ನೀಡಿದರು. ಅತೀ ಹೆಚ್ಚು ಜನ ಸೇರುವ ಆಷಾಢ ಶುಕ್ರವಾರ, ದಸರಾ ಮಹೋತ್ಸವದಂತಹ ಕಾರ್ಯಕ್ರಮಗಳಲ್ಲಿ ವ್ಯಾಪಕ ಬಂದೋಬಸ್ತ್ ಯೋಜನೆ ರೂಪಿಸಿ ಲೋಪವಾಗದಂತೆ ಕಟ್ಟೆಚ್ಚರ ವಹಿಸಬೇಕು. ರಸ್ತೆ ಸುರಕ್ಷತೆ, ಸುಗಮ ಸಂಚಾರಕ್ಕಾಗಿ ಸ್ಥಳೀಯ ಸಂಸ್ಥೆ, ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಅಪಘಾತಗಳ ತಡೆಗಟ್ಟಲು ಆದ್ಯತೆ ಮೇಲೆ ಕ್ರಮ ವಹಿಸಿ ಎಂದು ಅವರು ಅಧೀನ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೆಲಸದ ಒತ್ತಡವನ್ನು ನಿರ್ವಹಿಸುವುದರ ಜೊತೆಗೆ ಆರೋಗ್ಯದ ಕಡೆಗೂ ಗಮನ ಹರಿಸಿ ಉತ್ತಮ ರೀತಿಯಲ್ಲಿ ಕೆಲಸ ಮಾಡುವ ಮೂಲಕ ಕರ್ನಾಟಕ ಪೊಲೀಸ್ ಘನತೆ ಎತ್ತಿ ಹಿಡಿಯಬೇಕು. ಹಾಗೆಯೇ ಜನರಲ್ಲಿ ಪೊಲೀಸರ ಮೇಲೆ ನಂಬಿಕೆ, ವಿಶ್ವಾಸ ಮೂಡಿಸಬೇಕು ಎಂದು ಡಾ. ಸಲೀಂ ಅವರು ಕಿವಿಮಾತು ಹೇಳಿದ್ದಾರೆ.



ದೇವರಾಜ ಠಾಣೆಗೆ ಡಿಜಿಪಿ ಡಾ.ಎಂ.ಎ.ಸಲೀಂ ಭೇಟಿ ನೀಡಿರುವುದು.

ಸಭೆಯಲ್ಲಿ ದಕ್ಷಿಣ ವಲಯ ಡಿಐಜಿ ಡಾ. ಬೋರಲಿಂಗಯ್ಯ, ನಗರ ಪೊಲೀಸ್ ಕಮಿಷ್ನರ್ ಸೀಮಾ ಲಾಟ್ಕರ್, ಡಿಸಿಪಿಗಳಾದ ಕೆ.ಎಸ್.ಸುಂದರ ರಾಜ್, ಬಿಂದುಮಣಿ ಹಾಗೂ ಸಿದ್ದನಗೌಡ ವೈ.ಪಾಟೀಲ್ ಉಪಸ್ಥಿತರಿದ್ದರು. ನಂತರ ಡಾ. ಸಲೀಂ ಅವರು ದೇವರಾಜ ಠಾಣೆಗೆ ಭೇಟಿ ನೀಡಿ ಕಾರ್ಯವೈಖರಿ, ಪ್ರಕರಣಗಳ ತನಿಖೆ, ಪ್ರಗತಿ, ಕಡತಗಳ ವಿಲೇವಾರಿ ಕುರಿತು ಪರಿಶೀಲನೆ ನಡೆಸಿದ ಬಳಿಕ ಸಂಜೆ 7.15 ಗಂಟೆ ವೇಳೆ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.

ವ್ಯಕ್ತಿ ನಾಪತ್ತೆ

ಮೈಸೂರು, ಜು.9- ಜು.7 ರಂದು 30 ವರ್ಷದ ನಾರಾಯಣ ಎಂಬುವವರು ಕಾಣೆಯಾಗಿದ್ದು, ವಿ.ವಿ ಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾರಾಯಣ 35 ವರ್ಷ, ಸುಮಾರು 5.5 ಅಡಿ ಎತ್ತರ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈಬಣ್ಣ, ಕೋಲುಮುಖ, ಕಪ್ಪು ಕೂದಲು, ಕನ್ನಡ ಭಾಷೆ ಮಾತನಾಡುತ್ತಾರೆ. ಕಾಣೆಯಾದ ಸಂದರ್ಭದಲ್ಲಿ ನೇರಳೆ ಬಿಳಿ ಹಾಗೂ ಕಪ್ಪು ಬಣ್ಣದ ತುಂಬು ತೋಳಿನ ಶರ್ಟ್ ಮತ್ತು ಫ್ಯಾಂಟ್ ಧರಿಸಿದ್ದರು. ಬಲಗೈಲಿ ನಾಗಮ್ಮ ಅಂತಲೂ ಎಡಗೈಲಿ ಯೋಗೇಶ್ ಅಂತ ಹಚ್ಚೆ ಇರುತ್ತದೆ. ವ್ಯಕ್ತಿ ಕಂಡುಬಂದಲ್ಲಿ ದೂರವಾಣಿ ಸಂಖ್ಯೆ: 0821 -2418314 ಸಂಪರ್ಕಿಸಬಹುದು ಎಂದು ವಿ.ವಿ ಪುರಂ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರಪಾಲಿಕೆ ನೌಕರರ ಬೇಡಿಕೆಗಳನ್ನು ಸರ್ಕಾರ ತಕ್ಷಣವೇ ಈಡೇರಿಸಲಿ

ಶಾಸಕ ಜಿ.ಟಿ.ದೇವೇಗೌಡರ ಒತ್ತಾಯ



ತಮ್ಮ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿದ್ದ ಮೈಸೂರು ನಗರ ಪಾಲಿಕೆ ನೌಕರರಿಗೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಬೆಂಬಲ ವ್ಯಕ್ತಪಡಿಸಿ ಮಾತನಾಡಿದರು.

ಮೈಸೂರು, ಜು.9- ನಗರಪಾಲಿಕೆ ಅಧಿಕಾರಿಗಳ, ನೌಕರರ ಬೇಡಿಕೆಗಳನ್ನು ಈಡೇರಿಸಲು ರಾಜ್ಯ ಸರ್ಕಾರ ತಕ್ಷಣವೇ ಕ್ರಮಕೈಗೊಳ್ಳಬೇಕು. ನಿತ್ಯ ಕೆಲಸ ಮಾಡುವ ಪಾಲಿಕೆ ಸಿಬ್ಬಂದಿ ಹಿತವನ್ನು ಕಾಪಾಡಬೇಕು. ಪ್ರತಿಭಟನೆಯಿಂದ ನಗರದ ವ್ಯಾಪ್ತಿಯಲ್ಲಿ ನೀರು, ಯುಜಿಡಿ, ಸ್ವಚ್ಛತೆ ಇಲ್ಲದಾಗಿದೆ. ಇದೆಲ್ಲವನ್ನು ಬಂದ್ ಮಾಡಿದರೆ ಪರಿಸ್ಥಿತಿ ಏನಾಗಬಹುದೆಂದು ಸರ್ಕಾರ ಯೋಚಿಸಬೇಕು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಸಲಹೆ ನೀಡಿದರು.

ಮೈಸೂರು ನಗರಪಾಲಿಕೆ ಕಚೇರಿ ಎದುರು ನೌಕರರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಮುಷ್ಕರದಲ್ಲಿ ಪಾಲ್ಗೊಂಡು ತಮ್ಮ ಬೆಂಬಲ ವ್ಯಕ್ತಪಡಿಸಿ ಮಾತನಾಡಿದ ಅವರು, ಪಾಲಿಕೆ ನೌಕರರ ಹಕ್ಕುಗಳನ್ನು ಈಡೇರಿಸುವಲ್ಲಿ ನಿರ್ಲಕ್ಷ್ಯ ಮಾಡ ಬಾರದು. ಯಾವುದೇ ವಿಚಾರಗಳಿದ್ದರೂ ಮುಕ್ತವಾಗಿ ಮಾತುಕತೆ ನಡೆಸಿ, ಸರ್ಕಾರ ತಕ್ಷಣವೇ ಸ್ಪಂದಿಸಬೇಕು. ನೌಕರರು ಬೀದಿ ಗಿಳಿದು ಹೋರಾಟ ಮಾಡಲು ಅವಕಾಶ ಕೊಡದಂತೆ ನೋಡಿಕೊಳ್ಳಬೇಕು ಎಂದು ಆಗ್ರಹಿಸಿದರು.

ಮೈಸೂರು ಸೇರಿದಂತೆ ರಾಜ್ಯದ ಹತ್ತು ಮಹಾನಗರಪಾಲಿಕೆಗಳ ನೌಕರ ವರ್ಗದವರು ಅವರ ಏಳು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಹೋರಾಟವನ್ನು ಮಾಡುತ್ತಿದ್ದಾರೆ. ರಾಜ್ಯ ಸರ್ಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರು ನೌಕರರ ಸಮಸ್ಯೆಗಳನ್ನು ಪರಿಹರಿಸಬೇಕು. ಅದಕ್ಕಾಗಿ ನೌಕರರ, ಅಧಿಕಾರಿ ವರ್ಗದವರೊಂದಿಗೆ ಚರ್ಚೆ ನಡೆಸಿ ಒಪ್ಪಿಗೆ ಕೊಡಬೇಕು ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನವನ್ನು ಹಿಡಿದು ಕೇಂದ್ರ, ರಾಜ್ಯ ಸರ್ಕಾರಗಳು ಸಂವಿಧಾನದ ಆಶಯದಂತೆ ಆಡಳಿತ ನಡೆಸುತ್ತೇವೆಂದು ಹೇಳುತ್ತಿದ್ದಾರೆ. ರಾಜ್ಯ ಸರ್ಕಾರ ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನದ ಪೀಠಿಕೆಯನ್ನು ಓದಿಸುವ ಕೆಲಸವನ್ನು ಮಾಡುವಂತೆ ಮಾಡಿದೆ. ಹಾಗಾಗಿ ಸರ್ಕಾರ ಸಂವಿಧಾನದ ಆಶಯದಂತೆ ನಡೆದುಕೊಳ್ಳಬೇಕು. ಸರ್ಕಾರಿ ನೌಕರರಿಗೆ ಸಿಗುವ ಹಕ್ಕು, ವೇತನ, ಸೌಲಭ್ಯಗಳು ಬೇರೆಯಾದರೆ, ನಗರಪಾಲಿಕೆ ನೌಕರರ ಸೌಲಭ್ಯ ಬೇರೆಯಾಗಿದೆ. ರಾಜ್ಯಸರ್ಕಾರ ಇದನ್ನು ಹೋಗಲಾಡಿಸಿ ಎಲ್ಲರಿಗೂ ಒಂದೇ ಸೌಲಭ್ಯ ಸಿಗುವಂತೆ ಮಾಡಬೇಕು ಎಂದರು.

ಪಾಲಿಕೆ ಅಧಿಕಾರಿಗಳು, ನೌಕರರು ನಗರದ ಸ್ವಚ್ಛತೆ, ನೈರ್ಮಲ್ಯ, ಪರಿಸರ, ಆರೋಗ್ಯ ಸೇವೆಯನ್ನು ಮಾಡಿಕೊಂಡು ಬರುತ್ತಿದ್ದಾರೆ. ಸಿದ್ದರಾಮಯ್ಯ ಅವರು ಪೌರಕಾರ್ಮಿಕರಿಗೆ ಕಾಯಂ ನೇಮಕಾತಿ ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಯುಜಿಡಿ ನೌಕರರನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಪೌರಕಾರ್ಮಿಕರೊಂದಿಗೆ ಕೆಲಸ ಮಾಡುವ ಯುಜಿಡಿ ಕಾರ್ಮಿಕರನ್ನೂ ಕಾಯಂ ಮಾಡಬೇಕು ಎಂದು ಒತ್ತಾಯಿಸಿದರು.

ಸರ್ಕಾರಿ ನೌಕರರಿಗೆ ಕೊಡುವ ಏಳನೇ ವೇತನ ಆಯೋಗವನ್ನು ಮಹಾನಗರ ಪಾಲಿಕೆ ನೌಕರರಿಗೂ ಅನ್ವಯಿಸಬೇಕು. ಅನುದಾನವನ್ನು ಕೊಟ್ಟು ಕಡ್ಡಾಯವಾಗಿ ಜಾರಿಗೊಳಿಸಲು ಸರ್ಕಾರ ಮುಂದಾಗಬೇಕು. ಸಾಮಾನ್ಯ ನೇಮಕಾತಿಯಲ್ಲಿ ಹನ್ನೊಂದು ವರ್ಷಗಳಿಂದ ತಿದ್ದುಪಡಿ ಮಾಡಿಲ್ಲ. ಈಗ ಸರ್ಕಾರ ತಿದ್ದುಪಡಿ ಮಾಡಬೇಕು. ಸರ್ಕಾರಿ ನೌಕರರಿಗೆ ದೊರೆಯುತ್ತಿರುವ ಕೆಜಿಐಡಿ, ಗುಂಪು ವಿಮೆ ಸೌಲಭ್ಯವನ್ನು ಯಥಾವತ್ತಾಗಿ ಪಾಲಿಕೆ ನೌಕರರಿಗೂ ಜಾರಿಗೊಳಿಸಬೇಕು. ನಗದು ರಹಿತ ವಿಮೆ ಜಾರಿಗೆ ತಂದರೆ ಸಾವಿರಾರು ನೌಕರರಿಗೆ ಸಹಾಯವಾಗಲಿದೆ. ಸಮಾನತೆ, ಸಂವಿಧಾನ,ಸಾಮಾಜಿಕ ನ್ಯಾಯ ಮಾತನಾಡುವ ನಾವು ನೌಕರರ ವಿಚಾರದಲ್ಲೂ ಸಮಾನತೆ ಕೊಡಬೇಕು. ಕಾಯಕ ಯೋಗಿಗಳನ್ನು ಗಮನಿಸಬೇಕಿರುವುದು ಎಲ್ಲರ ಕರ್ತವ್ಯ.ಸರ್ಕಾರ ತಡಮಾಡದೆ ಬೇಡಿಕೆ ಈಡೇರಿಸಬೇಕು ಎಂದು ಶಾಸಕ ಜಿ.ಟಿ.ದೇವೇಗೌಡರು ಒತ್ತಾಯಿಸಿದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ, ಅದೃಷ್ಟವಂತರಿಗೆ ಇಂಗ್ಲೀಷ್‌ನಲ್ಲಿ ಏನನ್ನುತ್ತಾರೆ?

ಗಂಡ : Unmarried ಅನ್ನುತ್ತಾರೆ.

ಮೈಸೂರು ಮಿತ್ರ

ಗುರುವಾರ, 10 ಜುಲೈ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ತೆರೆದ ಮನಸ್ಸಿನಿಂದ ಎಲ್ಲವನ್ನೂ ಕೇಳಿಸಿಕೊಳ್ಳಬೇಕು, ನಮಗೆ ಅಗತ್ಯವೆನಿಸಿದ್ದನ್ನು ಮಾತ್ರ ಉಳಿಸಿಕೊಳ್ಳಬೇಕು. –ಜೆ.ಜೆ. ಗ್ರೀನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಾಲಾಹಲ ಕುಡಿದವನಿಗೆ ಹಾಗಲಕಾಯಿ ಕಹಿಂಯೇ?

ನಿಮ್ಮ ಪತ್ರಗಳು

■ ಮೈಸೂರು ರೈಲು ನಿಲ್ದಾಣದ ಪ್ಲಾಟ್‌ಫಾರ್ಮ್ 1ರ ದುಸ್ಥಿತಿ

ಮಾನ್ಯರೆ,

ಮೈಸೂರು ರೈಲು ನಿಲ್ದಾಣದಲ್ಲಿ ಒಟ್ಟು ಆರು ಪ್ಲಾಟ್‌ಫಾರ್ಮ್‌ಗಳಿದ್ದು, ಅದರಲ್ಲಿ ಒಂದನೇ ಪ್ಲಾಟ್‌ಫಾರ್ಮ್‌ಗೆ ಹೋಗಲು ಮುಖ್ಯವಾಗಿ ಮೂರು ದ್ವಾರಗಳಿವೆ. ಹಾಗೆಯೇ ಇಲ್ಲಿಂದಲೇ ಉಳಿದ ಫ್ಲಾಟ್‌ಫಾರ್ಮ್‌ಗಳಿಗೆ ಮೆಟ್ಟಿಲು ಹತ್ತಿ ಹೋಗಲು ಅವಕಾಶವಿದೆ.

2, 3, 4, 5 ಹಾಗೂ 6ನೇ ಪ್ಲಾಟ್‌ಫಾರ್ಮ್‌ಗಳಿಗೆ ಹೋಗುವ ಸಲುವಾಗಿ ಪೂರ್ವದ ಗೇಟ್ ನಂ. 3ರಲ್ಲಿ ಸುರಂಗಮಾರ್ಗವೂ ಉಂಟು. ಇದರ ಪಕ್ಕದಲ್ಲಿಯೇ ಒಂದನೆಯ ಪ್ಲಾಟ್‌ಫಾರ್ಮ್‌ಗೆ ತೆರಳಲು ವಾಮಮಾರ್ಗವಿದೆ. ಈ ಮೂಲಕ ಹಾದು ಹೋಗುವವರಿಗೆ ರೈಲ್ವೆ ಇಲಾಖೆಯಿಂದ ಯಾವುದೇ ನಿರ್ಬಂಧವಾಗಲಿ ಇಲ್ಲದೆ ಓಡಾಟಕ್ಕೆ ಸಂಪೂರ್ಣ ಮುಕ್ತವಾಗಿದೆ. ಪ್ರಯಾಣಿಕರಾದಿಯಾಗಿ ಯಾರು ಬೇಕಾದರೂ ಸ್ವತಂತ್ರವಾಗಿ ಓಡಾಡಬಹುದು. ಪ್ರಯಾಣದ ಟಿಕೆಟ್ ಆಗಲೀ ಅಥವಾ ಪ್ಲಾಟ್‌ಫಾರ್ಮ್ ಟಿಕೆಟ್ ಇಲ್ಲದೆಯೇ ಇಲ್ಲಿಂದ ಒಳಗೆ ಪ್ರವೇಶಿಸುವವರನ್ನು ತಡೆಯಲು, ಪೊಲೀಸರಾಗಲಿ, ಗೃಹರಕ್ಷಕ ದಳದವರಾಗಲೀ ಅಥವಾ ರೈಲ್ವೆ ಇಲಾಖೆಯ ಟಿಕೆಟ್ ತಪಾಸಣೆಯ ಸಿಬ್ಬಂದಿಯಾಗಲೀ ಇರುವುದಿಲ್ಲ. ಇನ್ನೂ ಈ ವಾಮಮಾರ್ಗವಾಗಿ ಒಳಗಡೆ ಹೋದಾಗ, ಎಡಬದಿಯಲ್ಲಿ ಪ್ರಯಾಣಿಕರಲ್ಲದವರು, ಅಲ್ಲಲ್ಲಿ ಯಾರ ಭಯವೂ ಇಲ್ಲದೆ ತಾಸುಗಟ್ಟಲೇ ಮಲಗಿರುತ್ತಾರೆ.

ಈ ಪ್ಲಾಟ್‌ಫಾರ್ಮ್‌ನ ತಡೆಗೋಡೆಗಳು ಕೆಲವೆಡೆ ಮುರಿದು ಬಿದ್ದಿದ್ದು ಇಲ್ಲಿಯೇ ಮೂತ್ರ ವಿಸರ್ಜನೆ, ಶೌಚ ಮಾಡಲು ಸಹಕಾರಿಯಾಗಿದ್ದು, ಕಸದ ರಾಶಿಯೂ ಹೇರಳವಾಗಿ ಬಿದ್ದಿದೆ.

ಮುಖ್ಯವಾಗಿ ಈ ಮೂಲಕ ಹಾದು ಹೋಗಿರುವ ರೈಲ್ವೆ ಹಳಿಯು ಮೈಸೂರಿನಿಂದ ಅಶೋಕಪುರಂ ಮಾರ್ಗವಾಗಿ ಕಡಕೊಳ, ನಂಜನಗೂಡು, ಚಾಮರಾಜನಗರದವರೆವಿಗೂ ಸಂಪರ್ಕ ಕಲ್ಪಿಸುತ್ತದೆ. ಆದ್ದರಿಂದ ನಂಜನಗೂಡು ಹಾಗೂ ಚಾಮರಾಜನಗರದ ರೈಲುಗಳು ಒಂದು ಹಾಗೂ ಎರಡನೇ ಪ್ಲಾಟ್‌ಫಾರ್ಮ್‌ನಿಂದ ಹೊರಡುವಾಗ, ವಾಮಮಾರ್ಗದಿಂದ ಬಂದಂತಹ ಬಹಳಷ್ಟು ಮಂದಿ ಟಿಕೆಟ್ ಇಲ್ಲದೆಯೇ ರೈಲು ಹತ್ತುವುದು ಸರ್ವೇ ಸಾಮಾನ್ಯವಾಗಿದೆ. ಅಷ್ಟೇ ಅಲ್ಲದೆ ಪರ ಊರುಗಳಿಂದ ಆಗಮಿಸುವ ರೈಲುಗಳಲ್ಲಿನ ಟಿಕೆಟ್‌ರಹಿತ ಪ್ರಯಾಣಿಕರೂ ಸಹ ಈ ವಾಮಮಾರ್ಗದಿಂದಲೇ ನಿರ್ಭೀತಿಯಿಂದ ನಿರ್ಗಮಿಸಬಹುದಾಗಿದೆ.

ಅದೂ ಅಲ್ಲದೆ, ಒಂದನೇ ಪ್ಲಾಟ್‌ಫಾರ್ಮ್‌ನ ಎಡಬದಿಯಿಂದ ಆರನೇ ಫ್ಲಾಟ್‌ಫಾರ್ಮ್‌ವರೆಗೂ ನಡೆದುಕೊಂಡು ಹಾಗೂ ಹಳಿಗಳನ್ನು ದಾಟಿ ಹೋಗಲು ಹಾದಿ ಬಹಳ ಸುಲಭವಾಗಿದ್ದು ಸ್ಫೋಟಕ ಇನ್ನಿತರ ಅಪಾಯಕಾರಿ ವಸ್ತುಗಳನ್ನು ಕೊಂಡೊಯ್ದರೂ ಯಾರಿಗೂ ಗೋಚರವಾಗುವುದಿಲ್ಲ. ಏಕೆಂದರೆ, ಪ್ರಯಾಣಿಕರನ್ನು ಅವರು ತಂದಿರುವ ಲಗೇಜ್‌ಗಳನ್ನು ಸ್ಕ್ಯಾನ್ ಮಾಡುವ ಯಂತ್ರಗಳು ಕೇವಲ ರೈಲು ನಿಲ್ದಾಣದ ಆವರಣದಲ್ಲಿರುವ ಎಕ್ಸಲೇಟರ್ ಬಳಿ ಮಾತ್ರ ಲಭ್ಯವಿದೆ.

ಇನ್ನು ಇಲ್ಲಿರುವ ಹೋಂ ಗಾರ್ಡ್‌ಗಳು ಟಿಕೆಟ್ ಕೊಂಡು ರೈಲಿಗಾಗಿ ಕಾದು ಕುಳಿತಿರುವ ಅಥವಾ ನಿದ್ರಿಸುತ್ತಿರುವ ಮಂದಿಯನ್ನು ಹೊರಗೆ ಕಳಿಸುವುದರಲ್ಲಿ ಮತ್ತು ರೈಲು ಗಾಡಿಗಳು ಹೊರಡುವಂತಹ ಸಮಯದಲ್ಲಿ ಸೀಟಿ ಹೊಡೆಯುವುದಕ್ಕಷ್ಟೇ ಸೀಮಿತವಾಗಿರುವುದು ವಿಪರ್ಯಾಸವೇ ಸರಿ.

ಇಂತಹ ಕ್ಲಿಷ್ಟಕರವಾದ ಸಮಸ್ಯೆಗಳಿಂದ ನರಳುತ್ತಿರುವ ಮೈಸೂರು ರೈಲು ನಿಲ್ದಾಣದಲ್ಲಿ ಇಲಾಖೆ ಅಧಿಕಾರಿಗಳು ಗಮನಹರಿಸುವುದು ತುಂಬಾ ಅವಶ್ಯವಾಗಿದೆ.

– ವಿ. ದೇವರಾಜ್, ಅಳಗಂಚಿ ಗ್ರಾಮ, ನಂಜನಗೂಡು ತಾ.

■ ಜೆ.ಪಿ.ನಗರದ ಕೊನೆ ಬಸ್ ನಿಲ್ದಾಣದ ಅವ್ಯವಸ್ಥೆ ಸರಿಪಡಿಸಿ

ಮಾನ್ಯರೆ,

ಜೆ.ಪಿ.ನಗರ ಮೈಸೂರಿನ ಪ್ರತಿಷ್ಠಿತ ಬಡಾವಣೆಗಳಲ್ಲಿ ಒಂದು. ಆದರೆ ಇಲ್ಲಿಗೆ ಪ್ರತಿದಿನ ಹಲವಾರು ನಗರ ಸಾರಿಗೆ ಬಸ್ಸುಗಳು ಬರುತ್ತವೆ, ಹೋಗುತ್ತವೆ. ಸಾವಿರಾರು ಪ್ರಯಾಣಿಕರು ಪ್ರತಿನಿತ್ಯ ಸಂಚರಿಸುತ್ತಾರೆ. ಇರುವ ಎರಡು ತಂಗುದಾಣಗಳಲ್ಲಿ ಒಂದು ಹಣ್ಣು ತರಕಾರಿ ಅಂಗಡಿಗಳು, ಮತ್ತೊಂದು ಕುಡುಕರ ವಾಸಸ್ಥಾನವಾಗಿದೆ. ಪಕ್ಕದಲ್ಲಿ ಖಾಲಿ ಸೈಟುಗಳಿದ್ದು, ಗಿಡಗಂಟಿಗಳು ಬೆಳೆದು ವಿಷಜಂತುಗಳ ವಾಸಸ್ಥಾನವಾಗಿದೆ. ಚರಂಡಿ ವ್ಯವಸ್ಥೆ ಸರಿ ಇಲ್ಲದೆ ಪಕ್ಕದ ಕಬಾಬ್ ಅಂಗಡಿ ಮತ್ತು ಚಿಕನ್ ಅಂಗಡಿಯವರು ಗಲೀಜು ನೀರೆಲ್ಲಾ ತಂದು ಮೋರಿಯಲ್ಲಿ ಸುರಿದು ಸೊಳ್ಳೆಗಳಿಗೆ ವಾಸಸ್ಥಾನವಾಗಿದೆ. ಬಸ್ಸಿಗೆ ಕಾಯುವ ಜನರಿಗೆ ಸೊಳ್ಳೆಗಳ ಕಾಟ, ಚರಂಡಿಯ ವಾಸನೆ. ಇನ್ನು ಪಕ್ಕದಲ್ಲಿ ಹೋಟೆಲ್ ಇದೆ. ಅದರ ನೀರೆಲ್ಲಾ ಖಾಲಿ ಸೈಟಿನಲ್ಲಿ ನಿಂತು ಮಳೆ ಬಂದಾಗ ಜೆ.ಪಿ.ನಗರದ 29ನೇ ಕ್ರಾಸ್‌ಗೆ ನುಗ್ಗಿ ರಸ್ತೆಯ ಮೇಲೆಲ್ಲಾ ಗಲೀಜು ಬಂದು ತಿರುಗಾಡಲು ತೊಂದರೆಯಾಗುತ್ತದೆ. ಇದರ ಬಗ್ಗೆ ಸಂಬಂಧಪಟ್ಟವರು ಗಮನಹರಿಸಿ ಸಮಸ್ಯೆ ಸರಿಪಡಿಸಬೇಕಾಗಿ ಮನವಿ.

–ರಂಗಸ್ವಾಮಿ, ಜೆ.ಪಿ.ನಗರ, ಮೈಸೂರು.

■ ಚಿಕ್ಕಹಳ್ಳಿ ಗ್ರಾಮದ ರಸ್ತೆಯಲ್ಲಿ ಒಳಚರಂಡಿ ನೀರು



ಮಾನ್ಯರೆ,

ಮೈಸೂರು ತಾಲೂಕು ವರುಣ ಹೋಬಳಿ, ಟಿ. ನರಸೀಪುರ ಮುಖ್ಯ ರಸ್ತೆ ಚಿಕ್ಕಹಳ್ಳಿ ಗ್ರಾಮದ ಹೆದ್ದಾರಿಯಲ್ಲಿ ಮೋರಿ ನೀರು ರಸ್ತೆಯ ಮೇಲೆ ಹರಿಯುತ್ತಿರುವುದರಿಂದ ವಾಹನ ಸವಾರರಿಗೆ ಹಾಗೂ ಓಡಾಡುವ ಸಾರ್ವಜನಿಕರಿಗೆ ತುಂಬಾ ತೊಂದರೆ ಉಂಟಾಗುತ್ತದೆ. ಕಲುಷಿತ ನೀರಿನ ದುರ್ವಾಸನೆಯಿಂದ ನಿವಾಸಿಗಳು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ ವಾಹನಗಳು ಅತೀ ಹೆಚ್ಚಾಗಿ ಓಡಾಡುವುದರಿಂದ ಈ ಕಲುಷಿತ ನೀರು ಸಾರ್ವಜನಿಕರ ಮೇಲೂ ಎರಚುವುದುಂಟು. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಸಮಸ್ಯೆ ಬಗೆಹರಿಸಬೇಕೆಂದು ಈ ಮೂಲಕ ಮನವಿ.

–ವರುಣ ಗ್ರಾಮದ ನೊಂದ ನಿವಾಸಿಗಳು, ಮೈಸೂರು ತಾ.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ಶ್ರೀ ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಸಾವೇ ಸಮಸ್ಯೆಗೆ ಪರಿಹಾರವಲ್ಲ...

ಬಾಳೊಂದು ಭಾವಗೀತೆ ಆನಂದ ತುಂಬಿದ ಕವಿತೆ. ಸಿನಿಮಾ ಒಂದರ ಬಾಳಿನ ಶ್ರೇಷ್ಠತೆಯನ್ನು ಸಾರುವ ಸಾಲದು. ಜೀವನವೆಂಬುದು ಭುವಿಯ ಸ್ವರ್ಗತಾಣದಲ್ಲಿ ನೆಲೆ ನಿಂತ ಬೃಂದಾವನ. ಇಲ್ಲಿ ಆನಂದ ವನವನ್ನು ನಿರ್ಮಿಸುವ ಬಗೆಯಲ್ಲಿ ಬದುಕಲು ಬಂದ ಜೀವಿಯೇ ಮನುಷ್ಯ. ಈ ಆನಂದ ವನವನ್ನು ನಿರ್ಮಿಸುವ ಭರಾಟೆಯಲ್ಲಿ ಆಕ್ರೋಶ ಜೀವತಳೆದು ಮತಿಯನ್ನು ಮಂಕುಗೊಳಿಸುವ ವಿಷಕಾರಿ ಬೆಳವಣಿಗೆಯಾಗಿರುವುದು. ಶೋಚನೀಯ ಸಂಗತಿ.

ಇಂತಹ ಶೋಚನೀಯ ಹಂತ ತಲುಪಲು ಮುಖ್ಯವಾದ ಕಾರಣವೆಂದರೆ ಅಂದುಕೊಂಡಂತೆ ಬದುಕಬೇಕೆಂಬ ಹಂಬಲ ಆದರೆ ಅಂದುಕೊಂಡಂತೆ ಬದುಕಲು ಪರಿಸ್ಥಿತಿಗಳು ಪೂರಕವಾಗಿರಬೇಕಲ್ಲವೆ. ಅದು ಸಾಧ್ಯವಿಲ್ಲದೆ ಇರುವಾಗ ವಿಷಕಾರಿ ಸಂಗತಿಗಳು ಹೃದಯವನ್ನು ಬೆಂಗಾಡು ಮಾಡುತ್ತವೆ. ದಾವಾಗ್ನಿಯಲ್ಲಿ ಎದೆಯನ್ನು ಬೇಯಿಸುತ್ತದೆ. ಆಗಲೇ ಜಗತ್ತಿನ ಬಗ್ಗೆ ತಾತ್ಸಾರದ ಮನೋಭಾವವು ಕೂಡ ಜನ್ಮತಳೆಯುತ್ತದೆ ಇಂತಹ ಜಗತ್ತಿನಲ್ಲಿ ನಮ್ಮಂತಹ ನತದೃಷ್ಟರು ಬದುಕಲು ಸಾಧ್ಯವಿಲ್ಲವೇನೋ ಎಂದು ತೀರ್ಮಾನಕ್ಕೆ ಕೆಲವು ಮನಸ್ಸು ಇಳಿದುಬಿಡುವುದು ವಿಪರ್ಯಾಸವೇ ಸರಿ.


ಅಂತಹುದೇ ಘಟನೆ ನಮ್ಮ ಕಣ್ಣೆದುರೇ ನಡೆದು ಹೋದಾಗ ಎದೆಯನ್ನು ಹಿಂಡಿದಂತಾಯಿತು. ನೋವು ಹೃದಯವನ್ನು ಬಸಿಯತೊಡಗಿತು. ಕಣ್ಣುಗಳು ನೀರು ತುಂಬಿ ಬಂದವು. ನಡೆದದ್ದು ಇಷ್ಟೇ, ಸುಂದರವಾಗಿ ಬಾಳಿ ಬದುಕಬೇಕಾಗಿದ್ದ ಆತ್ಮೀಯ ಗೆಳೆಯ ಇನ್ನಿಲ್ಲ ಎಂಬ ಸುದ್ದಿ ಜೀರ್ಣಿಸಿಕೊಳ್ಳಲಾಗದ, ಬರಸಿಡಿಲಿನಂತೆ ಬಂದೆರಗಿತು. ಬಂಗಾರದಂತಹ ಬದುಕನ್ನು ಬದುಕಿ ಆದರ್ಶವಾಗಿಸಿಕೊಳ್ಳಬೇಕಾಗಿದ್ದ ಆತ ಆತ್ಮಹತ್ಯೆಯ ದಾರಿಯಲ್ಲಿ ಸಾಗಿ ಭರವಸೆ ಬೆಳಕನ್ನೇ ಕೊಂದು ಬಿಟ್ಟ, ಈ ಸಂಗತಿ ಹೇಳಲಾರದಂತಹ ನೋವನ್ನುಂಟು ಮಾಡಿತು.

ಮಾನವ ಜನ್ಮ ಎಂಬುದು ಪುನೀತವಾದುದು, ಸುಂದರವಾದುದು. ಬದುಕು ಹೋರಾಟದ ಹಾದಿಯಲ್ಲಿ ಸಾಗುವ ನಿರಂತರ ಪಯಣ. ಏನೇ ಅಡೆ–ತಡೆಗಳು ಬಂದರೂ ಧೈರ್ಯದಿಂದ ಮುನ್ನುಗ್ಗಲೇಬೇಕು. ಸೋಲಿಗೆ ಹೆದರದೆ, ಅವಮಾನಗಳಿಗೆ ಕುಗ್ಗದೆ, ಸಮಸ್ಯೆಗಳಿಗೆ ಬೆನ್ನು ತೋರಿಸದೇ ನಿಂತು ಹೋರಾಟ ನಡೆಸಲೇಬೇಕು. ದುರಂತ ಎಂದರೆ ಇಂದಿನ ಬಹುತೇಕ ಯುವಸಮುದಾಯಕ್ಕೆ ಸಣ್ಣ ಸಮಸ್ಯೆ ಎದುರಾದರೂ ಆಕಾಶವೇ ತಲೆ ಮೇಲೆ ಬಿದ್ದಂತೆ ಕೈ ಹೊತ್ತು ಕುಳಿತುಕೊಳ್ಳುವ ಅಥವಾ ಸಮಸ್ಯೆ ಎದುರಿಸಲಾರದೇ ತಮ್ಮ ಬದುಕನ್ನು ತಾವೇ ನಾಶಮಾಡಿಕೊಳ್ಳುವ ಹಂತಕ್ಕೆ ತಲುಪುತ್ತಿರುವುದು ನಿಜಕ್ಕೂ ಆಘಾತಕಾರಿಯಾಗಿದೆ.

ಸಾವೊಂದೆ ಸಮಸ್ಯೆಗಳಿಗೆ ಪರಿಹಾರವಲ್ಲ

ಇತ್ತೀಚಿನ ಕೆಲ ಯುವಕ–ಯುವತಿಯರಿಗೆ ಸಣ್ಣಪುಟ್ಟ ಸಮಸ್ಯೆಗಳು ಎದುರಾದರೂ ಸಾಕು ಅವರಿಗೆ ಮೊದಲು ಕಾಣುವ ಪರಿಹಾರ ಸಾವು. ಸಾವೊಂದೇ ಸಮಸ್ಯೆಗಳಿಗೆ ಪರಿಹಾರ ಎಂದು ಭಾವಿಸಿದರೆ ಈ ಪ್ರಪಂಚದಲ್ಲಿ ಸಾಯುವವರ ಸಂಖ್ಯೆಯೇ ದುಪ್ಪಟ್ಟಾಗಿರುತ್ತಿತ್ತು. ಕೈಲಾಗದವರು, ದೈಹಿಕವಾಗಿ ಅಂಗವಿಕಲರಾದವರು, ಒಂದೊತ್ತಿನ ಆಹಾರಕ್ಕಾಗಿ ಪರಿತಪಿಸುವವರು ಕೂಡ ಬದುಕಬೇಕೆಂಬ ಆಸೆ, ಛಲದಿಂದ ಜೀವನ ಸಾಗಿಸುವಾಗ ಎಲ್ಲಾ ಅಂಗಗಳು ಸರಿ ಇರುವ ಮನುಷ್ಯರು ಸಾವಿಗೆ ಮೊರೆ ಹೋಗುವುದರಲ್ಲಿ ಅರ್ಥವೇನಿದೆ? ಸಮಸ್ಯೆಗಳಿಲ್ಲದ ಜೀವನ ನಿಸ್ಸಾರವಾಗಿರುತ್ತದೆ. ಸಮಸ್ಯೆಗಳಿದ್ದಾಗಲೇ ಬದುಕಿಗೊಂದು ಅರ್ಥ. ಅವುಗಳನ್ನು ಎದುರಿಸಿ ನಿಲ್ಲುವ ಧೈರ್ಯ ನಮ್ಮಲ್ಲಿ ಉದ್ಭವವಾಗಬೇಕು. ಜೀವನ ಆ ದೇವರು ಕೊಟ್ಟ ವರ. ಅದನ್ನು ಅವನೇ ಹಿಂದಿರುಗಿ ತೆಗೆದುಕೊಳ್ಳಬೇಕೆ ಹೊರತು ನಾವಾಗಿ ನಾವೇ ಸುಂದರವಾದ ಬದುಕನ್ನು ನಾಶಪಡಿಸಿಕೊಳ್ಳಬಾರದು.

ಪ್ರೀತಿ–ಪ್ರೇಮದಲ್ಲಿ ವಿಫಲ, ಸಾಂಸಾರಿಕ ಜೀವನದಲ್ಲಿ ಸಮಸ್ಯೆಗಳು, ಪರೀಕ್ಷೆಯಲ್ಲಿ ಅನುತ್ತೀರ್ಣ ಹೀಗೆ ಜೀವನ ತಂದೊಡ್ಡುವ ಪರೀಕ್ಷೆಗಳನ್ನು ಎದುರಿಸಲಾಗದೆ ತಮ್ಮ ಜೀವವನ್ನು ತಾವೇ ನಾಶಪಡಿಸಿಕೊಳ್ಳುವ ಮನೋಭಾವವುಳ್ಳವರು ಒಂದೇ ಒಂದು ಕ್ಷಣ ಆಲೋಚಿಸಬೇಕು. ಬದುಕು ಎನ್ನುವುದು ಸಾಗರದಂತೆ ವಿಶಾಲವಾದದು. ಮಧ್ಯೆ ಬರುವ ಅಡೆತಡೆಗಳನ್ನು ದಾಟಿ ಮುನ್ನುಗ್ಗಬೇಕೇ ವಿನಃ ಪಲಾಯನವಾದಿಗಳಾಗಿ ಹಿಂತಿರುಗಿ ಓಡಿ ಹೋಗಬಾರದು. ಸಮಸ್ಯೆಗಳು ನಮ್ಮನ್ನು ಮತ್ತಷ್ಟು,ಮಗದಷ್ಟು ಗಟ್ಟಿಗರನ್ನಾಗಿ ಮಾಡಲು ಬರುತ್ತದೆಂಯೇ ಹೊರತು ಕುಗ್ಗಿಸುವುದಕ್ಕಲ್ಲ ಎಂಬ ಸಾರ್ವಕಾಲಿಕ ಸತ್ಯವನ್ನು ಅರಿತುಕೊಂಡಾಗ ಏನೇ ಸಮಸ್ಯೆಗಳು ಎದುರಾದರೂ ದಿಟ್ಟತನದಿಂದ ನಿಲ್ಲುವ ಧೈರ್ಯ ನಮಗೆ ಬರುತ್ತದೆ.



> **“** ಮಾನವ ಜನ್ಮ ಎಂಬುದು ಪುನೀತವಾದುದು, ಸುಂದರವಾದುದು. ಬದುಕು ಹೋರಾಟದ ಹಾದಿಯಲ್ಲಿ ಸಾಗುವ ನಿರಂತರ ಪಯಣ. ಏನೇ ಅಡೆ–ತಡೆಗಳು ಬಂದರೂ ಧೈರ್ಯದಿಂದ ಮುನ್ನುಗ್ಗಲೇಬೇಕು. ಸೋಲಿಗೆ ಹೆದರದೆ, ಅವಮಾನಗಳಿಗೆ ಕುಗ್ಗದೆ, ಸಮಸ್ಯೆಗಳಿಗೆ ಬೆನ್ನು ತೋರಿಸದೇ ನಿಂತು ಹೋರಾಟ ನಡೆಸಲೇ ಬೇಕು. ದುರಂತ ಎಂದರೆ ಇಂದಿನ ಬಹುತೇಕ ಯುವಸಮುದಾಯಕ್ಕೆ ಸಣ್ಣ ಸಮಸ್ಯೆ ಎದುರಾದರೂ ಆಕಾಶವೇ ತಲೆ ಮೇಲೆ ಬಿದ್ದಂತೆ ಕೈ ಹೊತ್ತು ಕುಳಿತುಕೊಳ್ಳುವ ಅಥವಾ ಸಮಸ್ಯೆ ಎದುರಿಸಲಾರದೇ ತಮ್ಮ ಬದುಕನ್ನು ತಾವೇ ನಾಶ ಮಾಡಿಕೊಳ್ಳುವ ಹಂತಕ್ಕೆ ತಲುಪುತ್ತಿರುವುದು ನಿಜಕ್ಕೂ ಆಘಾತಕಾರಿಯಾಗಿದೆ.

ಸಮಸ್ಯೆಗಳು ಸಾಮಾನ್ಯ ಭೇದಿಸಿ ಮುನ್ನುಗ್ಗುವವನೇ ಅಸಾಮಾನ್ಯ

ಸಮಸ್ಯೆಗಳಿಲ್ಲದ ಬದುಕನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ.ಹುಟ್ಟಿದ ಮಗುವಿನಿಂದ ಹಿಡಿದು ಸಾಯುವ ವಯಸ್ಸಿನವರು ಕೂಡ ಒಂದಲ್ಲ ಒಂದು ಸಮಸ್ಯೆಯಿಂದ ಪರಿತಪಿಸುತ್ತಾ ಇರುತ್ತಾರೆ.ಸಮಸ್ಯೆ ಬಂದಾಗ ಭಯಪಡುವ ಬದಲು ಅದನ್ನು ಎದುರಿಸುವುದು ಹೇಗೆ ಎಂಬುದನ್ನು ತಿಳಿದುಕೊಂಡಾಗ ಪರಿಹಾರ ಕೂಡ ದೊರಕುತ್ತದೆ.

ಎಲ್ಲರಿಗೂ ಅವರ ಜೀವನವನ್ನು ಸುಂದರವಾಗಿ ಕಟ್ಟಿಕೊಳ್ಳುವ ಕನಸಿರುತ್ತದೆ. ಆಸೆ ಪಟ್ಟಿದನ್ನೆಲ್ಲಾ ಪಡೆಯಬೇಕೆಂಬ ಹಂಬಲ, ಉಳಿದವರಂತೆ ತಾನು ಕೂಡ ಅವರ ಸರಿ ಸಮನಾಗಿ ಬೆಳೆಯಬೇಕೆಂಬ ಅಭಿಲಾಷೆ, ಹೇಗಾದರೂ ಜೀವನದಲ್ಲಿ ಭದ್ರವಾಗಿ ತಳ ಊರಬೇಕೆಂಬ ಬಯಕೆ ಇದ್ದೇ ಇರುತ್ತದೆ. ಈ ಪ್ರಯತ್ನದಲ್ಲಿ ಪ್ರತಿಯೊಬ್ಬರಿಗೂ ಯಶಸ್ಸು ಸಿಗಬೇಕೆಂಬ ತುಡಿತವಿರುತ್ತದೆ.ಆದರೆ ಇದು ಸಾಧ್ಯವಾಗುವುದು ತುಂಬ ವಿರಳ.

ಬದುಕೆಂದರೆ ಪ್ರದರ್ಶನಕ್ಕೆ ಇಟ್ಟ ವಸ್ತುವಲ್ಲ ಅಥವಾ ವಸ್ತುಪ್ರದರ್ಶನವಲ್ಲ. ಎಲ್ಲವೂ ಹೀಗೆಯೇ ಇರಬೇಕು,ಹೀಗೆಯೇ ನಡೆಯಬೇಕೆಂದು ಕೊಂಡರೆ ಖಂಡಿತವಾಗಿಯು ಅದು ಜರುಗುವುದಿಲ್ಲ. ಜೀವನದಲ್ಲಿ ಸಮಸ್ಯೆಗಳು ಚಕ್ರವ್ಯೂಹದಂತೆ ಮತ್ತೆ, ಮತ್ತೆ ಎದುರಾಗುತ್ತಲೇ ಇರುತ್ತವೆ. ನಾವು ಆ ಚಕ್ರವ್ಯೂಹವನ್ನು ಭೇದಿಸಿ ಮುನ್ನುಗ್ಗುತ್ತಲೇ ಸಾಗಬೇಕು. ಹೆದರಿಕೊಂಡು ಸಮಸ್ಯೆಗಳಿಂದ ಪಲಾಯನ ಮಾಡಿದರೆ ನಿಜಕ್ಕೂ ಅದು ಹೇಡಿತನವಾಗುತ್ತದೆ. ಎಂತಹ ಸಮಸ್ಯೆಗಳು ಬಂದರೂ ಅದಕ್ಕೆ ಪರಿಹಾರ ಇದ್ದೇ ಇರುತ್ತದೆ, ಅದನ್ನು ಅರಿತುಕೊಂಡು ಪರಿಹಾರದ ದಾರಿಯನ್ನು ಕಂಡುಕೊಂಡು ಬದುಕಿನಲ್ಲಿ ಮುಂದೆ ಸಾಗಬೇಕಾಗಿರುತ್ತದೆ. ಸಮಸ್ಯೆಗಳನ್ನು ಭೇದಿಸಿ ಮುನ್ನುಗ್ಗಿದ್ದಾಗಲೇ ಅವನು ಅಸಾಮಾನ್ಯನಾಗಿ ಉಳಿಯಲು ಸಾಧ್ಯ.

ಸೋಲೇ ಕೊನೆಯಲ್ಲ, ಗೆಲುವಿಗೆ ಕೊನೆಯಿಲ್ಲ

ಬದುಕಿನಲ್ಲಿ ನೋವು–ನಲಿವು ಹೇಗೆ ಮುಖ್ಯವೋ ಹಾಗೆಯೇ ಸೋಲು–ಗೆಲುವು ಕೂಡ. ಜೀವನ ಎಂದ ಮೇಲೆ ಬರಿ ಗೆಲುವನ್ನೇ ಆಗಲಿ, ಬರಿ ಸೋಲನ್ನೇ ಆಗಲಿ ಎದುರಿಸಲು ಸಾಧ್ಯವಿಲ್ಲ. ಸೋಲು–ಗೆಲುವು ಬದುಕಿನಲ್ಲಿ ಅನಿವಾರ್ಯವಾದವುಗಳು. ಗೆದ್ದಾಗ ಹಿಗ್ಗದೆ, ಸೋತಾಗ ಕುಗ್ಗದೇ ಎರಡನ್ನೂ ಸಮಾನವಾಗಿ ಸ್ವೀಕರಿಸುವ ಸದೃಢ ಮನೋಭಾವ ನಮ್ಮಲ್ಲಿ ಬಂದಾಗ ಮಾತ್ರ ಎಂತಹ ಸನ್ನಿವೇಶವೇ ಎದುರಾಗಲೀ ನಿಶ್ಚಿಂತೆಯಿಂದ, ಧೈರ್ಯದಿಂದ ಜೀವನ ನಡೆಸಲು ಸಾಧ್ಯವಾಗುತ್ತದೆ. ಸೋಲೇ ಕೊನೆಯಲ್ಲ, ಗೆಲುವಿಗೆ ಕೊನೆಯೇ ಇಲ್ಲ. ಈ ಸತ್ಯ ಅರ್ಥವಾದ ದಿನ ಜೀವನ ಸುಂದರವೆಂಬ ಭಾವನೆ ನಮ್ಮದಾಗುತ್ತದೆ.

ಗೆಲುವು ಪ್ರಪಂಚಕ್ಕೆ ನಮ್ಮನ್ನು ಪರಿಚಯ ಮಾಡಿಕೊಟ್ಟರೆ, ಸೋಲು ನಮ್ಮನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳಲು ದಾರಿ ಮಾಡಿ ಕೊಡುತ್ತದೆ. ಸೋಲಿನ ರುಚಿ ಮತ್ತೆ ಪುಟಿದೇಳುವಂತೆ ಪ್ರೇರಣೆಯನ್ನು ನೀಡುತ್ತದೆ. ಸೋಲಿಲ್ಲದ ಜೀವನ ಉಪ್ಪಿಲ್ಲದ ಅಡುಗೆಯಂತೆ ರುಚಿ ಸಿಗದಂತದ್ದು. ಸೋಲಿಗೆ ಮೈಗೊಡವಿ ನಿಂತು ಧೈರ್ಯದಿಂದ ಮುನ್ನುಗ್ಗಿ ನಡೆದರೆ ಅಸಾಮಾನ್ಯವಾದ ಗೆಲುವು ಪಡೆಯಲು ಸಾಧ್ಯವಿದೆ.

ಏಳು–ಬೀಳಿನ ಪಯಣ ನಮ್ಮ ಈ ಜೀವನ

ಜೀವನ ನಿಂತ ನೀರಲ್ಲ, ಹರಿಯುವ ನೀರಾಗಬೇಕು. ಇಂತಹ ಬದುಕಿನಲ್ಲಿ ಏಳು–ಬೀಳುಗಳಾಗುವುದು ಸಹಜವಾದುದು. ಒಮ್ಮೆ ಮೇಲಿದ್ದವರು ಕೆಳಗಿಳಿಯಲೇ ಬೇಕು,ಕೆಳಗಿದ್ದವರು ಮೇಲೇರಲೇ ಬೇಕು. ಈ ಏಳು–ಬೀಳಿನ ಪಯಣವೇ ನಮ್ಮ ಈ ಜೀವನ. ಬದುಕಿನ ಈ ಸತ್ಯ ಅರಿವಾದ ದಿನ ಸುಂದರವಾದ ಬದುಕು ನಮ್ಮದೆಂಬ ಭಾವನೆ ನಮ್ಮದಾಗುತ್ತದೆ. ಎಲ್ಲರೂ ಎಲ್ಲ ಕಾಲದಲ್ಲಿಯೂ ಒಂದೇ ತರಹ ಇರಲು ಸಾಧ್ಯವಿಲ್ಲ. ಬದುಕಿನಲ್ಲಿ ಎಲ್ಲವೂ ಶಾಶ್ವತವಲ್ಲ. ಸಿರಿತನ, ಬಡತನ, ನಿರುದ್ಯೋಗ, ಅವಮಾನ, ಅಪಮಾನ ಎಲ್ಲವೂ ಬದಲಾಗಲೇಬೇಕು. ಏಳು–ಬೀಳಿನ ಬದುಕಿನ ಪಯಣದಲ್ಲಿ ಎದುರಾಗುವ ಅಡೆತಡೆಗಳನ್ನು ಮೆಟ್ಟಿ ಮುನ್ನುಗ್ಗಲೇಬೇಕು.

ದ್ವೇಷ ಬಿಟ್ಟು ಪ್ರೀತಿ ಹಂಚೋಣ

ಹುಟ್ಟು ಉಚಿತ, ಸಾವು ಖಚಿತ, ನಡುವೆ ಇರುವ ಈ ಬದುಕೊಂದೇ ಶಾಶ್ವತ.ಇದನ್ನು ಅರಿತುಕೊಂಡು ಬದುಕುವ ಪ್ರತಿಯೊಂದು ಕ್ಷಣವನ್ನು ಆನಂದದಿಂದ ಕಳೆಯುವ ಕೆಲಸವನ್ನು ಮಾಡಬೇಕು. ಯಾರೋ ನಮ್ಮನ್ನು ದ್ವೇಷ ಮಾಡಿದರು, ನಮ್ಮ ಬೆನ್ನ ಹಿಂದೆ ಏನೋ ಮಾತನಾಡಿಕೊಂಡರು, ನಮ್ಮ ಮೇಲೆ ಹಗೆಯನ್ನು ಸಾಧಿಸಿ ದರೆಂದು ಅವರಂತೆ ನಾವು ಮಾಡಹೊರಟರೆ ಸುಮಧುರವಾದ ಈ ಬದುಕಿನ ಅರ್ಥ ನಮಗಾಗದಿರದು. ದ್ವೇಷದಿಂದ ದ್ವೇಷವನ್ನು ಹಂಚಿದರೆ ಕೊನೆಗೆ ಉಳಿಯುವುದು ದ್ವೇಷವೇ ಆಗಿರುತ್ತದೆ. ಅದೇ ಪ್ರೀತಿಯನ್ನು ಹಂಚಿದರೆ ಪ್ರೀತಿಯೇ ಉಳಿಯುತ್ತದೆ. ಕ್ಷಣಿಕವಾದ ಈ ಬದುಕಿನಲ್ಲಿ ದ್ವೇಷದಿಂದ ಬಾಳುವುದನ್ನು ಬಿಟ್ಟು ಪ್ರೀತಿಯನ್ನು ಹಂಚುತ್ತಾ ಜೀವನವನ್ನು ಸಾರ್ಥಕಪಡಿಸಿಕೊಳ್ಳೋಣ.

ನಮ್ಮ ಮೇಲೆ ಯಾರಾದರೂ ಕೆಸರನ್ನು ಎರಚಿದರೆ ನಾವು ಅವರಂತೆ ಕೆಸರನ್ನು ಎರಚಲು ನಿಂತುಕೊಂಡರೆ ನಮಗೂ ಅವರಿಗೂ ಯಾವುದೇ ವ್ಯತ್ಯಾಸ ಇರಲಾರದು. ನಮ್ಮತನವನ್ನು ಬಿಡದೆ ಯಾರಿಗಾಗಿಯೂ ನಾವು ಬದುಕನ್ನು ನಡೆಸದೆ ಸಾಧ್ಯವಾದಷ್ಟು ಸನ್ಮಾರ್ಗದಲ್ಲಿ ನಡೆಯುವ ಮೂಲಕ ಪ್ರೀತಿಯನ್ನು ಹಂಚಿದರೆ ಸುಂದರ ಬದುಕನ್ನು ಸಾಗಿಸಲು ಸಾಧ್ಯವಿದೆ.

ಬದುಕೆಂದರೆ ಸುಂದರ ಪಯಣ

ಬದುಕು ಸುಂದರವಾದುದು. ಆಸೆ ಪಟ್ಟದ್ದು ಸಿಗದೇ ಹೋದರೂ ಆತ್ಮವಿಶ್ವಾಸವನ್ನು ಬಿಡದೇ, ಏನೇ ಸಮಸ್ಯೆಗಳು ಎದುರಾದರೂ ಮುಂದಾದರೂ ಬದಲಾಗಬಹುದೆಂಬ ಆಸೆಯಿಂದ ಮುನ್ನುಗ್ಗುವ ಜೀವನವೇ ಸುಂದರ. ಸುಂದರವಾದ ಬದುಕಿನಲ್ಲಿ ಸುಮಧುರವಾದ ಕ್ಷಣಗಳನ್ನು ಮೆಲುಕು ಹಾಕುತ್ತಾ ಉತ್ತಮವಾದ ಬದುಕನ್ನು ರೂಢಿಸಿಕೊಂಡು ಮುಂದೆ ಸಾಗಿದರೆ ಆ ಬದುಕಿನ ಪಯಣ ಸುಂದರವಾಗಿಯೇ ಉಳಿಯುತ್ತದೆ.

ದಾಸರು, 'ಮಾನವ ಜನ್ಮ ದೊಡ್ಡದು ಹುಚ್ಚಪ್ಪಗಳಿರಾ... ಇದನ್ನು ಹಾನಿಮಾಡಲು ಬೇಡಿರೋ...' ಎಂದು ಹೇಳಿರುವ ಮಾತು ಮನುಷ್ಯನ ಹೃದಯ ಹೊಕ್ಕಬೇಕು. ಹೀಗಾಗಿ ಮಾನವನ ಬದುಕು ಎಂಬುದು ಸುಂದರ ಸುಮಧುರವಾದದು ಎಂಬುದನ್ನು ಅರ್ಥಮಾಡಿಕೊಳ್ಳದೆ. ಇಲ್ಲಸಲ್ಲದ ವಿಚಾರಗಳಿಗೆ ತಲೆಕೆಡಿಸಿಕೊಂಡು ಹಾನಿ ಮಾಡಿಕೊಳ್ಳದೆ ಎಂತಹ ಸನ್ನಿವೇಶ ಎದುರಾದರು ಧೈರ್ಯದಿಂದ ಮುನ್ನುಗ್ಗುವ ಛಲ ನಮ್ಮದಾದರೆ ಬದುಕಿನ ನಿಜವಾದ ಅಂತರ್ಸತ್ವ ನಮಗೆ ಗೋಚರವಾಗುತ್ತದೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ.

ಸರ್ಕಾರಿ, ಅನುದಾನಿತ ಶಾಲಾ ಮಕ್ಕಳಿಗೆ ಮೊಟ್ಟೆ ವಿತರಣೆಯಲ್ಲಿ ಲೋಪ

ಇದಕ್ಕೆ ಜಿಲ್ಲಾ ಮತ್ತು ತಾಲೂಕು ಹಂತದ ಅಧಿಕಾರಿಗಳ ಹೊಣೆಗಾರರನ್ನಾಗಿಸಲು ಶಾಲಾ ಶಿಕ್ಷಣ ಇಲಾಖೆ ತೀರ್ಮಾನ

ಮೈಸೂರು, ಜು.9(ಎಸ್‌ಪಿಎನ್)– ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1–10ನೇ ತರಗತಿ ವಿದ್ಯಾರ್ಥಿಗಳಿಗೆ ಮೊಟ್ಟೆ ವಿತರಣೆಗೆ ಪೋಷಕರ ಒಪ್ಪಿಗೆ ಇದ್ದಾಗ್ಯೂ ವಿದ್ಯಾರ್ಥಿಗಳಿಗೆ ಮೊಟ್ಟೆ ವಿತರಣೆಯಲ್ಲಿ ಲೋಪವಾಗುತ್ತಿದೆ. ಇದರ ಪರಿಣಾಮ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಪೌಷ್ಟಿಕ ಬೆಂಬಲ ಕಾರ್ಯಕ್ರಮಕ್ಕೆ ತೀವ್ರ ಹಿನ್ನಡೆಯಾಗುತ್ತಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಆತಂಕ ವ್ಯಕ್ತಪಡಿಸಿದೆ.



ಈ ಹಿನ್ನಡೆಗೆ ಜಿಲ್ಲಾ ಮತ್ತು ತಾಲೂಕು ಹಂತದ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಿ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಇಲಾಖೆ ಪಿಎಂ ಪೋಷಣ್ ನಿರ್ದೇಶಕರು ಸಂಬಂಧಪಟ್ಟ ಜಿಲ್ಲಾ ಹಂತದ ಅಧಿಕಾರಿಗಳಿಗೆ ಆದೇಶ ಹೊರಡಿಸಿದ್ದಾರೆ.

2024–25ನೇ ಸಾಲಿನಲ್ಲಿ ಶಾಲಾ ಶಿಕ್ಷಣ ಇಲಾಖೆಯಿಂದ ಎಲ್ಲಾ ಶಾಲೆಗಳಿಗೆ ನೀಡಿರುವ ಸುತ್ತೋಲೆಯಂತೆ ವಾರದ ಆರು ದಿನಗಳಂದು ವಿದ್ಯಾರ್ಥಿಗಳಿಗೆ ಪೂರಕ ಪೌಷ್ಟಿಕ ಆಹಾರವನ್ನು ಸಮರ್ಪಕವಾಗಿ ವಿತರಿಸದೇ ತಮ್ಮದೇ ರೀತಿಯಲ್ಲಿ ವಿತರಣೆ ಮಾಡುತ್ತಿರುವ ಶಾಲಾ ಎಸ್‌ಡಿಎಂಸಿ ಅಧ್ಯಕ್ಷರಿಗೆ ಸೂಕ್ತ ತಿಳುವಳಿಕೆ ನೀಡಬೇಕು ಹಾಗೂ ಸೆಪ್ಟೆಂಬರ್ 2024ರಿಂದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 1–10ನೇ ತರಗತಿ ವಿದ್ಯಾರ್ಥಿಗಳಿಗೆ ವಾರದ 6 ದಿನಗಳು ಪೂರಕ ಪೌಷ್ಟಿಕ ಆಹಾರವಾಗಿ ಮೊಟ್ಟೆ ಸ್ವೀಕರಿಸದೇ ಇರುವ ವಿದ್ಯಾರ್ಥಿಗಳಿಗೆ ಬಾಳೆಹಣ್ಣು ವಿತರಿಸುತ್ತಿರುವುದು ಇಲಾಖಾ ಗಮನಕ್ಕೆ ಬಂದಿದೆ.

ಆದರೆ, ರಾಜ್ಯದ ಕೆಲವು ಶಾಲೆಗಳಲ್ಲಿ ಎಸ್‌ಡಿಎಂಸಿ ಸಭೆ ನಡೆಸಿ ವಿದ್ಯಾರ್ಥಿಗಳಿಗೆ ವಾರದಲ್ಲಿ 3 ದಿನ ಮೊಟ್ಟೆ, ಉಳಿದ ಮೂರು ದಿನ ಬಾಳೆಹಣ್ಣು ವಿತರಣೆ ಮಾಡುತ್ತಿರುವ ಕುರಿತು ದೂರುಗಳು ಬಂದಿದ್ದವು. ಇನ್ನೂ ಕೆಲವು ಶಾಲೆಗಳಲ್ಲಿ ಸೋಮವಾರ, ಶನಿವಾರದಂದು ಮೊಟ್ಟೆ ವಿತರಣೆ ಮಾಡದೇ ಬಾಳೆಹಣ್ಣು ವಿತರಣೆ ಮಾಡಲು ನಿರ್ಣಯಿಸಿವೆ.

ಅಜೀಂ ಪ್ರೇಮ್‌ಜೀ ಫೌಂಡೇಷನ್(ಎಪಿಎಫ್)ಸಂಸ್ಥೆಯ ಪರಿಶೀಲನಾ ತಂಡದವರು ರಾಜ್ಯದಲ್ಲಿ ಅಕ್ಟೋಬರ್ 2024ರಿಂದ ಮಾರ್ಚ್ 2025ರವರೆಗೆ ವಿವಿಧ ಸಂದರ್ಭದಲ್ಲಿ ಭೇಟಿ ನೀಡಿದ 762 ಶಾಲೆಗಳ ಪೈಕಿ, ಸುಮಾರು 568 ಶಾಲೆಗಳಲ್ಲಿ ಎಸ್‌ಡಿಎಂಸಿ ಸದಸ್ಯರು ಅಸಮರ್ಪಕವಾಗಿರುವ ತೀರ್ಮಾನಗಳನ್ನು ತೆಗೆದುಕೊಂಡಿರುವುದು ಇಲಾಖಾ ಗಮನಕ್ಕೆ ಬಂದಿದೆ. ಇದನ್ನು ಇಲಾಖೆ ಗಂಭೀರವಾಗಿ ಪರಿಗಣಿಸಿ ಪರಿಶೀಲಿಸಲಾಗಿ, ಶಾಲೆಗಳಲ್ಲಿ ಹೀಗೆ ಎಸ್‌ಡಿಎಂಸಿ ವಾರದಲ್ಲಿ ಆರು ದಿನಗಳಂದು ಪೂರಕ ಪೌಷ್ಟಿಕ ಆಹಾರವಾಗಿರುವ ಮೊಟ್ಟೆಯನ್ನು ಪೋಷಕರ ಒಪ್ಪಿಗೆ ಇದ್ದಾಗ್ಯೂ ಸಹ ವಿತರಿಸದೇ ವಾರದಲ್ಲಿ 2 ಇಲ್ಲವೇ ಮೂರು ದಿನಗಳು ವಿತರಿಸುತ್ತಿರುವುದು ಸರಿಯಾದ ಕ್ರಮವಲ್ಲ.

▶ ಪೋಷಕರ ಒಪ್ಪಿಗೆ ಪತ್ರ ಪಡೆದಿದ್ದಾಗ್ಯೂ ವಾರದ ಆರು ದಿನಗಳಂದು ಮೊಟ್ಟೆ ಸ್ವೀಕರಿಸುವ ವಿದ್ಯಾರ್ಥಿಗಳಿಗೆ ಮೊಟ್ಟೆ ವಿತರಿಸದೇ ಬಾಳೆಹಣ್ಣು ವಿತರಿಸಲು ಏಕಪಕ್ಷೀಯವಾಗಿ ನಿರ್ಣಯಿಸಿದ್ದಾರೆ. ಮೊಟ್ಟೆ ವಿತರಣೆಯಲ್ಲಿ ಇಲಾಖಾ ಸೂಚನೆಗಳನ್ನು ಕೆಲ ಶಾಲೆಯ ಎಸ್‌ಡಿಎಂಸಿ ಸಮಿತಿ ಕೈಬಿಟ್ಟಿರುವುದು ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ ಸಂದರ್ಭದಲ್ಲಿ ಕಂಡು ಬಂದಿದೆ. –ನಿರ್ದೇಶಕರು, ಪಿಎಂ ಪೋಷಣ್ ಶಕ್ತಿ ನಿರ್ಮಾಣ್ ವಿಭಾಗ

▶ ಮೈಸೂರು ಜಿಲ್ಲೆಯ ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಮೊಟ್ಟೆ ವಿತರಣೆಯಾಗುತ್ತಿಲ್ಲ ಎಂಬ ದೂರುಗಳು ಬಂದಿವೆ. ಇದರ ಬಗ್ಗೆ ಜಿಲ್ಲೆಯ ಎಲ್ಲಾ ಶಿಕ್ಷಣಾಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದು, ಮುಂದೆ ಈ ರೀತಿ ಆಗದಂತೆ ಕ್ರಮವಹಿಸಬೇಕು. ಎಸ್‌ಡಿಎಂಸಿ ಸದಸ್ಯರಿಗೆ ಪೌಷ್ಟಿಕಾಂಶ ಆಹಾರ ವಿತರಣೆ ಕುರಿತು ತಿಳಿವಳಿಕೆ ನೀಡಬೇಕು ಎಂದು ಸೂಚಿಸಲಾಗಿದ್ದು, ಮುಂದೆ ಈ ರೀತಿ ದೂರು ಬಂದರೆ, ಸಂಬಂಧಪಟ್ಟ ಜಿಲ್ಲಾ ಮತ್ತು ತಾಲೂಕು ಹಂತದ ಶಿಕ್ಷಣಾಧಿಕಾರಿಗಳ ವಿರುದ್ಧ ಶಿಸ್ತುಕ್ರಮಕ್ಕೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು.

–ಎಸ್.ಉಕೇಶ್‌ಕುಮಾರ್, ಸಿಇಒ, ಮೈಸೂರು ಜಿಪಂ

ಕ್ಲಸ್ಟರ್ ಹಂತದಲ್ಲಿ ಸರಿಯಾಗಿ ಗಮನಹರಿಸುತ್ತಿಲ್ಲ: ಈ ರೀತಿಯಾದ ತೀರ್ಮಾನಗಳನ್ನು ಎಸ್‌ಡಿಎಂಸಿ ಸ್ವಯಂಪ್ರೇರಿತವಾಗಿ ತೆಗೆದುಕೊಳ್ಳಲು ಅವಕಾಶ ಇರುವುದಿಲ್ಲ. ಸದರಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಶಾಲೆ ಮುಖ್ಯಶಿಕ್ಷಕರು, ಇಲಾಖೆ ಕ್ಲಸ್ಟರ್, ತಾಲೂಕು ಹಾಗೂ ಜಿಲ್ಲಾ ಹಂತದ ಎಲ್ಲಾ ಸಂಬಂಧಪಟ್ಟ ಮೇಲ್ವಿಚಾರಣಾಧಿಕಾರಿಗಳು ಇಂತಹ ಪ್ರಕರಣಗಳನ್ನು ತಮ್ಮ ವ್ಯಾಪ್ತಿಯಲ್ಲಿ ಗಮನಿಸದೇ ಇರುವುದು ಹಾಗೂ ಇಂತಹ ತಪ್ಪು ಆಚರಣೆಗಳನ್ನು ಇದುವರೆವಿಗೂ ಸರಿಪಡಿಸದೇ ಇರುವುದು ಕರ್ತವ್ಯಲೋಪಕ್ಕೆ ಮತ್ತು ಕಾರ್ಯಕ್ರಮ ಹಿತಾಸಕ್ತಿಯನ್ನು ಕಡೆಗಣಿಸಲು ಕಾರಣವಾಗುತ್ತದೆ. ಇದರ ಪರಿಣಾಮ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಪೌಷ್ಟಿಕ ಬೆಂಬಲದ ಕಾರ್ಯಕ್ರಮಕ್ಕೆ ತೀವ್ರ ಹಿನ್ನಡೆಯಾಗಿದೆ.

ಮೈಸೂರು, ಮಂಡ್ಯ ಹಾಗೂ ಇತರೆ ಜಿಲ್ಲೆಗಳಲ್ಲಿ ಮೊಟ್ಟೆ ವಿತರಣೆಯಾಗದಿರುವ ಶಾಲೆಗಳ ವಿವರ

ಮಂಡ್ಯದ ಲಕ್ಷ್ಮಿ ಜನಾರ್ಧನ ಪ್ರೌಢಶಾಲೆ, ಮದ್ದೂರಿನ ಮಣಸಗೆರೆ, ಎಂ.ವಿ.ಎಚ್ ಪಿಎಸ್, ಯರಗನಹಳ್ಳಿ, ಶ್ರೀರಂಗಪಟ್ಟಣದ ಗಂಜಾಂ, ಕೆ.ಆರ್.ಪೇಟೆ ತಾಲೂಕಿನ ಮುರುಕನಹಳ್ಳಿ, ಮಂಡ್ಯ ಉತ್ತರದ ಮೆಲ್ಲನಹಳ್ಳಿ, ಮಾದೇಗೌಡನಕೊಪ್ಪಲು, ಪಾಂಡವಪುರದ ನ್ಯಾಮನಹಳ್ಳಿ, ಮಂಡ್ಯ ದಕ್ಷಿಣದ ತಗ್ಗಹಳ್ಳಿ, ಚನ್ನಪ್ಪನದೊಡ್ಡಿ, ಕೆ.ಆರ್.ಪೇಟೆಯ ಬಾಲಕರ ಜಿಪಿಎಸ್, ಬ್ಯಾಲದಕೆರೆ, ಆನೆಗೋಳ, ಎಡೆಹಳ್ಳಿ, ಐಚನಹಳ್ಳಿ, ಬಾಚಹಳ್ಳಿ ಗಗನ್ ವಿದ್ಯಾಸಂಸ್ಥೆ, ಆಲೆನಹಳ್ಳಿ, ಪೋವನಹಳ್ಳಿ, ಮೈಸೂರು ಜಿಲ್ಲೆಯ ಬಿಳಿಗೆರೆ, ಹುಸ್ಕೂರು, ಅಮಚವಾಡಿ, ತಲಕಾಡಿನ ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ಬಾಲಕಿಯರ ಪ್ರೌಢಶಾಲೆ, ವಿದ್ಯೋದಯ ಪಿಯು ಕಾಲೇಜಿನ ಪ್ರೌಢಶಾಲೆ ವಿಭಾಗ, ಹುಣಸೂರಿನ ಅತ್ತಿಕುಪ್ಪೆ, ಬೆಟ್ಟದೂರು ಹಿರಿಯ ಪ್ರಾಥಮಿಕ ಶಾಲೆ, ಬಳ್ಳಾರಿ 3, ಬೆಂಗಳೂರು ದಕ್ಷಿಣ 2, ಬೆಳಗಾವಿ 13 ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 20ಕ್ಕೂ ಶಾಲೆ ಹಾಗೂ ರಾಜ್ಯದ ವಿವಿಧ ಜಿಲ್ಲೆಗಳ 568 ಶಾಲೆಗಳಲ್ಲಿ ಸರಿಯಾಗಿ ಮೊಟ್ಟೆ ವಿತರಣೆಯಾಗುತ್ತಿಲ್ಲ ಎಂದು ಇಲಾಖೆ ಪಟ್ಟಿ ಮಾಡಿದೆ.

ತಪ್ಪು ಸರಿಪಡಿಸಿ, ತಿಳುವಳಿಕೆ ನೀಡಿ: ಶಾಲಾ ಹಂತದಲ್ಲಿ ಇಂತಹ ತಪ್ಪುಗಳು ಮುಂದೆ ಆಗದಂತೆ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು. ಈಗಾಗಲೇ ಭೇಟಿ ನೀಡಿ ಪರಿಶೀಲಿಸಿರುವ 568 ಶಾಲೆಗಳಿಗೆ ಸಂಬಂಧಿಸಿದ ತಾಲೂಕು ಹಂತದ ಬಿಇಓ, ಕ್ಲಸ್ಟರ್ ಹಂತದ ಸಿಆರ್‌ಪಿಗಳು, ತಾಪಂ ಪಿಎಂ ಪೋಷಣ್ ಸಹಾಯಕ ನಿರ್ದೇಶಕರು ಕೂಡಲೇ ತಂಡದಲ್ಲಿ ಭೇಟಿ ನೀಡಿ, ಸದರಿ ಶಾಲೆಗಳಲ್ಲಿ ಎಸ್‌ಡಿಎಂಸಿ ತೆಗೆದುಕೊಂಡಿರುವ ತಪ್ಪು ನಿರ್ಣಯಗಳನ್ನು ಸರಿಪಡಿಸಿ, ಇಲಾಖೆ ನೀಡಿರುವ ಮಾರ್ಗಸೂಚಿಗಳಂತೆ ವಾರದ 6 ದಿನ ಮೊಟ್ಟೆ ವಿತರಣೆಯಾಗಿರುವುದನ್ನು ಗಮನಿಸಬೇಕು.

ಇದರ ಬಗ್ಗೆ ಆಯಾಯ ಜಿಲ್ಲೆಯ ಉಪನಿರ್ದೇಶಕರು ಜಿಲ್ಲಾ ಹಂತದಲ್ಲಿ ಅಗತ್ಯ ಕ್ರಮಗಳನ್ನು ಕೈಗೊಂಡು, ತಮ್ಮ ವ್ಯಾಪ್ತಿಯಲ್ಲಿರುವ ಸಂಬಂಧಿಸಿದ ಶಾಲೆಗಳಲ್ಲಿ ಇಲಾಖೆಯ ಮಾರ್ಗಸೂಚಿಯಂತೆ ಸೂಕ್ತ ಅನುಪಾಲನೆ ಆಗುತ್ತಿರುವ ಬಗ್ಗೆ ಖಚಿತಪಡಿಸಿಕೊಂಡು ಜುಲೈ 15ರೊಳಗೆ ಪಿಎಂ ಪೋಷಣ್ ಶಕ್ತಿ ನಿರ್ಮಾಣ್ ನಿರ್ದೇಶಕರ ಕಚೇರಿಗೆ ವರದಿ ನೀಡುವಂತೆ ಸೂಚಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಚಂದ್ರವನ ಆಶ್ರಮದ ದಾಸೋಹಕ್ಕೆ ಜೀವಧಾರ ರಕ್ತ ನಿಧಿ ಕೇಂದ್ರದ ವತಿಯಿಂದ ಒಂದು ಲಕ್ಷ ರೂ. ದೇಣಿಗೆ



ಶ್ರೀರಂಗಪಟ್ಟಣದ ಚಂದ್ರವನ ಆಶ್ರಮದ ದಾಸೋಹಕ್ಕೆ ಜೀವಧಾರ ರಕ್ತ ನಿಧಿ ವತಿಯಿಂದ ಒಂದು ಲಕ್ಷ ರೂಪಾಯಿ ದೇಣಿಗೆಯ ಚೆಕ್‌ಅನ್ನು ಕೇಂದ್ರದ ಮುಖ್ಯಸ್ಥ ಗಿರೀಶ್ ಶ್ರೀಗಳಿಗೆ ಹಸ್ತಾಂತರಿಸಿದರು.

ಮೈಸೂರು, ಜು.9– ಶ್ರೀರಂಗಪಟ್ಟಣದಲ್ಲಿರುವ ಚಂದ್ರವನ ಆಶ್ರಮದ ದಾಸೋಹಕ್ಕೆ ಜೀವಧಾರ ರಕ್ತ ನಿಧಿ ಕೇಂದ್ರದ ವತಿಯಿಂದ ಒಂದು ಲಕ್ಷ ರೂಗಳ ಚೆಕ್ ಅನ್ನು ಆಶ್ರಮದ ಪೀಠಾಧ್ಯಕ್ಷರಾದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮಿಗಳಿಗೆ ಹಸ್ತಾಂತರಿಸಲಾಯಿತು.

ಚೆಕ್ ಸ್ವೀಕರಿಸಿ ಮಾತನಾಡಿದ ಶ್ರೀಗಳು, ಜೀವಧಾರ ರಕ್ತ ನಿಧಿ ಕೇಂದ್ರ ಯಶಸ್ವಿಯಾಗಿ ಸಮಾಜಮುಖಿ ಕೆಲಸ ಮಾಡುತ್ತಾ ಬಂದಿದೆ. ಸಾಮಾಜಿಕ ಹಾಗೂ ಧಾರ್ಮಿಕತೆ ಹಾಗೂ ಸನಾತನ ಧರ್ಮದ ಕೆಲಸವನ್ನು ಮಾಡುತ್ತಿರುವುದು ಬಹಳ ಸಂತೋಷ ತಂದುಕೊಟ್ಟಿದೆ. ಜೀವಧಾರ ರಕ್ತ ನಿಧಿ ಕೇಂದ್ರ ರಾಷ್ಟ್ರಮಟ್ಟದಲ್ಲಿ ಯಶಸ್ವಿ ಕಾಣಲಿ ಎಂದು ಆಶಿಸಿದರು,

ಭಾರತೀಯ ಪರಂಪರೆಯಲ್ಲಿ ಮಠಗಳ ಪಾತ್ರ ಅಮೋಘವಾಗಿದ್ದು, ಪ್ರತಿಯೊಂದು ಮಠಗಳಿಗೆ ಭಕ್ತರೇ ಆಧಾರ ಸ್ಥಂಭ. ಧರ್ಮ ಪರಂಪರೆ ಉಳಿಸಿಕೊಂಡು ಬರುವಲ್ಲಿ ಮಠ ಮಾನ್ಯಗಳ ಸೇವೆ ಅಮೋಘ. ಭಾರತೀಯ ಸಂಸ್ಕೃತಿಯಲ್ಲಿ ಅನಾದಿ ಕಾಲದಿಂದ ಗುರುಪೂರ್ಣಿಮೆ ಆಚರಿಸಲಾಗುತ್ತಿದೆ. ಪ್ರತಿಯೊಂದರ ಹಿಂದೆ ಗುರುವಿನ ಅವಶ್ಯಕತೆ ಇದ್ದು, ಗುರುವಿನ ಆಶೀರ್ವಾದವಿದ್ದರೆ ಎಲ್ಲವನ್ನು ಸಾಧಿಸಬಹುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮುತ್ತಣ್ಣ, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಜಯಪ್ರಕಾಶ್, ಪರೀಕ್ಷಿತ್ ರಾಜ ಅರಸ್, ಮಂಜುನಾಥ್ ಹಾಗೂ ಇನ್ನಿತರರು ಹಾಜರಿದ್ದರು

ಮೈಸೂರು ಜಿಲ್ಲೆಯಲ್ಲಿ ಭತ್ತ ನಾಟಿಗೆ ಸಿದ್ಧತೆ: ರೈತ ಸಂಪರ್ಕ ಕೇಂದ್ರಗಳಿಂದ ಅಗತ್ಯ ಬಿತ್ತನೆ ಭತ್ತ ವಿತರಣೆ

ಮೂಲ ಗೊಬ್ಬರವಾಗಿ ಪೊಟ್ಯಾಷ್ ಮಿಶ್ರಿತ ಸಂಯುಕ್ತ ರಾಸಾಯನಿಕ ಗೊಬ್ಬರ ಬಳಕೆಗೆ ಸಲಹೆ

ಮೈಸೂರು, ಜು.9(ಎಂಕೆ)– ಮೈಸೂರು ಜಿಲ್ಲೆಯ 86 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ನಾಟಿ ಗುರಿ ಹೊಂದಲಾಗಿದ್ದು, ಕಬಿನಿ ಜಲಾಶಯದಿಂದ ನೀರು ಬಿಡುವ ನಿರ್ಧಾರ ಕೈಗೊಂಡ ಕೂಡಲೇ ಜಿಲ್ಲೆಯ ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ಬಿತ್ತನೆ ಭತ್ತ ವಿತರಣೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಕಳೆದ ವರ್ಷ ನೀಡಿದ್ದ ಗುರಿಗಿಂತಲೂ ಈ ವರ್ಷ ಗುರಿ ನಿಗದಿ ಕಡಿಮೆ ಮಾಡಿದ್ದು, ರೈತರು ನಾಟಿ ಮಾಡುವ ವೇಳೆ ಮೂಲ ಗೊಬ್ಬರವನ್ನಾಗಿ ಪೊಟ್ಯಾಷ್ ಮಿಶ್ರಿತ ಸಾರಜನಕ ಮತ್ತು ರಂಜಕ ಇರುವ ಸಂಯುಕ್ತ ರಾಸಾಯನಿಕ ಗೊಬ್ಬರವನ್ನು ಬಳಸುವಂತೆ ಕೃಷಿ ಇಲಾಖೆ ಸಲಹೆ ನೀಡಿದೆ.

ರೈತರು ಸಾಮಾನ್ಯವಾಗಿ ಭತ್ತ ನಾಟಿ ಮಾಡುವ ಸಂದರ್ಭದಲ್ಲಿ 20–20–0–13 ರಾಸಾಯನಿಕ ಗೊಬ್ಬರವನ್ನು ಬಳಕೆ ಮಾಡುತ್ತಾರೆ. ಇದರಲ್ಲಿ ಸಾರಜನಕ ಮತ್ತು ರಂಜಕ ಶೇ.20 ರಷ್ಟು ಹಾಗೂ ಸಲ್ಫೇಟ್ ಶೇ.13 ರಷ್ಟಿದ್ದು, ಭತ್ತದ ಬೆಳೆಗೆ ಅಗತ್ಯವಾದ ಪೊಟ್ಯಾಷ್ ಇರುವುದಿಲ್ಲ. ಆದ್ದರಿಂದ ಪೊಟ್ಯಾಷ್ ಮಿಶ್ರಿತ ಸಂಯುಕ್ತ ರಾಸಾಯನಿಕ ಗೊಬ್ಬರವನ್ನು ಬಳಕೆ ಮಾಡುವಂತೆ ಮೈಸೂರು ಜಂಟಿ ಕೃಷಿ ನಿರ್ದೇಶಕ ಕೆ.ಹೆಚ್.ರವಿ ತಿಳಿಸಿದ್ದಾರೆ.

ಮೂಲಗೊಬ್ಬರವಾಗಿ ಪೊಟ್ಯಾಷ್ ಬಳಕೆ ಮಾಡುವುದರಿಂದ ಬೆಳೆಗೆ ರೋಗ ನಿರೋಧಕ ಮತ್ತು ಭರ ನಿರೋಧಕ ಶಕ್ತಿ ಹೆಚ್ಚಾಗಲಿದೆ. ರೋಗ–ರುಜಿನಗಳು ಬಾಧಿಸುವಿಕೆ ಕಡಿಮೆಯಾಗುವುದರ ಜೊತೆಗೆ ಕಾಳು ಕಟ್ಟಲು, ಭತ್ತದ ತೂಕ ಹೆಚ್ಚಲು ಪೊಟ್ಯಾಷ್ ಸಹಕಾರಿಯಾಗಲಿದೆ. ಆದ್ದರಿಂದ ಭತ್ತ ಮತ್ತು ರಾಗಿ ನಾಟಿ ಮಾಡುವಾಗ ಮುಖ್ಯವಾಗಿ ಪೊಟ್ಯಾಷ್ ಮಿಶ್ರಿತ ರಾಸಾಯನಿಕ ಗೊಬ್ಬರ ಬಳಕೆ ಅವಶ್ಯವೆಂದು



ಮಾಹಿತಿ ನೀಡಿದ್ದಾರೆ. ರೈತರು 20–20–0–13 ರಾಸಾಯನಿಕ ಗೊಬ್ಬರವನ್ನೇ ಬಳಸುವುದಾದರೆ ಅದಕ್ಕೆ ಪೊಟ್ಯಾಶ್ ಮಿಶ್ರಣ ಮಾಡಿ ಬಳಕೆ ಮಾಡಿ. ಇಲ್ಲವೇ ಸಂಯುಕ್ತ ರಾಸಾಯನಿಕ ಗೊಬ್ಬರಗಳಾದ '10–26–26', '15–15–15', '17–17–17', '19–19–19', '12–24–12' ಬಳಕೆ ಮಾಡಬಹುದಾಗಿದ್ದು, ಈ ಎಲ್ಲಾ ಸಂಯುಕ್ತ ರಾಸಾಯನಿಕ ಗೊಬ್ಬರಗಳು ಮಾರುಕಟ್ಟೆಯಲ್ಲಿ ಲಭ್ಯವಿವೆ ಎಂದಿದ್ದಾರೆ.

ಜಿಂಕ್ ಸಲ್ಫೇಟ್ ಬಳಕೆ ಅವಶ್ಯ: ಒಂದು ಎಕರೆ ಭತ್ತದ ಬೆಳೆಗೆ 6–8 ಕೆಜಿ ಜಿಂಕ್ ಸಲ್ಫೇಟ್ ಬಳಕೆ ಮಾಡುವುದರಿಂದ ರೋಗ–ರುಜಿನಗಳ ನಿಯಂತ್ರಣದ ಜೊತೆಗೆ ಇತರೆ ಬೆಳೆಗಳಿಗೆ ಲಘು ಪೋಷಕಾಂಶಗಳನ್ನು ನೀಡಿದಂತಾಗುತ್ತದೆ. 300 ರೂ.ಗಳ 5 ಕೆ.ಜಿ ಜಿಂಕ್ ಸಲ್ಫೇಟ್ ಬ್ಯಾಗ್ ಅನ್ನು ಶೇ.50ರ ಸಬ್ಸಿಡಿ ದರದಲ್ಲಿ ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ಮಾರಾಟ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

ಅಧಿಕ ಇಳುವರಿ ವಿಧಾನ: ಭತ್ತ ನಾಟಿ ಮಾಡುವಾಗ ಪ್ರತೀ 5–6 ಸಾಲಿನ ನಡುವೆ ಒಂದು ಸಾಲು ಖಾಲಿ ಬಿಡುವುದರಿಂದ ಸಾಕಷ್ಟು ಅನುಕೂಲವಾಗಲಿದೆ. ಸೂರ್ಯನ ಕಿರಣಗಳು ಬೀಳುವುದರ ಜೊತೆಗೆ ಗಾಳಿ–ಬೆಳಕು ಚೆನ್ನಾಗಿ ಬಿದ್ದು, ಕೀಟಗಳ ಬಾಧೆ ಕಡಿಮೆಯಾಗಲಿದೆ. ಆದ್ದರಿಂದ ಈ ಸರಳ ವಿಧಾನವನ್ನು ರೈತರು ಅಳವಡಿಸಿಕೊಳ್ಳಬೇಕು ಎಂದಿದ್ದಾರೆ.

ವೆಟ್ ಅಂಡ್ ಡ್ರೈ ಪದ್ಧತಿ ಅಳವಡಿಸಿಕೊಳ್ಳಿ: ಇದೆಲ್ಲದರ ಜೊತೆಗೆ ಭತ್ತದ ಗದ್ದೆಗೆ ನೀರು ಹಾಯಿಸುವಲ್ಲಿ ವೆಟ್ ಅಂಡ್ ಡ್ರೈ ಪದ್ಧತಿ ಬಳಸಬೇಕು. ಅಂದರೆ ಒಂದು ವಾರದಲ್ಲಿ ಮೂರು ದಿನ ಭತ್ತದ ಗದ್ದೆಯಲ್ಲಿ ನೀರು ತುಂಬಿಸಿದರೆ, ನಾಲ್ಕು ದಿನ ನೀರನ್ನು ಹೊರಗೆ ಬಿಡಬೇಕು. ಇದರಿಂದ ಭತ್ತದ ಇಳುವರಿ ಹೆಚ್ಚಾಗಲಿದೆ. ಹಾಗೆಯೇ ಯಾವುದೇ ಬಗೆಯ ಕೀಟನಾಶಕಗಳನ್ನು ಬಳಕೆ ಮಾಡುವ ಮುನ್ನ ರೋಗ ಪೀಡಿತ ಭತ್ತದ ಪೈರನ್ನು ರೈತ ಸಂಪರ್ಕ ಕೇಂದ್ರ ತಂದು ಪರಿಶೀಲನೆ ನಡೆಸಿ, ಸೂಚಿಸಿದಂತೆ ಕೀಟನಾಶಕಗಳನ್ನು ಸಿಂಪಡಿಸಿ, ಯಾರದ್ದೋ ಮಾತು ಕೇಳಿ ಯಾವುದೋ ರೋಗಕ್ಕೆ ಮತ್ಯಾವುದೋ ಕೀಟನಾಶಕ ಸಿಂಪಡಿಸಬೇಕು ಎಂದು ಸಲಹೆ ನೀಡಿದ್ದಾರೆ.

ಸಣ್ಣ ಭತ್ತಕ್ಕೆ ರೋಗ ಜಾಸ್ತಿ: ರೈತರು ಹೈ ಬ್ರೀಡ್ ಭತ್ತಗಳನ್ನು ಬಳಸಿದರೆ, ಹೆಚ್ಚಿನ ಹಾಗ್ರತಿ ವಹಿಸಬೇಕು. ಸಣ್ಣ ಭತ್ತಕ್ಕೆ ರೋಗಗಳು ಬಾಧಿಸುವುದು ಜಾಸ್ತಿ. ಹಾಗೆಯೇ ಯೂರಿಯವನ್ನು ನಾಟಿ ಮಾಡಿದ ಒಂದು ತಿಂಗಳ ನಂತರ ಬಳಸಬೇಕೆ ಹೊರತು ನಾಟಿ ಮಾಡುವಾಗ ಯೂರಿಯ ಬಳಸಬಾರದು. ಹೆಚ್ಚಾಗಿ ಯೂರಿಯಾ ಹಾಗೂ ಸಮಯವಲ್ಲದ ಸಮಯದಲ್ಲಿ ಅತಿಯಾದ ರಾಸಾಯನಿಕ ಗೊಬ್ಬರಗಳನ್ನು ಬಳಕೆ ಮಾಡುವುದರಿಂದ ಮಣ್ಣಿನ ಫಲವತ್ತತೆಯ ಮೇಲೆ ಪರಿಣಾಮ ಬೀರಲಿದೆ ಎಂದು ಎಚ್ಚರಿಸಿದ್ದಾರೆ.

ಸದ್ಯದಲ್ಲಿಯೇ ಬಿತ್ತನೆ ಭತ್ತ ವಿತರಣೆ...

ಜು.12 ರಂದು ಕಬಿನಿ ಜಲಾಶಯದಿಂದ ನಾಲೆಗಳಿಗೆ ನೀರು ಹರಿಸುವ ಸಂಬಂಧ ಸಭೆ ನಡೆಯಲಿದ್ದು, ಸಭೆ ನೀರು ಹರಿಸುವುದಕ್ಕೆ ಸೂಚನೆ ನೀಡಿದ ಕೂಡಲೇ ಅಂದರೆ, ಸೋಮವಾರ (ಜು.14) ದಿಂದ ಜಿಲ್ಲೆಯ ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿಯೂ ಬಿತ್ತನೇ ಭತ್ತ ವಿತರಣೆ ಮಾಡಲಾಗುವುದು.



- ಕೆ.ಹೆಚ್.ರವಿ, ಜಂಟಿ ಕೃಷಿ ನಿರ್ದೇಶಕ

ದೇವೇಗೌಡರೊಟ್ಟಿಗೆ ಓಡಾಡಿ ಪಕ್ಷ ಕಟ್ಟುವಾಗ ಈಗ ಬಂದವರೆಲ್ಲಾ ಎಲ್ಲಿದ್ದರು!

● ಹಿರಿಯ ಶಾಸಕ ಜಿ.ಟಿ.ದೇವೇಗೌಡರ ಪ್ರಶ್ನೆ ● ನನ್ನ ಶಾಸಕಾಂಗ ಪಕ್ಷದ ನಾಯಕನನ್ನಾಗಿ ಮಾಡದ್ದಕ್ಕೆ ಬೇಸರವಿದೆ

ಮೈಸೂರು, ಜು.9(ಎಂಟಿವೈ)– ಯಾವುದೇ ಸಭೆ, ಸಮಾರಂಭಗಳಿಗೆ ಕರೆಯದ ಕಾರಣ ನಾನು ಜೆಡಿಎಸ್‌ನಿಂದ ದೂರ ಉಳಿದಿದ್ದೇನೆ. ನನ್ನನ್ನು ಟೀಕಿಸುವ ಜೆಡಿಎಸ್‌ನ ಮರಿ ನಾಯಕರಿಗೆ ನನ್ನನ್ನು ಎದುರಿಸುವ ತಾಕತ್ತು ಇದೆಯಾ ಎಂದು ಶಾಸಕ ಜಿ.ಟಿ.ದೇವೇಗೌಡರು, ಜೆಡಿಎಸ್ ನಾಯಕರ ವಿರುದ್ಧ ಹರಿಹಾಯ್ದಿದ್ದಾರೆ.



ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈ ಹಿಂದಿನಿಂದಲೂ ನಾನು ದೊಡ್ಡ ನಾಯಕನ ಮುಂದೆ ಹೋರಾಟ ಮಾಡಿಕೊಂಡು ಗೆದ್ದು ಬಂದಿದ್ದೇನೆ. ಸಿದ್ದರಾಮಯ್ಯರಂತಹ ನಾಯಕರ ಮುಂದೆಯೇ ಗೆದ್ದಿದ್ದೇನೆ. ಈಗ ಅರ್ಧದಲ್ಲಿ ಜೆಡಿಎಸ್ ಬಿಟ್ಟು ಯಾವ ಪಕ್ಷಕ್ಕೂ ನಾನು ಹೋಗೋದಿಲ್ಲ. ನನ್ನ ಜೀವನದಲ್ಲಿ ಭ್ರಷ್ಟಾಚಾರ ಮಾಡಿಲ್ಲ, ಪಕ್ಷಾಂತರ ಮಾಡಿಲ್ಲ. ನನ್ನನ್ನು ಪಕ್ಷಾಂತರಿ ಎಂದು ಹೇಳುವ ತಾಕತ್ತು ಯಾರಿಗೂ ಇಲ್ಲ ಎಂದು ಕಿಡಿಕಾರಿದರು.

ಈ ಹಿಂದೆ 20 ತಿಂಗಳು ಯಡಿಯೂರಪ್ಪ ಅವರಿಗೆ ಅಧಿಕಾರ ಕೊಡಲಿಲ್ಲ ಎಂಬ ಕಾರಣಕ್ಕೆ ಬಿಜೆಪಿಗೆ ಬೆಂಬಲ ನೀಡಿದ್ದೆ. ಇನ್ನು ನನ್ನ ಶಾಸಕ ಅವಧಿ 3 ವರ್ಷದವರೆಗೆ ಇದೆ. ನನಗೆ ಶಾಸಕಾಂಗ ಪಕ್ಷದ ನಾಯಕ ಸ್ಥಾನ ಕೊಡಲಿಲ್ಲ ಎಂಬ ಬೇಸರವಿದೆ. ಹಿರಿಯನಾಗಿದ್ದರೂ ನನಗೆ ಅವಕಾಶ ಕೊಡಲಿಲ್ಲ. ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷನಾಗಿದ್ದರೂ ನನ್ನನ್ನು ಕಡೆಗಣಿಸಿದರು. ಸುರೇಶ್ ಬಾಬುಗೆ ಕುಮಾರಸ್ವಾಮಿ ಅಧಿಕಾರ ಕೊಟ್ಟರು. ಆ ಬಗ್ಗೆ ನನಗೆ ಅಸಮಾಧಾನವಿದೆ. ಸದ್ಯಕ್ಕೆ ನಾನು ಜೆಡಿಎಸ್ ಶಾಸಕನಾಗಿ ಕೆಲಸ ಮಾಡುತ್ತಿದ್ದೇನೆ. ಜೆಡಿಎಸ್ ಪಕ್ಷದ ಸಂಘಟನೆಯ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳಿದರು.

ನಿಖಿಲ್ ಕುಮಾರಸ್ವಾಮಿ ರಾಜ್ಯ ಪ್ರವಾಸ ಕೈಗೊಂಡಿರುವುದಕ್ಕೆ ಪ್ರತಿಕ್ರಿಯಿಸಿದ ಅವರು, ನಿಖಿಲ್ ನಟ ಕೂಡ ಹೌದು, ಜನಪ್ರಿಯತೆಯೂ ಇದೆ. 3 ಬಾರಿ ಚುನಾವಣೆಯಲ್ಲಿ ಸೋತಿದ್ದಾನೆ. ಈಗ ಆತನಿಗೂ ರಾಜಕೀಯದ ಅನುಭವವಿದೆ. ದೇವೇಗೌಡರು ಕಟ್ಟಿದ್ದ ಜನತಾದಳವನ್ನು ಸದೃಢವಾಗಿ ಮುಂದೆ ತೆಗೆದುಕೊಂಡು ಹೋಗುವ ಗಟ್ಟಿ ನಾಯಕತ್ವ ನಿಖಿಲ್‌ಗೆ ಇದೆ. ನಾನು ಪಕ್ಷದ ಕಾರ್ಯಕ್ರಮದಿಂದ ದೂರವಿದ್ದೇನೆ. ದೇವೇಗೌಡರೊಟ್ಟಿಗೆ ನಾನು ಓಡಾಡಿ ಪಕ್ಷ ಕಟ್ಟಿದಾಗ ಈಗ ಬಂದವರೆಲ್ಲಾ ಎಲ್ಲಿದ್ದರು? ಈಗ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಸದ್ಯಕ್ಕೆ ನನ್ನನ್ನು ಬಿಜೆಪಿ, ಕಾಂಗ್ರೆಸ್ ಅಥವಾ ಜೆಡಿಎಸ್‌ನ ಯಾರೊಬ್ಬರೂ ಕರೆಯುತ್ತಿಲ್ಲ. ಶಾಸಕನಾಗಿ ಕ್ಷೇತ್ರದಲ್ಲಿ ಓಡಾಡುತ್ತಿದ್ದೇನೆ. ಮುಂದಿನ ಮೂರು ವರ್ಷವೂ ಜೆಡಿಎಸ್‌ನಲ್ಲೇ ಮುಂದುವರೆಯುತ್ತೇನೆ ಎಂದರು.

ಸಹಕಾರ ಸಂಘದ ಚುನಾವಣೆ ಫಲಿತಾಂಶದ ವಿಚಾರದಲ್ಲಿ ಸಚಿವ ರಾಜಣ್ಣ ಅವರ ಹೇಳಿಕೆ ಕುರಿತು ಪ್ರತಿಕ್ರಿಯಿಸಿ, ಅವರ ಹೇಳಿಕೆ ಗಮನಿಸಿ ಜನರೇ ಏನು ನಡೆದಿದೆ ಎಂಬುದನ್ನು ತಿಳಿಯಬಹುದಾಗಿದೆ. ಸಹಕಾರ ಇಲಾಖೆಯಲ್ಲಿ ಯಾರೂ ರಾಜಕೀಯ ಮಾಡಬಾರದು. ಈ ಸಂಬಂಧ ಶಾಸಕ ಜಿ.ಡಿ.ಹರೀಶ್ ಗೌಡ ನ್ಯಾಯಾಲಯದಲ್ಲಿ ಹೋರಾಟ ನಡೆಸುತ್ತಿದ್ದಾರೆ. ಅದು ಏನಾಗಲಿದೆ ಎಂಬುದನ್ನು ಕಾದು ನೋಡುತ್ತೇನೆ. ಹಾಗಾಗಿ ಈ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ ಎಂದು ತಿಳಿಸಿದರು.

ಕ್ಷೇತ್ರದ ಜನರ ಅಭಿಪ್ರಾಯ ಕೇಳುತ್ತೇನೆ: ಜಿ.ಟಿ.ದೇವೇಗೌಡ ನೀನು ಕಾಂಗ್ರೆಸ್‌ಗೆ ಬಾ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಾಗಲೀ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಾಗಲೀ ನನ್ನನ್ನು ಕರೆದಿಲ್ಲ. ಸದ್ಯ ಶಾಸಕನಾಗಿ ಕ್ಷೇತ್ರದ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿದ್ದೇನೆ. ಮುಂದೆ ನನ್ನ ಕ್ಷೇತ್ರದ ಜನರ ಸಭೆ ಕರೆದು ಅಭಿಪ್ರಾಯ ಪಡೆಯುತ್ತೇನೆ. ಕ್ಷೇತ್ರದ ಜನರು ಹೇಳಿದಂತೆ ನಿರ್ಧಾರ ಕೈಗೊಳ್ಳುತ್ತೇನೆ. ಕ್ಷೇತ್ರದ ಜನ ಕಾಂಗ್ರೆಸ್ ಇಲ್ಲ ಬಿಜೆಪಿಗೆ ಹೋಗಿ ಎಂದರೆ ಅವರ ಆದೇಶದಂತೆ ಹೋಗುತ್ತೇನೆ. ಜೆಡಿಎಸ್‌ನಲ್ಲೇ ಮುಂದುವರೆಯಿರಿ ಎಂದರೆ ಈ ಪಕ್ಷದಲ್ಲೇ ಇರುತ್ತೇನೆ. ನನ್ನ ವಿಚಾರದಲ್ಲಿ ಕ್ಷೇತ್ರದ ಜನರ ಅಭಿಪ್ರಾಯವೇ ಅಂತಿಮ ಎಂದರು.

ಜು.19, ಮೈಸೂರಲ್ಲಿ ಕಾಂಗ್ರೆಸ್ ಸಾಧನಾ ಸಮಾವೇಶ

ಮೈಸೂರು ನಗರಕ್ಕೆ ನೀಡಿರುವ ಕೊಡುಗೆಗಳ ಘೋಷಣೆ, ಹೊಸ ಯೋಜನೆಗಳಿಗೆ ಶಂಕುಸ್ಥಾಪನೆ

ಮೈಸೂರು, ಜು.9– ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಎರಡು ವರ್ಷಗಳಲ್ಲಿ ಮೈಸೂರು ನಗರಕ್ಕೆ ನೀಡಿರುವ ಕೊಡುಗೆಗಳು ಮತ್ತು ಹೊಸ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸುವ ಸಲುವಾಗಿ ಜು.19ರಂದು ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಮೈಸೂರು ಜಿಲ್ಲಾ ಮಟ್ಟದ ಬೃಹತ್ ಸಾಧನ ಸಮಾವೇಶವನ್ನು ನಡೆಸಲು ರಾಜ್ಯ ಕಾಂಗ್ರೆಸ್ ಸರ್ಕಾರ ನಿರ್ಧರಿಸಿದೆ.

ಇದರ ಹಿನ್ನೆಲೆಯಲ್ಲಿ ಬುಧವಾರ ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ನೇತೃತ್ವದಲ್ಲಿ ವರುಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಪೂರ್ವ ಸಿದ್ದತೆ ಕುರಿತು ಚರ್ಚಿಸಲಾಯಿತು.

ಈ ವೇಳೆ ಮಾತನಾಡಿದ ಡಾ. ಯತೀಂದ್ರ, ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷಗಳನ್ನು ಪೂರೈಸಿದ್ದು, ಈಗಾಗಲೇ ಮೂರ್ನಾಲ್ಕು ಭಾಗಗಳಲ್ಲಿ ಸಾಧನ ಸಮಾವೇಶವನ್ನು ಯಶಸ್ವಿಯಾಗಿ ನಡೆಸಿದೆ. ಜು.19 ರಂದು ಮೈಸೂರಿನ ಮಹಾರಾಜ ಕಾಲೇಜ್ ಮೈದಾನದಲ್ಲಿ ಮೈಸೂರು ನಗರ ಪ್ರಾಂತ್ಯಕ್ಕೆ ಸರ್ಕಾರ ನೀಡಿರುವ ಹಲವಾರು ಐತಿಹಾಸಿಕ ಕೊಡುಗೆಗಳು, ಹಾಗೆಯೇ ಮೈಸೂರು ನಗರದ ಜನತೆಯ ಬೇಡಿಕೆ ಹಾಗೂ ಜನಕಲ್ಯಾಣ ಕಾರ್ಯಕ್ರಮಗಳಿಗೆ ಅದೇ ದಿನ ಮುಖ್ಯಮಂತ್ರಿಗಳು ಹಾಗೂ ಇತರ ಇಲಾಖೆ ಮಂತ್ರಿಗಳು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದರು.

ಮೈಸೂರಿನ ಕೆ.ಆರ್. ವಿಧಾನಸಭಾ ಕ್ಷೇತ್ರ, ಚಾಮರಾಜ ವಿಧಾನಸಭಾ ಕ್ಷೇತ್ರ ಹಾಗೂ ಎನ್.ಆರ್. ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರು ಮತ್ತು ಸಾರ್ವಜನಿಕರು ಈ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ. ವರುಣ ವಿಧಾನಸಭಾ ಕ್ಷೇತ್ರದ ಸಾರ್ವಜನಿಕರು, ಕಾರ್ಯಕರ್ತರು ಹಾಗೂ ಇತರ ಇಲಾಖೆಗಳ ಫಲಾನುಭವಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಅವರು ಮನವಿ ಮಾಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ ಬಿ.ಜೆ. ವಿಜಯ್‌ಕುಮಾರ್ ಮಾತನಾಡಿ ಮುಖ್ಯಮಂತ್ರಿಗಳು ಮೈಸೂರು ನಗರ ಹಾಗೂ ಜಿಲ್ಲೆಯ ಶಾಸಕರ ಸಭೆ ಕರೆದು ಸಿದ್ಧತೆ ಕೈಗೊಳ್ಳಲು ಮೈಸೂರು ನಗರ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಸೂಚನೆ ನೀಡಿದ್ದಾರೆ. ಅದರಂತೆ ಜು.12ರಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್ ಸಿ ಮಹದೇವಪ್ಪ ನೇತೃತ್ವದಲ್ಲಿ ಮೈಸೂರು ಜಿಲ್ಲೆ ಹಾಗೂ ನಗರ ವ್ಯಾಪ್ತಿಯ ಶಾಸಕರ, ಸಂಸದರ ಹಾಗೂ ಮಾಜಿ ಶಾಸಕರ ಸಭೆ ಕರೆಯಲಾಗಿದೆ ಎಂದರು.

ಸಭೆಯಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮರಿಸ್ವಾಮಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಬಸವರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತಗಡೂರು ರಂಗಸ್ವಾಮಿ, ವರುಣ ವಿಧಾನಸಭಾ ಕ್ಷೇತ್ರ ಪುರಸಭಾ ಸದಸ್ಯರು ವಿವಿಧ ಹಂತದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ವಡೋದರಾ ಬಳಿ ಗಂಭೀರಾ ಸೇತುವೆ ಕುಸಿತ: 9 ಮಂದಿ ಸಾವು

ಅಹಮದಾಬಾದ್: ಗುಜರಾತ್‌ನ ವಡೋದರಾ ಜಿಲ್ಲೆಯ ಮುಜ್‌ಪುರ ಬಳಿಯ ನಾಲ್ಕು ದಶಕಗಳಷ್ಟು ಹಳೆಯದಾದ ಗಂಭೀರಾ ಸೇತುವೆಯ ಒಂದು ಭಾಗ ಇಂದು (ಬುಧವಾರ) ಬೆಳಗ್ಗೆ ಕುಸಿದು ಬಿದ್ದ ಪರಿಣಾಮ ಹಲವಾರು ವಾಹನಗಳು ನದಿಗೆ ಬಿದ್ದು, ಕನಿಷ್ಠ ಒಂಬತ್ತು ಜನರು ಮೃತಪಟ್ಟಿದ್ದಾರೆ. ಐವರನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಸೇತುವೆ ಏಕಾಏಕಿ ಕುಸಿದು ಬಿದ್ದಿದ್ದು, ಎರಡು ಟ್ರಕ್‌ಗಳು, ಒಂದು ಪಿಕಪ್ ವ್ಯಾನ್ ಮತ್ತು ಇನ್ನೊಂದು ವಾಹನ ನದಿಗೆ ಬಿದ್ದಿವೆ. ಕೆಲವೇ ನಿಮಿಷಗಳಲ್ಲಿ, ಗ್ರಾಮಸ್ಥರು ಸುದ್ದಿ ಮುಟ್ಟಿಸಿ ಪೊಲೀಸರು ಮತ್ತು ರಕ್ಷಣಾ ತಂಡ ಸ್ಥಳಕ್ಕೆ ಧಾವಿಸಿ ಐವರನ್ನು ರಕ್ಷಿಸಿ ಮೇಲೆತ್ತಿದರು.

ಮಧ್ಯ ಗುಜರಾತ್ ಮತ್ತು ಸೌರಾಷ್ಟ್ರ ಭಾಗಗಳನ್ನು ಸಂಪರ್ಕಿಸುವ ನದಿಯಲ್ಲಿ ಗಂಭೀರಾ ಸೇತುವೆಯ ಸ್ಲ್ಯಾಬ್ ಕುಸಿದು ಐದಾರು ವಾಹನಗಳು ಮಹಿಸಾಗರ್ ನದಿಗೆ ಬಿದ್ದವು ಎಂದು ಗುಜರಾತ್ ಆರೋಗ್ಯ ಸಚಿವ ರುಷಿಕೇಶ್ ಪಟೇಲ್ ತಿಳಿಸಿದ್ದಾರೆ. ಸೇತುವೆಯನ್ನು 1985 ರಲ್ಲಿ ನಿರ್ಮಿಸಲಾಗಿತ್ತು.

ಗಂಭೀರಾ ಸೇತುವೆ ಬಹಳ ಹಿಂದಿನಿಂದಲೂ ಅಪಾಯಕಾರಿ ಶಿಥಿಲಾವಸ್ಥೆಯಲ್ಲಿತ್ತು. ಸ್ಥಳೀಯರು ಅದರ ಶಿಥಿಲಾವಸ್ಥೆಯ ಬಗ್ಗೆ ಪದೇ ಪದೆ ಎಚ್ಚರಿಕೆ ನೀಡಿ ತುರ್ತು ದುರಸ್ತಿ ಅಥವಾ ಹೊಸ ಸೇತುವೆ ನಿರ್ಮಾಣಕ್ಕೆ ಮನವಿ ಮಾಡುತ್ತಿದ್ದರು, ಆದರೆ ಅವರ ಎಚ್ಚರಿಕೆಗಳನ್ನು ನಿರ್ಲಕ್ಷಿಸಲಾಗಿತ್ತು.

ಇಂದು ಸೇತುವೆ ಕುಸಿದಿದ್ದರಿಂದ ಆನಂದ್, ವಡೋದರಾ, ಭರೂಚ್ ಮತ್ತು ಅಂಕಲೇಶ್ವರವನ್ನು ಸೌರಾಷ್ಟ್ರಕ್ಕೆ ಸಂಪರ್ಕಿಸುವ ಪ್ರಮುಖ ರಸ್ತೆಗಳು ಕಡಿದು ಹಾಕಿದೆ, ಇದು ಪ್ರಾದೇಶಿಕ ಸಾರಿಗೆ ಮತ್ತು ವಾಣಿಜ್ಯ ಸಾರಿಗೆ ಸಂಚಾರವನ್ನು ನಿಷ್ಕ್ರಿಯಗೊಳಿಸಿದೆ. ಘಟನೆಯ ಹಿಂದಿನ ನಿಖರವಾದ ಕಾರಣವನ್ನು ತನಿಖೆ ಮಾಡಲಾಗುತ್ತದೆ ಎಂದು ಸಚಿವರು ಹೇಳಿದ್ದಾರೆ. ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ತಾಂತ್ರಿಕ ತಜ್ಞರನ್ನು ಸ್ಥಳಕ್ಕೆ ತಲುಪಿ ಕುಸಿತದ ಕಾರಣದ ಬಗ್ಗೆ ತನಿಖೆ ನಡೆಸಲು ನಿರ್ದೇಶಿಸಿದ್ದಾರೆ ಎಂದು ಅವರು ಹೇಳಿದರು.

ರಾಷ್ಟ್ರಪತಿ ದ್ರೌಪದಿ ಮುರ್ಮು ಸಂತಾಪ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ, ಈ ಘಟನೆ ಅತ್ಯಂತ ನೋವುಂಟು ಮಾಡಿದೆ. ಮೃತಪಟ್ಟವರಿಗೆ ಸಂತಾಪ ಸೂಚಿಸಿದ್ದು, ಮೃತರ ಕುಟುಂಬವರು ಈ ನೋವನ್ನು ಭರಿಸುವ ಶಕ್ತಿ ದೇವರು ಕರುಣಿಸಲಿ ಎಂದು ಬರೆದುಕೊಂಡಿದ್ದಾರೆ. ಈ ಘಟನೆಯಲ್ಲಿ ಗಾಯಗೊಂಡವರು ಶೀಘ್ರ ಚೇತರಿಕೆಯಾಗಲಿ ಎಂದು ಮುರ್ಮು ಹಾರೈಸಿದ್ದಾರೆ.

ಪ್ರತಿಭಟನೆಗೆ ಮೀಸಲಾದ ಭಾರತ್ ಬಂದ್

ಬೆಂಗಳೂರು, ಜು.9– ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳನ್ನು ವಿರೋಧಿಸಿ ಕಾರ್ಮಿಕ ಸಂಘಗಳು ಇಂದು ಭಾರತ್ ಬಂದ್ ಕರೆ ನೀಡಿದ್ದವು. ಆದರೆ ಕರ್ನಾಟಕದಲ್ಲಿ ಸಾಮಾನ್ಯ ಜನಜೀವನದ ಮೇಲೆ ಹೆಚ್ಚಿನ ಪರಿಣಾಮ ಬೀರಿಲ್ಲ.



ಇಂದು ಬೆಂಗಳೂರು ಮಹಾ ನಗರ ಸಾರಿಗೆ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳು ಎಂದಿನಂತೆ ಸಂಚರಿಸಿವೆ. ಪ್ರಯಾಣಿಕರಿಗೆ ಆಟೋಗಳು ಮತ್ತು ಕ್ಯಾಬ್ ಸೌಲಭ್ಯಗಳು ಸಹ ಲಭ್ಯವಿತ್ತು. ರಾಜ್ಯ ಸರ್ಕಾರ ಶಿಕ್ಷಣ ಸಂಸ್ಥೆಗಳಿಗೆ ರಜೆ ಘೋಷಿಸದ ಕಾರಣ ಶಾಲೆಗಳು ಮತ್ತು ಕಾಲೇಜುಗಳು ಎಂದಿನಂತೆ ನಡೆದವು. ಆದರೆ ವಿವಿಧ ಕಾರ್ಮಿಕ ಸಂಘಟನೆಗಳ ಸದಸ್ಯರು ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಿದರು.

ಕಾರ್ಮಿಕ ಕಾನೂನುಗಳಿಗೆ ತಿದ್ದುಪಡಿಯನ್ನು ಹಿಂಪಡೆಯಬೇಕು. ಕಾರ್ಮಿಕ ವಿರೋಧಿ ನೀತಿಗಳು ಮತ್ತು ನೌಕರರ ಕೆಲಸದ ಸಮಯವನ್ನು ಹೆಚ್ಚಿಸುವ ಪ್ರಸ್ತಾಪವನ್ನು ರದ್ದುಗೊಳಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದ್ದರು. ಹುಬ್ಬಳ್ಳಿಯಲ್ಲಿ, ಕಾರ್ಮಿಕ ಸಂಘಗಳ ಜಂಟಿ ಸಮಿತಿಯ ಅಡಿಯಲ್ಲಿ ವಿವಿಧ ಕಾರ್ಮಿಕ ಸಂಘಗಳ ಸದಸ್ಯರು ಸರ್ಕಾರದ ಕಾರ್ಮಿಕ ವಿರೋಧಿ, ರೈತ ವಿರೋಧಿ ಮತ್ತು ಕಾರ್ಪೊರೇಟ್ ಪರ ನೀತಿಗಳನ್ನು ವಿರೋಧಿಸಿ ಧರಣಿ ನಡೆಸಿದರು. ಅದೇ ರೀತಿ, ಮೈಸೂರಿನಲ್ಲಿ ಎಐಟಿಯುಸಿ (ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್) ಮತ್ತು ಇತರ ಸಂಘಟನೆಗಳು ರ್ಯಾಲಿಯನ್ನು ಆಯೋಜಿಸಿದ್ದವು. ಬೀದರ್‌ನಲ್ಲಿಯೂ ಸಹ, ಮಹಿಳೆಯರು ಸೇರಿದಂತೆ ಕಾರ್ಮಿಕರು ಬೀದಿಗಿಳಿದರು. 24 ಗಂಟೆಗಳ ಮುಷ್ಕರಕ್ಕೆ 10 ಕೇಂದ್ರ ಕಾರ್ಮಿಕ ಸಂಘಗಳು ಮತ್ತು ಸ್ವತಂತ್ರ ಅಖಿಲ ಭಾರತ ವಲಯ ಒಕ್ಕೂಟಗಳು ಮತ್ತು ಸಂಘಗಳನ್ನು ಒಳಗೊಂಡಿರುವ ಕಾರ್ಮಿಕ ಸಂಘಗಳ ಜಂಟಿ ವೇದಿಕೆ ಕರೆ ನೀಡಿತ್ತು.

ಯೆಮನ್‌ನಲ್ಲಿ ಭಾರತೀಯ ನರ್ಸ್ ನಿಮಿಷಾಗೆ ಜು.16ರಂದು ಗಲ್ಲು

ಯೆಮೆನ್: ಯೆಮನ್‌ನಲ್ಲಿ ಮರಣದಂಡನೆ ಶಿಕ್ಷೆಗೆ ಗುರಿಯಾಗಿರುವ ಭಾರತೀಯ ನರ್ಸ್ ನಿಮಿಷಾ ಪ್ರಿಯಾಗೆ ಜುಲೈ 16 ರಂದು ಗಲ್ಲಿಗೇರಿಸಲಾಗುವುದು.



ಯೆಮನ್ ಪ್ರಜೆಯ ಕೊಲೆ ಪ್ರಕರಣದಲ್ಲಿ ಮರಣದಂಡನೆ ಶಿಕ್ಷೆಗೆ ಗುರಿಯಾಗಿರುವ ಭಾರತೀಯ ನರ್ಸ್ ನಿಮಿಷಾ ಪ್ರಿಯಾ ಅವರನ್ನು ಮುಂದಿನ ವಾರ ಅಂದರೆ ಜುಲೈ 16 ರಂದು ಗಲ್ಲಿಗೇರಿಸಲಾಗುತ್ತದೆ. ಕಳೆದ ವರ್ಷ, ಯೆಮನ್ ಅಧ್ಯಕ್ಷರು ಕೇರಳದ ನಿಮಿಷಾ ಪ್ರಿಯಾ ಅವರ ಮರಣದಂಡನೆಯನ್ನು ಅನುಮೋದಿಸಿದ್ದಾರೆ.

ನಿಮಿಶಾ ಪ್ರಿಯಾ ಪ್ರಕರಣ: ನಿಮಿಶಾ ಪ್ರಿಯಾ 2008 ರಲ್ಲಿ ಯೆಮೆನ್‌ಗೆ ತೆರಳಿದ್ದರು. ಹಲವಾರು ಆಸ್ಪತ್ರೆಗಳಲ್ಲಿ ಕೆಲಸ ಮಾಡಿದ ನಂತರ ಅವರು ಅಂತಿಮವಾಗಿ ತಮ್ಮ ಕ್ಲಿನಿಕ್ ಅನ್ನು ತೆರೆದರು ಮತ್ತು 2014 ರಲ್ಲಿ ತಲಾಲ್ ಅಬ್ದೋ ಮಹ್ದಿ ಅವರನ್ನು ಸಂಪರ್ಕಿಸಿದರು, ಯೆಮೆನ್‌ನಲ್ಲಿ ಸ್ಥಳೀಯರೊಂದಿಗೆ ಪಾಲುದಾರಿಕೆ ಮಾಡಿಕೊಂಡು ವ್ಯವಹಾರವನ್ನು ಪ್ರಾರಂಭಿಸುವುದು ನಿಯಮವಾಗಿದೆ.

ಕೇರಳದ ನರ್ಸ್ ಮಹ್ದಿಯೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದರು. ನಿಮಿಷಾ ಅವರ ಕುಟುಂಬವು ಮಹ್ದಿಗೆ ನಿದ್ರಾಜನಕ ಚುಚ್ಚುಮದ್ದನ್ನು ನೀಡಿತ್ತು ಎಂದು ಹೇಳಿಕೊಂಡಿದೆ. ಆದರೆ, ಮಿತಿಮೀರಿದ ಡೋಸ್‌ನಿಂದಾಗಿ ಅವರ ಸಾವು ಸಂಭವಿಸಿದೆ. ಈ ಘಟನೆಯ ಬಳಿಕ ದೇಶದಿಂದ ಪಲಾಯನ ಮಾಡಲು ಯತ್ನಿಸುತ್ತಿದ್ದಾಗ ನಿಮಿಶಾ ಅವರನ್ನು ಬಂಧಿಸಲಾಯಿತು ಮತ್ತು 2018 ರಲ್ಲಿ ಕೊಲೆ ಆರೋಪ ಹೊರಿಸಲಾಯಿತು. ವಿಚಾರಣಾ ನ್ಯಾಯಾಲಯ ಯೆಮೆನ್ ಪ್ರಜೆಯನ್ನು ಕೊಂದ ಆರೋಪದಲ್ಲಿ ಆಕೆಯನ್ನು ದೋಷಿ ಎಂದು ತೀರ್ಪು ನೀಡಿತು. ಈ ನಿರ್ಧಾರವನ್ನು ದೇಶದ ಸುಪ್ರೀಂ ಜುಡಿಷಿಯಲ್ ಕೌನ್ಸಿಲ್ 2023 ರ ನವೆಂಬರ್‌ನಲ್ಲಿ ಎತ್ತಿಹಿಡಿದಿದೆ.

ಏಷ್ಯಾದ ಅತ್ಯಂತ ಹಿರಿಯ ಆನೆ 'ವತ್ಸಲಾ' ಇನ್ನಿಲ್ಲ

ಮಧ್ಯಪ್ರದೇಶ, ಜು.9–ಏಷ್ಯಾದ ಅತ್ಯಂತ ಹಿರಿಯ ಆನೆ ವತ್ಸಲಾ ಮಂಗಳವಾರ ಮಧ್ಯಾಹ್ನ ಸಾವನ್ನಪ್ಪಿದೆ. ಮಧ್ಯಪ್ರದೇಶದ ಪನ್ನಾ ಹುಲಿ ಅಭಯಾರಣ್ಯದ ಹಿನೌಟಾ ಶ್ರೇಣಿಯಲ್ಲಿರುವ ಆನೆ ಶಿಬಿರದಲ್ಲಿ ಕೊನೆಯುಸಿರೆಳೆದಿದೆ.



ವತ್ಸಲಾಗೆ 100 ವರ್ಷಗಳಿಗಿಂತ ಹೆಚ್ಚು ವಯಸ್ಸಾಗಿದ್ದು, ದೀರ್ಘಕಾಲದವರೆಗೆ ಪನ್ನಾ ಕಾಡಿನಲ್ಲಿಯೇ ವಾಸವಿತ್ತು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಬಹು ಅಂಗಾಂಗ ವೈಫಲ್ಯದಿಂದ ಬಳಲುತ್ತಿದ್ದ ವತ್ಸಲಾ ಅತ್ಯಂತ ಹಿರಿಯ ಮತ್ತು ಪ್ರೀತಿಯ ಆನೆಯಾಗಿತ್ತು.

ಇತ್ತೀಚಿನ ದಿನಗಳಲ್ಲಿ ವತ್ಸಲಾಳ ಮುಂಭಾಗದ ಕಾಲ್ಬೆರಳ ಉಗುರುಗಳು ಗಾಯಗೊಂಡಿದ್ದವು. ಹಿನೌಟಾ ಪ್ರದೇಶದ ಖೈರೈಯಾನ್ ನಾಲಾ ಬಳಿ ಮಲಗಿತ್ತು. ಎಷ್ಟೇ ಪ್ರಯತ್ನ ಮಾಡಿದರೂ ಎದ್ದೇಳಲು ಸಾಧ್ಯವಾಗಿಲ್ಲ. ಮಧ್ಯಾಹ್ನ 1.30 ರ ಸುಮಾರಿಗೆ ಮೃತಪಟ್ಟಿದೆ. ಅರಣ್ಯ ಸಿಬ್ಬಂದಿ ಮತ್ತು ವನ್ಯಜೀವಿ ಪ್ರಿಯರು ಪ್ರೀತಿಯಿಂದ 'ದಾದಿ' ಮತ್ತು 'ದಾಯಿಮಾ' ಎಂದು ಕರೆಯುತ್ತಿದ್ದರು. ಶಿಬಿರದಲ್ಲಿ ಅದರ ಅಂತ್ಯಕ್ರಿಯೆಯನ್ನು ಗೌರವದಿಂದ ನಡೆಸಲಾಯಿತು. 1971ರಲ್ಲಿ ಕೇರಳದ ನೀಲಂಬೂರು ಕಾಡಿನಿಂದ ವತ್ಸಲಾಳನ್ನು ಮಧ್ಯಪ್ರದೇಶಕ್ಕೆ ಕರೆತರಲಾಗಿತ್ತು. ಮೊದಲು ಅವಳನ್ನು ನರ್ಮದಾಪುರಂನಲ್ಲಿ ಇರಿಸಲಾಯಿತು ಮತ್ತು ನಂತರ ಪನ್ನಾ ಹುಲಿ ಅಭಯಾರಣ್ಯಕ್ಕೆ ಸ್ಥಳಾಂತರಿಸಲಾಯಿತು. ಖೈರೈಯಾನ್ ನಾಲಾದಲ್ಲಿ ಪ್ರತಿದಿನ ಅವಳಿಗೆ ಸ್ನಾನ ಮಾಡಿಸಿ ಗಂಜಿ ಮುಂತಾದ ಮೃದುವಾದ ಆಹಾರವನ್ನು ನೀಡಲಾಗುತ್ತಿತ್ತು. ವಯಸ್ಸಾಗಿದ್ದ ಕಾರಣ ತುಂಬಾ ದೂರ ನಡೆಯಲು ಸಾಧ್ಯವಾಗುತ್ತಿರಲಿಲ್ಲ.

ವತ್ಸಲಾವನ್ನು ಏಷ್ಯಾದ ಅತ್ಯಂತ ಹಿರಿಯ ಆನೆ ಎಂದು ಪರಿಗಣಿಸಲಾಗಿತ್ತು. ಆಕೆಯ ಅಂತ್ಯಕ್ರಿಯೆಯನ್ನು ಪನ್ನಾ ಹುಲಿ ಅಭಯಾರಣ್ಯದ ಅಧಿಕಾರಿಗಳು ಮತ್ತು ಸಿಬ್ಬಂದಿ ನೆರವೇರಿಸಿದರು. ವರ್ಷಗಳ ಕಾಲ, ವತ್ಸಲಾ ಪ್ರವಾಸಿ ಆಕರ್ಷಣೆಯಾಗಿತ್ತು ಮತ್ತು ಅತ್ಯಂತ ಹಿರಿಯಳಾಗಿದ್ದರಿಂದ, ಅವಳು ಅಭಯಾರಣ್ಯದಲ್ಲಿರುವ ಸಂಪೂರ್ಣ ಆನೆಗಳ ಗುಂಪನ್ನು ಮುನ್ನಡೆಸುತ್ತಿದ್ದಳು ಎಂದು ಹೇಳಿಕೆ ತಿಳಿಸಿದೆ.

ಬೆಂಗಳೂರಲ್ಲಿ ವಿಧ್ವಂಸಕ ಕೃತ್ಯಕ್ಕೆ ಜೈಲಿನಿಂದಲೇ ಸಂಚು ರೂಪಿಸಿದ್ದ ಉಗ್ರ ನಾಸೀರ್

● ರಾಮೇಶ್ವರಂ ಕೆಫೆ ಬ್ಲಾಸ್ಟ್ ಪ್ರಕರಣದಲ್ಲೂ ನಾಸೀರ್ ಕೈವಾಡ ● ಶಂಕಿತರಿಗೆ ಸಿಮ್ ಕಾರ್ಡ್ ನೀಡಿದ್ದ ಆರೋಪ; ಏರ್‌ಟೆಲ್ ಮಾಜಿ ಉದ್ಯೋಗಿಗೆ ನೋಟಿಸ್

ಬೆಂಗಳೂರು, ಜು.9– ಜೈಲಿನಿಂದಲೇ ಕರ್ನಾಟಕ ಸೇರಿ ದೇಶದ ವಿವಿಧೆಡೆ ಉಗ್ರ ಕೃತ್ಯಕ್ಕೆ ಸಂಚು ರೂಪಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ಮತ್ತು ಕೋಲಾರದ 5 ಕಡೆ ದಾಳಿ ನಡೆಸಿದ್ದ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಪರಪ್ಪನ ಅಗ್ರಹಾರ ಜೈಲಿನ ಮನೋವೈದ್ಯ, ಸಿಎಆರ್ ಪೊಲೀಸ್ ಅಧಿಕಾರಿ ಸೇರಿ ಮೂವರು ಶಂಕಿತ ಉಗ್ರರನ್ನು ಬಂಧಿಸಿದೆ. ಈ ಉಗ್ರರನ್ನು ಇಂದು ಕೋರ್ಟ್‌ಗೆ ಹಾಜರುಪಡಿಸಿದ ಎನ್‌ಐಎ ಅಧಿಕಾರಿಗಳ ತಂಡ 14 ದಿನಗಳ ಕಾಲ ಕಸ್ಟಡಿಗೆ ಪಡೆದಿದೆ. ಈ ಮಧ್ಯೆ ಉಗ್ರ ಟಿ.ನಾಸೀರ್ ಕುರಿತು ಹಲವು ಸ್ಫೋಟಕ ವಿಚಾರಗಳನ್ನು ಬಯಲಿಗೆಳೆದಿದೆ.



ನಾಸೀರ್

ಜೈಲಿನಲ್ಲಿದ್ದುಕೊಂಡೇ ಉಗ್ರ ಕೃತ್ಯಕ್ಕೆ ಸಂಚು: 2023ರಲ್ಲಿ ಬೆಂಗಳೂರಿನ ಹೆಬ್ಬಾಳದ ಮನೆಯಲ್ಲಿ ಜೀವಂತ ಗ್ರೆನೇಡ್‌ಗಳು ಪತ್ತೆಯಾಗಿದ್ದವು. ಇವುಗಳನ್ನು ಜುನೈದ್ ಮೂಲಕ ಇದನ್ನು ನಾಸೀರ್ ತರಿಸಿದ್ದ. ಬಳಿಕ ನಾಸೀರ್ ನನ್ನು ವಶಕ್ಕೆ ಪಡೆದು ಎನ್‌ಐಎ ವಿಚಾರಣೆ ನಡೆಸಿತ್ತು. ಈಗಾಗಲೇ ಬೆಂಗಳೂರು ಸ್ಫೋಟ ಪ್ರಕರಣದಲ್ಲಿ ನಾಸೀರ್ ಜೈಲಿನಲ್ಲಿದ್ದಾನೆ. ಭಯೋತ್ಪಾದನೆ ಬಗ್ಗೆ ಯುವಜನರ ಮೈಂಡ್ ವಾಶ್ ಮಾಡೋವುದರಲ್ಲಿ ನಿಸ್ಸೀಮನಾಗಿದ್ದ ನಾಸೀರ್, ಹಲವು ಯುವಜನರನ್ನು, ಉಗ್ರ ಚಟುವಟಿಕೆಗಳಿಗೆ ಬಳಸಿಕೊಂಡಿದ್ದಾನೆ ಎಂಬುದು ಸಹ ಎನ್‌ಐಎ ತನಿಖೆ ವೇಳೆ ತಿಳಿದುಬಂದಿದೆ. ಅಲ್ಲದೇ ಜೈಲಿನಲ್ಲಿದ್ದುಕೊಂಡೇ ಉಗ್ರ ಚಟುವಟಿಕೆಗಳ ಬಗ್ಗೆ ಸಂಚು ರೂಪಿಸಿದ್ದ. 2008ರ ಸರಣಿ ಬಾಂಬ್ ಸ್ಫೋಟ, ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ, ಶಿವಮೊಗ್ಗದಲ್ಲಿ ಉಗ್ರ ಚಟುವಟಿಕೆ, ರಾಮೇಶ್ವರಂ ಕೆಫೆ ಬ್ಲಾಸ್ಟ್ ಸೇರಿ ಹಲವು ಪ್ರಕರಣಗಳಲ್ಲಿ ನಾಸೀರ್ ಕೈವಾಡ ಇದೆ. ಅಷ್ಟೇ ಅಲ್ಲದೇ ಬೆಂಗಳೂರಿನಲ್ಲಿ ದೊಡ್ಡಮಟ್ಟದ ವಿಧ್ವಂಸಕ ಕೃತ್ಯಕ್ಕೆ ಪ್ಲ್ಯಾನ್ ಮಾಡಿದ್ದ ಎಂಬುದು ಎನ್‌ಐಎ ತನಿಖೆಯಲ್ಲಿ ಬಯಲಾಗಿದೆ.

ಜುನೈದ್, ಮೊಹಮ್ಮದ್ ಹರ್ಷದ್ ಖಾನ್, ಸುಹೈಲ್, ಫೈಜಲ್, ಜಾಹಿದ್ ತಬ್ರೇಜ್, ಮುದಾಸಿರ್ ಎಂಬ ಯುವಕರ ತಂಡವನ್ನೂ ಉಗ್ರ ಕೃತ್ಯಕ್ಕೆ ನಾಸೀರ್ ರೆಡಿ ಮಾಡಿದ್ದ. ಆದರೆ ಜೀವಂತ ಗ್ರೆನೇಡ್‌ಗಳು, ಪಿಸ್ತೂಲ್‌ಗಳು, ಸ್ಫೋಟಕ ವಸ್ತುಗಳ ಸಮೇತ ಈ ತಂಡ ಸಿಕ್ಕಿಬಿದ್ದಿತ್ತು. ಈ ಐವರನ್ನೂ ಸಿಸಿಬಿ ಪೊಲೀಸರು ಬಂಧಿಸಿದ್ದರು. ಬಳಿಕ ಎನ್‌ಐಎ ಈ ಪ್ರಕರಣದ ಹೊಣೆ ವಹಿಸಿಕೊಂಡಿತು. ಸದ್ಯ ಮೂವರನ್ನು ಬಂಧಿಸಿರುವ ಎನ್‌ಐಎ, ಬಂಧಿತರಿಂದ ಒಂದಷ್ಟು ಹಣ, ಸಂವಹನಕ್ಕೆ ಬಳಸುತ್ತಿದ್ದ ವಾಕಿಟಾಕಿ ಸೇರಿ ಹಲವು ವಸ್ತುಗಳು ವಶಕ್ಕೆ ಪಡೆದುಕೊಂಡಿದೆ. ಪ್ರಕರಣದ ತನಿಖೆ ಮುಂದುವರಿಸಿದ್ದಾರೆ.

ಎನ್‌ಐಎ ತನಿಖೆಯಿಂದ ಬಯಲು

ಏರ್‌ಟೆಲ್ ಮಾಜಿ ಉದ್ಯೋಗಿಗೆ ನೋಟಿಸ್: ಮೂವರು ಶಂಕಿತ ಉಗ್ರರ ಬಂಧನ ಪ್ರಕರಣಕ್ಕೆ ಸಂಬಂಧಿಸಿದಂತೆ ಕೋಲಾರ ತಾಲೂಕು ಭಟ್ರಹಳ್ಳಿ ಗ್ರಾಮದ ಸತೀಶ್ ಗೌಡ ಎಂಬಾತನಿಗೆ ಎನ್‌ಐಎ ನೋಟಿಸ್ ನೀಡಿದೆ. ಶಂಕಿತರಿಗೆ ಸಿಮ್ ಕಾರ್ಡ್ ನೀಡಿದ ಆರೋಪದ ಮೇಲೆ ಸತೀಶ್ ಗೌಡಗೆ ನೋಟಿಸ್ ನೀಡಲಾಗಿದೆ. ಸತೀಶ್ ಮನೆಯಲ್ಲಿ ಇಲ್ಲದ ಕಾರಣ ಕುಟುಂಬಸ್ಥರಿಗೆ ನೋಟೀಸ್ ನೀಡಿದ್ದು, ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ ಅಧಿಕಾರಿಗಳು. ಮೂರು ವರ್ಷಗಳ ಹಿಂದೆ ಸತೀಶ್ ಗೌಡ ಏರ್‌ಟೆಲ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಈ ಕೆಲಸ ಮಾಡಿರುವುದಾಗಿ ಸಂಶಯ ವ್ಯಕ್ತವಾಗಿದೆ.

ಮೈಸೂರು ಮಿತ್ರ ಗುರುವಾರ 10 ಜುಲೈ 2025

ಕೆಪಿಎಸ್ ಶಾಲೆಯಲ್ಲಿ ಅಕ್ರಮವಾಗಿ ಶುಲ್ಕ ವಸೂಲಿ

ಪೋಷಕರಿಂದ ಶಿಕ್ಷಣ ಇಲಾಖೆ ಆಯುಕ್ತರಿಗೆ ದೂರು

ಕೆ.ಆರ್.ಪೇಟೆ, ಜು.9– ಪಟ್ಟಣದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಮಕ್ಕಳ ದಾಖಲಾತಿಗೆ ಅಕ್ರಮವಾಗಿ ಶುಲ್ಕ ವಸೂಲಿ ಮಾಡಲಾಗುತ್ತಿದ್ದು, ಇದು ಕಡ್ಡಾಯ ಶಿಕ್ಷಣ ಕಾಯ್ದೆಗೆ ವಿರುದ್ಧವಾಗಿದೆ. ಹೀಗಾಗಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಪೋಷಕರು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆದೇಶದಂತೆ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಪೋಷಕರಿಂದ ಯಾವುದೇ ಶುಲ್ಕ ಪಡೆಯುವಂತಿಲ್ಲ. ಆದರೆ ಕೆಪಿಎಸ್ ಆಂಗ್ಲ ಮಾಧ್ಯಮದ ಪೂರ್ವ ಪ್ರಾಥಮಿಕ ಶಾಲೆ ಹಾಗೂ ಕಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳ ಪೋಷಕರಿಂದ 3500 ರಿಂದ 5300 ರೂ.ವರೆಗೆ ಶುಲ್ಕ ವಸೂಲಿ ಮಾಡಲಾಗುತ್ತಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಶಾಲೆಯಲ್ಲಿ ಮಕ್ಕಳ ದಾಖಲಾತಿಗೆ ಪೋಷಕರಿಂದ ಒತ್ತಡ ಹೆಚ್ಚಾದ ಹಿನ್ನೆಲೆಯಲ್ಲಿ ಶಾಲೆಯ ಎಸ್‌ಡಿಎಂಸಿ ನಿರ್ಣಯದಂತೆ ತಲಾ 30 ಮಕ್ಕಳಂತೆ 3 ತರಗತಿಗಳನ್ನು ಆರಂಭಿಸಲಾಗಿದೆ. 1 ತರಗತಿಗೆ ಮಾತ್ರ ಸರ್ಕಾರ ಒಬ್ಬ ಶಿಕ್ಷಕ ಮತ್ತು ಒಬ್ಬ ಸಹಾಯಕರಿಗೆ ವೇತನ ನೀಡುತ್ತದೆ. ಆದರೆ ಉಳಿದ ಇನ್ನೆರಡು ತರಗತಿಗಳಿಗೆ ಶಿಕ್ಷಕರು, ಸಹಾಯಕರು ಹಾಗೂ ಶುಚಿಗಾರರನ್ನು ನೇಮಿಸಿಕೊಳ್ಳಲಾಗಿದ್ದು, ಇವರಿಗೆ ವೇತನ ಪಾವತಿಸಲು ಪೋಷಕರಿಂದ ಶುಲ್ಕ ಪಡೆದುಕೊಳ್ಳಲಾಗಿದೆ. ಶುಲ್ಕವನ್ನು ನೇರವಾಗಿ ಬ್ಯಾಂಕ್‌ಗೆ ಜಮಾ ಮಾಡಿ, ಚೆಕ್ ಮೂಲಕ ವೇತನ ನೀಡಲಾಗುತ್ತಿದೆ. ಇಲ್ಲಿ ಒಂದು ಪೈಸೆಯನ್ನು ದುರುಪಯೋಗ ಮಾಡಿಕೊಳ್ಳುವ ಪ್ರಮೇಯವೇ ಇಲ್ಲ. ಹಣಕಾಸಿನ ಎಲ್ಲಾ ವ್ಯವಹಾರವನ್ನು ಪಾರದರ್ಶಕವಾಗಿ ನಡೆಸಲಾಗುತ್ತಿದೆ ಎಂದು ಕೆಪಿಎಸ್ ಶಾಲೆ ಪ್ರಾಂಶುಪಾಲ ಡಿ.ಟಿ.ಪುಲಿಗೆರಯ್ಯ ತಿಳಿಸಿದ್ದಾರೆ.

ಪ್ರಸ್ತುತ ಶಾಲೆಯಲ್ಲಿ ಎಲ್‌ಕೆಜಿಯಿಂದ 7ನೇ ತರಗತಿವರೆಗೆ ಒಟ್ಟು ಪ್ರಾಥಮಿಕ ಶಾಲಾ ವಿಭಾಗದಲ್ಲಿ 950 ವಿದ್ಯಾರ್ಥಿಗಳು ವ್ಯಾಸಾಂಗ ಮಾಡುತ್ತಿದ್ದಾರೆ. ಹೆಚ್ಚುವರಿ ತರಗತಿ ಆರಂಭಿಸಲು ಪೋಷಕರು, ಹಿರಿಯ ವಿದ್ಯಾರ್ಥಿಗಳು ಹಾಗೂ ದಾನಿಗಳಿಂದ ದೇಣಿಗೆ ಸಂಗ್ರಹಿಸಿ ಆ ಹಣದಿಂದ ಗೌರವಧನ ನೀಡಬೇಕೆಂಬ ನಿಯಮವಿದೆ. ಆದರೆ ಕೆಪಿಎಸ್ ಶಾಲೆಯಲ್ಲಿ ದಾನಿಗಳಿಂದ ದೇಣಿಗೆ ಸಂಗ್ರಹಿಸದೇ ಕೇವಲ ಪೋಷಕರಿಂದಲೇ ಶುಲ್ಕ ವಸೂಲಿ ಮಾಡಲಾಗುತ್ತಿದೆ. ಕೂಲಿ ಮಾಡಿ ಜೀವನ ನಡೆಸುವ ಪೋಷಕರು ವಾರ್ಷಿಕ 5300 ರೂ. ಕಟ್ಟಲು ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಪ್ರಶ್ನಿಸಿದರೆ ಶುಲ್ಕ ಕಟ್ಟದಿರುವ ಪೋಷಕರು ಟಿಸಿ ತೆಗೆದುಕೊಂಡು ತಮ್ಮ ಮಕ್ಕಳನ್ನು ಬೇರೆ ಶಾಲೆಗಳಿಗೆ ಸೇರಿಸಬಹುದು ಎನ್ನುತ್ತಾರೆ. ಖಾಸಗಿ ಶಾಲೆಯವರು ನಾವು ಸರಿಯಾಗಿ ಶುಲ್ಕ ಕಟ್ಟುತ್ತಿಲ್ಲವೆಂದು ಟಿಸಿ ಕೊಟ್ಟು ಸರ್ಕಾರಿ ಶಾಲೆಗೆ ಸೇರಿಸಿಕೊಳ್ಳಿ ಎನ್ನುತ್ತಾರೆ. ಈಗ ಸರ್ಕಾರಿ ಶಾಲೆಯಲ್ಲಿಯೂ ಶುಲ್ಕ ಕಟ್ಟಲಿಲ್ಲ ಎಂದು ಟಿಸಿ ಕೊಡುವುದಾದರೆ ಬಡವರ ಮಕ್ಕಳನ್ನು ಶಾಲೆ ಬಿಡಿಸಿ ಕೂಲಿಗೆ ಕಳುಹಿಸಬೇಕಾಗುತ್ತದೆ ಎಂದು ಎಸ್‌ಡಿಎಂಸಿ ಸದಸ್ಯ ಗಂಗಾಧರ್, ಕೆ.ಆರ್. ಕೃಷ್ಣ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

> ಸರ್ಕಾರ ನೀಡುತ್ತಿರುವ ಸೌಲಭ್ಯದಲ್ಲಿ ಹೆಚ್ಚುವರಿ ತರಗತಿ ನಿರ್ವಹಣೆ ಮಾಡಲು ಸಾಧ್ಯವಿಲ್ಲ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸುವ ಉದ್ದೇಶದಿಂದ ನುರಿತ ಅತಿಥಿ ಶಿಕ್ಷಕರು ಹಾಗೂ ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಸಹಾಯಕರನ್ನು ನೇಮಕ ಮಾಡಿಕೊಳ್ಳಲು ಎಸ್‌ಡಿಎಂಸಿ ಸಭೆಯಲ್ಲಿ ಕೋರಂ ಪಡೆದು ನಿರ್ಣಯ ಕೈಗೊಳ್ಳಲಾಗಿದೆ. ಪೋಷಕರಿಂದ ಶುಲ್ಕ ಪಡೆದ ಹಣವನ್ನು ನೇರವಾಗಿ ಬ್ಯಾಂಕ್ ಖಾತೆಗೆ ಜಮಾ ಮಾಡಿ, ಚೆಕ್ ಮೂಲಕ ಖರ್ಚು ಮಾಡಿ ಶಾಲೆ ಆಂಗ್ಲ ಮಾಧ್ಯಮ ತರಗತಿಗಳನ್ನು ನಿರ್ವಹಣೆ ಮಾಡಲಾಗುತ್ತಿದೆ. ಆದರೆ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಂದ ಒಂದೇ ಪೈಸೆ ಶುಲ್ಕ ವಸೂಲಿ ಮಾಡುತ್ತಿಲ್ಲ. ಮಕ್ಕಳ ಹಣಕ್ಕೆ ಶಾಸಕನಾಗಿ ಗ್ಯಾರಂಟಿ ನೀಡುತ್ತೇನೆ. ಯಾವುದೇ ಕಾರಣಕ್ಕೂ ಹಣ ದುರುಪಯೋಗ ಆಗುವುದಕ್ಕೆ ನಾನು ಬಿಡುವುದಿಲ್ಲ. ಪೋಷಕರು ಈ ಬಗ್ಗೆ ಆತಂಕಕ್ಕೆ ಒಳಗಾಗುವುದು ಬೇಡ. ಎಲ್ಲಾ ಕಡೆ ಸರ್ಕಾರಿ ಶಾಲೆಗಳು ಮುಚ್ಚುತ್ತಿರುವ ಈ ಸಂದರ್ಭದಲ್ಲಿ ಕೆ.ಆರ್.ಪೇಟೆ ಸರ್ಕಾರಿ ಕೆಪಿಎಸ್ ಶಾಲೆಯಲ್ಲಿ 2500 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿರುವುದಕ್ಕೆ ಎಲ್ಲರೂ ಸಹಕಾರ ನೀಡಬೇಕು. ಯಾರೂ ವಿರೋಧ ಮಾಡಬಾರದು. –ಶಾಸಕ ಹೆಚ್.ಟಿ.ಮಂಜು.



ಕೆಪಿಎಸ್ ಶಾಲೆಯಲ್ಲಿ ಒಂದು ತರಗತಿಗೆ 40 ಮಕ್ಕಳಿಗೆ ಮಾತ್ರ ಅವಕಾಶ ಇದ್ದು, ಹೆಚ್ಚುವರಿ ತರಗತಿ ತೆರೆದರೆ ಮಕ್ಕಳ ದಾಖಲಾತಿ ಮಾಹಿತಿ ಒಳಗೊಂಡ ದಾಖಲಾತಿಯೊಂದಿಗೆ ಪತ್ರ ಬರೆದರೆ ಅಗತ್ಯ ಅನುದಾನ ನೀಡಲಾಗುವುದು ಎಂಬ ಆದೇಶವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯು ಕೆಪಿಎಸ್ ಶಾಲೆಗಳಿಗೆ ನೀಡಿದೆ. ಆದರೆ ಕೆಪಿಎಸ್ ಶಾಲೆ ಮುಖ್ಯಸ್ಥರು ಹೆಚ್ಚುವರಿ ತರಗತಿ ತೆರೆದಿರುವ ಬಗ್ಗೆಯಾಗಲಿ, ಹೆಚ್ಚುವರಿ ಶಿಕ್ಷಕರು ಮತ್ತು ಸಹಾಯಕರನ್ನು ನೇಮಕ ಮಾಡಿಕೊಂಡಿರುವ ಬಗ್ಗೆಯಾಗಲಿ ಸರ್ಕಾರಕ್ಕೆ ಹಾಗೂ ಇಲಾಖೆಗೆ ವರದಿ ಮಾಡಿಲ್ಲ. ಇದರಿಂದ ಹೆಚ್ಚುವರಿ ತರಗತಿಗಳ ನಿರ್ವಹಣೆಗೆ ಅನುದಾನ ಬಂದಿಲ್ಲ. ಹಿಂದೆ ದಾನಿಗಳಿಂದ ಹಣ ಸಂಗ್ರಹಿಸಿ ಗೌರವ ಧನ ನೀಡಲಾಗುತ್ತಿತ್ತು. ಈಗ ಪೋಷಕರಿಗೆ ಶುಲ್ಕ ವಸೂಲಿ ಮಾಡಿ ಗೌರವ ಧನ ನೀಡಲಾಗುತ್ತಿದೆ. ಇದು ಪೋಷಕರಿಗೆ ಹೊರೆಯಾಗಿದೆ ಎಂದು ಶಾಲೆ ಎಸ್‌ಡಿಎಂಸಿ ಮಾಜಿ ಸದಸ್ಯ ಹೆಚ್.ಬಿ.ಮಂಜುನಾಥ್ ಆರೋಪಿಸಿದರು.

ಎಸ್‌ಡಿಎಂಸಿ ಉಪಾಧ್ಯಕ್ಷ ಸಿ.ಬಿ.ಚೇತನ್ ಕುಮಾರ್ ಮಾತನಾಡಿ, ಕೆಪಿಎಸ್ ಶಾಲೆ ರಾಜ್ಯದಲ್ಲಿ ಹೆಚ್ಚು ವಿದ್ಯಾರ್ಥಿಗಳಿರುವ ಸರ್ಕಾರಿ ಶಾಲೆಗಳಲ್ಲಿ ಎರಡನೇ ಸ್ಥಾನದಲ್ಲಿದೆ. ಎಲ್‌ಕೆಜಿ ಮಕ್ಕಳಿಗೆ 3600, ಯುಕೆಜಿ ಮಕ್ಕಳಿಗೆ 2600 ರೂ. ಹೊಸದಾಗಿ ದಾಖಲಾತಿ ಬಯಸಿದ ಮಕ್ಕಳಿಂದ 3600 ರೂ., 1ರಿಂದ 4ನೇ ತರಗತಿ ಓದುತ್ತಿರುವ ಆಂಗ್ಲ ಮಾಧ್ಯಮದ ವಿದ್ಯಾರ್ಥಿಗಳಿಗೆ 5300 ರೂ. ಶುಲ್ಕ ಸಂಗ್ರಹಿಸಿ ಶಾಸಕರು ಮತ್ತು ಪ್ರಾಂಶುಪಾಲರ ಜಂಟಿ ಖಾತೆಗೆ ಜಮಾ ಮಾಡಿ ಚೆಕ್ ಮೂಲಕ ವೇತನ ನೀಡಲಾಗುತ್ತಿದೆ. ಇದರಲ್ಲಿ ಯಾವುದೇ ಅವ್ಯವಹಾರಕ್ಕೆ ಅವಕಾಶವೇ ಇಲ್ಲವಾಗಿದೆ. 5, 6, 7ನೇ ತರಗತಿಯ ವಿದ್ಯಾರ್ಥಿಗಳಿಂದ ಯಾವುದೇ ಶುಲ್ಕ ವಸೂಲಿ ಮಾಡುತ್ತಿಲ್ಲ ಆದರೂ ಕೆಪಿಎಸ್ ಶಾಲೆಯ ಹೆಸರಿಗೆ ಮಸಿ ಬಳಿಯಲು ಕೆಲವರು ಪಿತೂರಿ ಮಾಡುತ್ತಿದ್ದಾರೆ ಎಂದರು.



ಕೆ.ಆರ್.ಪೇಟೆ ಪಟ್ಟಣದಲ್ಲಿ ಇರುವ ಕೆಪಿಎಸ್ ಶಾಲೆಯ ಒಂದು ನೋಟ.

ಚಿರತೆ ದಾಳಿ: 3 ಮೇಕೆ ಬಲಿ

ಪಾಂಡವಪುರ, ಜು.9– ಚಿರತೆ ದಾಳಿಗೆ ಮೂರು ಮೇಕೆಗಳು ಬಲಿಯಾಗಿರುವ ಘಟನೆ ತಾಲೂಕಿನ ಇಂಗಲಕುಪ್ಪೆ ಗ್ರಾಮದಲ್ಲಿ ಬುಧವಾರ ಮುಂಜಾನೆ ನಡೆದಿದೆ.

ಇಂಗಲಕುಪ್ಪೆ ಗ್ರಾಮದ ರೈತ ಜವರೇಗೌಡರ ಕಾಳೇಗೌಡ ಎಂಬುವರಿಗೆ ಸೇರಿದ ಮೇಕೆಗಳು ಸಾವನ್ನಪ್ಪಿರುವುದು. ಇವರು ಎಂದಿನಂತೆ ಮೇಕೆಗಳನ್ನು ಮನೆ ಮುಂದೆ ಕಟ್ಟಿ ಹಾಕಿದ್ದರು. ಮುಂಜಾನೆ ಚಿರತೆ ದಾಳಿ ನಡೆಸಿ ಮೇಕೆಗಳನ್ನು ಬಲಿ ಪಡೆದು ಪರಾರಿಯಾಗಿದೆ. ಇದರಿಂದ ಕಾಳೇಗೌಡರಿಗೆ 50 ಸಾವಿರ ರೂ. ನಷ್ಟ ಸಂಭವಿಸಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಇಂಗಲಕುಪ್ಪೆ ಗ್ರಾಮದ ಸುತ್ತಮುತ್ತ ಚಿರತೆಗಳ ಹಾವಳಿ ಹೆಚ್ಚಾಗಿದ್ದು, ಸಾಕು ಪ್ರಾಣಿಗಳ ಮೇಲೆ ದಾಳಿ ನಡೆಸಿ ಬಲಿ ಪಡೆಯುತ್ತಿವೆ. ಅಲ್ಲದೇ ರೈತರು ತಮ್ಮ ಜಮೀನಿಗೆ ತೆರಳಲು ಭಯಪಡುವಂತಾಗಿದೆ. ಹಾಗಾಗಿ ಅರಣ್ಯ ಇಲಾಖೆ ಅಧಿಕಾರಿಗಳು ಬೋನಿಟ್ಟು ಚಿರತೆ ಸೆರೆ ಹಿಡಿಯಲು ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯಾಧಿಕಾರಿಗಳು ಪರಿಶೀಲನೆ ನಡೆಸಿ ಇಲಾಖೆಯಿಂದ ಪರಿಹಾರ ದೊರಕಿಸಿ ಕೊಡುವ ಜೊತೆಗೆ ಚಿರತೆ ಸೆರೆಗೆ ಬೋನ್ ಅಳವಡಿಸಲಾಗುವುದು ಎಂದು ಭರವಸೆ ನೀಡಿದರು.



ಚಿರತೆ ದಾಳಿಗೆ ಮೇಕೆಗಳು ಬಲಿಯಾಗಿರುವುದು

ಮೇಕೆದಾಟು ಯೋಜನೆ ಆರಂಭಕ್ಕೆ ಒತ್ತಾಯಿಸಿ ಪ್ರತಿಭಟನೆ



ಮೇಕೆದಾಟು ಯೋಜನೆ ಆರಂಭಕ್ಕೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ಮದ್ದೂರು, ಜು.9– ಮೇಕೆದಾಟು ಯೋಜನೆ ಪ್ರಾರಂಭಿಸಿ ಕುಡಿಯುವ ನೀರು ಮತ್ತು ಬೇಸಾಯಕ್ಕೆ ಅನುಕೂಲ ಕಲ್ಪಿಸುವಂತೆ ಒತ್ತಾಯಿಸಿ ಕಸ್ತೂರಿ ಕರ್ನಾಟಕ ಜನಪರ ವೇದಿಕೆ ವತಿಯಿಂದ ಬೆಂಗಳೂರು–ಮೈಸೂರು ಹೆದ್ದಾರಿ ತಡೆದು ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದ ಬಳಿ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಜಮಾಯಿಸಿದ ವೇದಿಕೆ ಕಾರ್ಯ ಕರ್ತರು ಹಾಗೂ ರೈತ ಸಂಘದ ಮುಖಂಡರು ಮೇಕೆ ದಾಟು ಯೋಜನೆ ಪ್ರಾರಂಭಿಸಲು ಮೀನಾಮೇಷ ಎಣಿಸುತ್ತಿರುವ ಸರ್ಕಾರಗಳು ಹಾಗೂ ಜನಪ್ರತಿನಿಧಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕೆಲಕಾಲ ಹೆದ್ದಾರಿ ಸಂಚಾರ ತಡೆದ ಪರಿಣಾಮ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ವೇದಿಕೆ ಜಿಲ್ಲಾಧ್ಯಕ್ಷ ವಿ.ಸಿ.ಉಮಾಶಂಕರ್ ಮಾತನಾಡಿ, ಮೇಕೆದಾಟು ಯೋಜನೆ ಜಾರಿಗೊಳಿಸದ ಕಾರಣ ಕೆಆರ್‌ಎಸ್‌ನಿಂದ ಹೊರ ಬರುವ ಸಾವಿರಾರು ಕ್ಯುಸೆಕ್ಸ್ ನೀರು ವ್ಯರ್ಥವಾಗಿ ತಮಿಳುನಾಡಿಗೆ ಹರಿದು ಹೋಗುತ್ತಿದ್ದರೂ, ಜನಪ್ರತಿನಿಧಿಗಳು ತಲೆ ಕೆಡಿಸಿಕೊಳ್ಳದಿರುವುದು ವಿಪರ್ಯಾಸ ಎಂದರು.

ಯೋಜನೆ ಪೂರ್ಣಗೊಳಿಸಿದರೆ 10 ಜಿಲ್ಲೆಯ ರೈತರ ಬೇಸಾಯಕ್ಕೆ ಹಾಗೂ ಜನರಿಗೆ ಕುಡಿಯುವ ನೀರಿಗೆ ಅನುಕೂಲವಾಗುತ್ತದೆ. ಇದನ್ನರಿತು ಸರ್ಕಾರಗಳು ಯೋಜನೆ ಜಾರಿಗೆ ಮುಂದಾಗಬೇಕು. ಕೇಂದ್ರ ಸರ್ಕಾರ ಕೂಡ ಮಧ್ಯಸ್ಥಿಕೆ ವಹಿಸಿಕೊಳ್ಳಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ವೇದಿಕೆ ವತಿಯಿಂದ ರಾಜ್ಯವ್ಯಾಪಿ ಉಗ್ರ ಹೋರಾಟ ರೂಪಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ರೈತ ಸಂಘದ ತಾಲೂಕು ಅಧ್ಯಕ್ಷ ಜಿ.ಎಸ್.ಪ್ರಭುಲಿಂಗು, ಮುಖಂಡರಾದ ಕೀಳಘಟ್ಟ ನಂಜುಂಡಯ್ಯ, ವೆಂಕಟೇಶ್, ಸೊ.ಸಿ.ಪ್ರಕಾಶ್, ಸೊಂಪುರ ಉಮೇಶ್, ನಾಗರಾಜು, ಚಿಕ್ಕಣ್ಣ, ವೀರಪ್ಪ, ಗಣೇಶ, ವಿಜೇಂದ್ರಕುಮಾರ್ ಸೇರಿದಂತೆ ರೈತ ಸಂಘದ ಮುಖಂಡರು ಇದ್ದರು.

ಕಾವೇರಿ ನದಿಗೆ ಹಾರಿ ಯುವತಿ ಆತ್ಮಹತ್ಯೆ



ಶ್ರೀರಂಗಪಟ್ಟಣ, ಜು.9– ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ ಯುವತಿಯೋರ್ವಳು ಕಾವೇರಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪಟ್ಟಣದ ಉತ್ತರ ಕಾವೇರಿ ಸೇತುವೆ ಬಳಿ ಜರುಗಿದೆ.

ಹಾಸನ ಜಿಲ್ಲೆ ಬೇಲೂರು ತಾಲೂಕಿನ ಪ್ರಸಾದಹಳ್ಳಿ ಗ್ರಾಮದ ಮಂಜುನಾಥ್ ಅವರ ಪುತ್ರಿ ಸಿಂಚನಾ (24) ಆತ್ಮಹತ್ಯೆ ಮಾಡಿ ಕೊಂಡವರು. ಈಕೆ ಎಂಸಿಎ ಪದವೀಧರೆಯಾಗಿದ್ದು, ಕೆಲ ವರ್ಷಗಳಿಂದೀಚೆಗೆ ಪಿಸಿಓಡಿ ಸಮಸ್ಯೆ ಯಿಂದ ಬಳಲುತ್ತಿದ್ದರು. ಇದೇ ಕಾರಣಕ್ಕೆ ಮಾನಸಿಕ ಖಿನ್ನತೆಗೆ ಒಳಗಾಗಿದ್ದರು ಎನ್ನಲಾಗಿದೆ.

ಸಿಂಚನಾ ಮಂಗಳವಾರ ಸಂಜೆ ವೇಳೆಗೆ ಏಕಾಏಕಿ ಮನೆಯಿಂದ ಹೊರಟು ಹಾಸನ ಮೂಲಕ ಚನ್ನರಾಯಪಟ್ಟಣ ಮಾರ್ಗವಾಗಿ ಶ್ರೀರಂಗಪಟ್ಟಣಕ್ಕೆ ಬಸ್ಸಿನಲ್ಲಿ ಆಗಮಿಸಿದ್ದಾರೆ. ನಂತರ ಬಸ್ ನಿಲ್ದಾಣದಿಂದ ಬೆಂಗಳೂರು ದಿಕ್ಕಿಗೆ ನಡೆದು ಹೋದ ಈಕೆ ಉತ್ತರ ಕಾವೇರಿಯ ಸೇತುವೆ ಮೇಲಿಂದ ರಾತ್ರಿ 8ರ ಸಮಯದಲ್ಲಿ ಉಕ್ಕಿ ಹರಿಯುತ್ತಿರುವ ಕಾವೇರಿ ನದಿಗೆ ಹಾರಿದ್ದಾರೆ. ಇದನ್ನು ಗಮನಿಸಿದ ಸ್ಥಳಿಯ ದಾರಿ ಹೋಕ ವಾಹನ ಸವಾರರು ತಕ್ಷಣ ಶ್ರೀರಂಗಪಟ್ಟಣ ಟೌನ್ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ವಿಷಯ ತಿಳಿದು ಅಗ್ನಿಶಾಮಕ ದಳ ಸಿಬ್ಬಂದಿ, ಪೊಲೀಸರು ಸ್ಥಳಕ್ಕಾಗಮಿಸಿ ನದಿ ತೀರದ 1 ಕಿಮಿ ಸುತ್ತಮುತ್ತಲಿನ ಪ್ರದೇಶದಲ್ಲಿ ಮೊಬೈಲ್ ಬೆಳಕಿನಲ್ಲೇ ಹುಡುಕಾಟ ನಡೆಸಿದ್ದಾರೆ. ಸ್ಥಳದಲ್ಲಿ ಸಿಕ್ಕ ಬ್ಯಾಗ್, ಆಧಾರ್ ಕಾರ್ಡ್ ಹಾಗೂ ಚಪ್ಪಲಿಗಳ ಆಧಾರದ ಮೇಲೆ ಈಕೆಯೇ ನದಿಗೆ ಹಾರಿದ್ದಾಳೆ ಎಂದು ಶಂಕೆ ವ್ಯಕ್ತಪಡಿಸಿ ಇದೀಗ ಕುಟುಂಬಸ್ಥರಿಗೆ ಮಾಹಿತಿ ನೀಡಿದ್ದಾರೆ.

ಕತ್ತಲಾಗಿದ್ದ ಕಾರಣ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದ ಅಗ್ನಿಶಾಮಕ ಸಿಬ್ಬಂದಿ ಬುಧವಾರ ಮುಂಜಾನೆಯಿಂದಲೇ ಹುಡುಕಾಟ ಆರಂಭಿಸಿದರಾದರೂ ನದಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಯುತ್ತಿರುವ ಕಾರಣ ಯುವತಿ ಶವ ಪತ್ತೆಯಾಗಿಲ್ಲ. ಈ ಸಂಬಂಧ ಶ್ರೀರಂಗ ಪಟ್ಟಣ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಮೇಗೌಡ



ಕೆ.ಆರ್.ಪೇಟೆ, ಜು.9–ತಾಲೂಕಿನ ಅಗ್ರಹಾರಬಾಚಹಳ್ಳಿ ಹಿರಿಯ ಮುಖಂಡ ರಾಮೇಗೌಡ(80) ಬುಧವಾರ ನಿಧನರಾದರು. ಮೃತರು ಪ್ರಗತಿಪರ ಪದವೀಧರ ರೈತ ಎ.ಆರ್.ಶಂಕರ್ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ನನ್ನ ಸಿಎಂ ಮಾಡಿ!

ಸಂಘಟನೆ ಹಾಗೂ ಉಪಮುಖ್ಯಮಂತ್ರಿ ಹುದ್ದೆಯನ್ನು ಸಮರ್ಥವಾಗಿ ನಿರ್ವಹಿಸಿದ್ದೇನೆ. ಸಿದ್ದರಾಮಯ್ಯ, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆ ಆಗುವ ಸಂದರ್ಭದಲ್ಲಿ ನಿಮ್ಮೆಲ್ಲಾ ಸಲಹೆ–ಸೂಚನೆಗಳನ್ನು ಒಪ್ಪಿಕೊಂಡಿದ್ದೆ.

ಈಗ ಕಾಲ ಸನ್ನಿಹಿತವಾಗಿದೆ, ಅಧಿಕಾರ ಹಸ್ತಾಂತರಕ್ಕೆ ಸಂಪುಟದಲ್ಲಿ ಕೆಲವರ ಅಪಸ್ವರ ಕೇಳಿಬರುತ್ತಿದೆ. ಎಐಸಿಸಿ ಅಧ್ಯಕ್ಷರು ಹಾಗೂ ಮುಖ್ಯಮಂತ್ರಿ ಅವರಿಗೆ ಸೂಚಿಸಿ, ನನಗೆ ಅವಕಾಶ ಮಾಡಿಕೊಡಬೇಕು ಎಂದು ಕೋರಿದ್ದಾರೆ.

ತಮಗೆ ಅವಕಾಶ ಮಾಡಿಕೊಟ್ಟರೆ ಪಕ್ಷವನ್ನು ಮತ್ತಷ್ಟು ಬಲವರ್ಧನೆಗೊಳಿಸಿ, 2028ರಲ್ಲಿ ಪುನಃ ಅಧಿಕಾರಕ್ಕೆ ತರುವ ಪ್ರಯತ್ನ ಮಾಡುತ್ತೇನೆ ಎಂದಿದ್ದಾರೆ.

ಶಿವಕುಮಾರ್ ಮಾತನ್ನು ಆಲಿಸಿದ ಸೋನಿಯಾ ಗಾಂಧಿ, ತಮಗೆ ಎಲ್ಲವೂ ತಿಳಿದಿದೆ. ಖರ್ಗೆ ಮತ್ತು ರಾಹುಲ್ ಗಾಂಧಿ ಅವರುಗಳು ಸೂಕ್ತ ಸಮಯದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲಿದ್ದಾರೆ. ಪಕ್ಷದ ಮೇಲೆ ನಿಮಗಿರುವ ನಿಷ್ಠೆ ಎಲ್ಲಾ ಅವಕಾಶವನ್ನು ನೀಡಲಿದೆ ಎಂಬ ಭರವಸೆ ನೀಡಿದ್ದಾರೆ ಎನ್ನಲಾಗಿದೆ. ಮಾತುಕತೆ ಸಂದರ್ಭದಲ್ಲಿ ಪ್ರಿಯಾಂಕಾ ಸಹಾ ಉಪಸ್ಥಿತರಿದ್ದು, ರಾಜಕೀಯ ವಿಷಯಗಳ ಕುರಿತ ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಪ್ರಿಯಾಂಕಾ ನಿವಾಸದಿಂದ ಕರ್ನಾಟಕ ಭವನಕ್ಕೆ ಅತ್ಯುತ್ಸಾಹದೊಂದಿಗೆ ಆಗಮಿಸಿದ ಶಿವಕುಮಾರ್, ಪತ್ರಿಕಾಗೋಷ್ಠಿ ನಡೆಸಿ, ನಿನ್ನೆ ಕೇಂದ್ರ ಸಚಿವರನ್ನು ಭೇಟಿ ಮಾಡಿದ್ದರ ಬಗ್ಗೆ ಮಾಹಿತಿ ನೀಡಿದರು. ಇದೇ ವೇಳೆ ಸೋನಿಯಾ ಅವರನ್ನು ಭೇಟಿ ಮಾಡಿದ್ದಿರಲ್ಲ ಎಂಬ ಸುದ್ದಿಗಾರರ ಪ್ರಶ್ನೆಗಳನ್ನು ಸಾರಾಸಗಟಾಗಿ ತಳ್ಳಿಹಾಕಿದ ಶಿವಕುಮಾರ್, ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಭೇಟಿಗೆ ಸಮಯ ಕೇಳಿದ್ದೇನೆ ಎಂಬುದಾಗಿ ಹೇಳುವ ಮೂಲಕ ವಿಷಯಕ್ಕೆ ತೆರೆ ಎಳೆದರು.

ಆಸ್ಪತ್ರೆಗೆ ಮುಗಿ ಬೀಳುತ್ತಿರುವ ಜನತೆ

ಆಘಾತಕ್ಕೊಳಗಾಗಿ ಹೃದಯ ತಪಾಸಣೆ ಮಾಡಿಸಿಕೊಳ್ಳಲು ಆಸ್ಪತ್ರೆಗಳಿಗೆ ದೌಡಾಯಿಸುತ್ತಿದ್ದಾರೆ. ಸಾಮಾನ್ಯವಾಗಿ ಪ್ರತೀದಿನ 500 ರಿಂದ 600 ಮಂದಿ ಹೊರ ರೋಗಿಗಳು ಬರುತ್ತಿದ್ದ ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಗೆ ಕಳೆದ 15 ದಿನಗಳಿಂದ ಈ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿದ್ದು, ಈಗ 1100 ರಿಂದ 1400 ಮಂದಿ ಹೊರ ರೋಗಿ ವಿಭಾಗ (ಓಪಿಡಿ)ದಲ್ಲಿ ನೋಂದಣಿ ಮಾಡಿಸಿ ಹೃದಯ ತಪಾಸಣೆಗೊಳಗಾಗುತ್ತಿದ್ದಾರೆ.

ಬಹುತೇಕ, ಯುವಕರೇ ಹೃದಯಾಘಾತದಿಂದ ಸಾವನ್ನಪ್ಪುತ್ತಿರುವುದರಿಂದ ತೀವ್ರ ಭಯದಿಂದ ಯುವ ಸಮೂಹ ಆಸ್ಪತ್ರೆಗೆ ಲಗ್ಗೆ ಇಡುತ್ತಿರುವುದು ಓಪಿಡಿಗಳಲ್ಲಿ ನೂಕು ನುಗ್ಗಲು ಉಂಟಾಗಲು ಪ್ರಮುಖ ಕಾರಣವಾಗಿದೆ. ನಿನ್ನೆ (ಜು. 8) ನಿಯಂತ್ರಣ ಮಾಡಲಾಗದಷ್ಟು ಮಂದಿ ಜಯದೇವ ಆಸ್ಪತ್ರೆಯಲ್ಲಿ ಜಮಾಯಿಸಿದ್ದರು. ಸರತಿ ಸಾಲಿನಲ್ಲಿ ನಿಂತು ತಪಾಸಣೆ ಮಾಡಿಸಿಕೊಳ್ಳುವಷ್ಟು ತಾಳ್ಮೆ ಇಲ್ಲದ ಕೆಲ ಜನರು ಸರದಿ ಸಾಲು ಭೇದಿಸಿ, ಒಳನುಗ್ಗಿ, ಓಪಿಡಿಯಲ್ಲಿ ಗದ್ದಲ ಉಂಟಾಯಿತು. ಟೇಬಲ್, ಚೇರ್ ಎಸೆದು ದಾಂಧಲೆ ಮಾಡಿದ್ದರು. ಸಾವಿರಾರು ಮಂದಿ ಒಟ್ಟಿಗೇ ಏಕಾಏಕಿ ನುಗ್ಗಿದ್ದರಿಂದ ಸ್ಥಳದಲ್ಲಿ ಗದ್ದಲ, ಗೊಂದಲ ಉಂಟಾಗಿತ್ತು ಪರಿಸ್ಥಿತಿ ಕೈಮೀರುತ್ತಿದ್ದಂತೆಯೇ ವಿಷಯ ತಿಳಿದ ವಿ.ವಿ. ಪುರಂ ಪೊಲೀಸರು ಪರಿಸ್ಥಿತಿ ತಹಬದಿಗೆ ತಂದು ಸರತಿ ಸಾಲಿನಲ್ಲಿ ಬಂದು ಚಿಕಿತ್ಸೆ ಪಡೆಯುವಂತೆ ಸಲಹೆ ನೀಡಿದರು.

ಇಂದು ಬೆಳಗ್ಗೆ 6 ಗಂಟೆಯಿಂದಲೇ ಜಯದೇವ ಆಸ್ಪತ್ರೆಗೆ ಬರಲಾರಂಭಿಸಿದ ಜನರಿಗೆ ಸಾಲಿನಲ್ಲಿ ಬಂದು ಚಿಕಿತ್ಸೆ ಪಡೆಯುವ ವ್ಯವಸ್ಥೆ ಕಲ್ಪಿಸಿಕೊಟ್ಟಿದ್ದು, ಪೊಲೀಸರು ಸಹ ಸ್ಥಳದಲ್ಲಿದ್ದು ನಿಯಂತ್ರಿಸಿದ್ದರಿಂದ ಇಂದು ಶಾಂತ ರೀತಿಯಲ್ಲಿ ಹೃದಯ ತಪಾಸಣೆ ಮತ್ತು ಚಿಕಿತ್ಸೆ ನೀಡಲು ಸಾಧ್ಯವಾಯಿತು. ಕೇವಲ ಜಯದೇವ ಆಸ್ಪತ್ರೆ ಮಾತ್ರವಲ್ಲದೆ, ಕೆ.ಆರ್., ಕೆ.ಆರ್.ಎಸ್. ರಸ್ತೆಯ ಜಿಲ್ಲಾಸ್ಪತ್ರೆ, ರಾಣಿ ಕೃಷ್ಣಾಜಮ್ಮಣ್ಣಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಅಪೋಲೋ ಬಿಜಿಎಸ್, ಜೆಎಸ್‌ಎಸ್ ಆಸ್ಪತ್ರೆ, ಕಾವೇರಿ, ಮಣಿಪಾಲ್, ಡಿಆರ್‌ಎಂ, ಬೃಂದಾವನ ಆಸ್ಪತ್ರೆ, ನಾರಾಯಣ ಹೃದಯಾಲಯ ಸೇರಿದಂತೆ ಮೈಸೂರಿನ ಬಹುತೇಕ ಖಾಸಗಿ ಆಸ್ಪತ್ರೆಗಳಲ್ಲೂ ಜನರು ಹೆಚ್ಚಿನ ಸಂಖ್ಯೆಯಲ್ಲಿ ಹೃದಯ ತಪಾಸಣೆಗೊಳಗಾದರು.

ಜೀವನ ಶೈಲಿ ಬದಲಿಸಿಕೊಳ್ಳಿ

ಮುಂತಾದ ಅಂಶಗಳು ಹೃದಯಾಘಾತಕ್ಕೆ ಕಾರಣವಾಗಬಹುದೇ ಹೊರತು, ಬೇರೆಯವರಿಗೆ ಹೃದಯಾಘಾತವಾದರೆ, ಅದೇ ಪರಿಸ್ಥಿತಿ ನಮಗೂ ಬರುತ್ತದೆ ಎಂಬ ಭಾವನೆ ಬೇಡ ಎಂದು ತಿಳಿಸಿದ್ದಾರೆ.

ನಿತ್ಯ ವ್ಯಾಯಾಮ, ಸಾವಯವ ಕೃಷಿಯ ಆಹಾರ ಪದಾರ್ಥ ಸೇವನೆ, ಕರಿದ, ಜಂಕ್‌ಫುಡ್ ತ್ಯಜಿಸುವುದು, ಸೂಕ್ತ ನಿದ್ರೆ, ಎಂತಹುದೇ ಸಂದರ್ಭದಲ್ಲೂ ಉದ್ವೇಗಕ್ಕೊಳಗಾಗದೇ ಸಮ–ಶಾಂತಚಿತ್ತರಾಗಿದ್ದರೆ ಹೃದಯಾಘಾತವನ್ನು ತಡೆಯಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಸರ್ಕಾರವೂ ಸಹ ವಾಯುಮಾಲಿನ್ಯ, ಪ್ಲಾಸ್ಟಿಕ್ ಬಳಕೆ, ಕೃಷಿಯಲ್ಲಿ ರಸಾಯನಿಕ ಗೊಬ್ಬರ ಬಳಕೆಯನ್ನು ತಡೆಯಬೇಕು. ಆಹಾರ ಕಲಬೆರಕೆಯಾಗದಂತೆ ನಿಯಂತ್ರಿಸುವ ಅಗತ್ಯವೂ ಇದೆ. ಚೆನ್ನಾಗಿರುವವರೂ ಆತಂಕಗೊಂಡು ಆಸ್ಪತ್ರೆಗೆ ಬರುವುದರಿಂದ ಒತ್ತಡ ಜಾಸ್ತಿಯಾಗಿ ನಿಜವಾಗಲೂ ಹೃದಯ ಸಂಬಂಧಿ ಖಾಯಿಲೆ ಇರುವ ರೋಗಿಗಳಿಗೆ ಚಿಕಿತ್ಸೆ ನೀಡಲು ತೊಂದರೆಯಾಗುತ್ತದೆ ಎಂದರು.

ಮೊದಲು ಹತ್ತಿರದ ಆಸ್ಪತ್ರೆಗಳಿಗೆ ಹೋಗಿ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಒಂದು ವೇಳೆ ಹೃದ್ರೋಗ ಸಮಸ್ಯೆಗಳಿದ್ದಲ್ಲಿ ಮಾತ್ರ ಜಯದೇವ ಆಸ್ಪತ್ರೆಗೆ ಬನ್ನಿ. ಇಲ್ಲಿಗೆ ಬಂದಾಗ ಸರತಿ ಸಾಲಿನಲ್ಲಿ ನಿಂತು ಶಾಂತಚಿತ್ತತೆಯಿಂದ ಹೃದಯ ತಪಾಸಣೆ ಮಾಡಿಸಿಕೊಳ್ಳಿ ಎಂದು ಡಾ.ಸದಾನಂದ ಸಲಹೆ ನೀಡಿದ್ದಾರೆ.

ರಕ್ಷಣಾ ಸಚಿವರ ಸಮ್ಮತಿ

ಮನವಿ ಸಲ್ಲಿಸಿದ್ದೇವೆ. ನಮ್ಮ ಮನವಿಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸ್ಪಂದಿಸಿದ್ದಾರೆ. ನಾಳೆ (ಜುಲೈ 10) ಪ್ರಧಾನಿ ಭೇಟಿಗೆ ಅವಕಾಶ ನೀಡಿದರೆ ಭೇಟಿಯಾಗುತ್ತೇವೆ ಎಂದರು. ಲೋಕಸಭೆ ವಿಪಕ್ಷ ನಾಯಕ ರಾಹುಲ್ ಭೇಟಿಗೆ ಅವಕಾಶ ಕೇಳಿದ್ದೇವೆ. ಆದರೆ ಅವರು ಸಮಯ ನೀಡಿಲ್ಲ. ಸಮಯ ನೀಡಿದರೆ ಭೇಟಿಯಾಗುತ್ತೇನೆ. ಇನ್ನು ವಿಧಾನಪರಿಷತ್‌ನ 4 ಸ್ಥಾನಗಳಿಗೆ ನೇಮಕಾತಿ, ನಿಗಮ–ಮಂಡಳಿಗೆ ನೇಮಕಾತಿ ವಿಚಾರವಾಗಿ ರಣದೀಪ್ ಸಿಂಗ್ ಸುರ್ಜೇವಾಲ ಜೊತೆ ನಾಳೆ ಚರ್ಚೆ ಮಾಡುತ್ತೇನೆ ಎಂದರು.

ಬಾಲಕ ಸಾವು

ಶಾಲೆಯಲ್ಲಿ ಪಾಠ ಕೇಳಿಸಿಕೊಳ್ಳುತ್ತಾ ಕುಳಿತಿದ್ದಾಗ ದಿಢೀರ್ ಎದೆನೋವು ಕಾಣಿಸಿಕೊಂಡು ಪ್ರಜ್ಞಾಹೀನ ಸ್ಥಿತಿಯಲ್ಲಿ ಕುಸಿದು ಬಿದ್ದಿದ್ದಾನೆ. ತಕ್ಷಣ ಶಿಕ್ಷಕರು ಆತನನ್ನು ಸಾರ್ವಜನಿಕ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯದಲ್ಲಿ ಪ್ರಾಣ ಬಿಟ್ಟಿದ್ದಾನೆ. ಈತ ತಾಲೂಕಿನ ದೊಡ್ಡ ಹುಂಡಿ ಗ್ರಾಮದ ನಾಗರತ್ನ ಮತ್ತು ನಾಗರಾಜು ದಂಪತಿ ಪುತ್ರ, ಇವನಿಗೆ ಹೃದಯ ಸಂಬಂಧಿ ಕಾಯಿಲೆ ಇದ್ದು, ಮೈಸೂರಿನ ಜಯದೇವ ಮತ್ತು ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದನು. ಎಂದಿನಂತೆ ಶಾಲೆಗೆ ಬಂದ ಮನೋಜ್‌ಕುಮಾರ್ ಮಧ್ಯಾಹ್ನದ ವೇಳೆಗೆ ಹೃದಯಾಘಾತದಿಂದ ಸಾವನ್ನಪ್ಪಿದ್ದಾನೆ

ಶಾಲೆಗೆ ಹೋಗಲ್ಲ ಎಂದಿದ್ದ: ಇಂದು ಬೆಳಿಗ್ಗೆ ಸುಸ್ತಾಗಿದೆ ಶಾಲೆಗೆ ಹೋಗಲ್ಲ ಎಂದು ಮಗ ಹೇಳಿದ್ದ ಆದರೆ ನಾನೇ ಹಾಗೆಲ್ಲಾ ತಪ್ಪಿಸಿಕೊಳ್ಳಬಾರದು. ಹೋಗು ಶಾಲೆಗೆ ಹೋಗಿ ಬಾ ಎಂದು ಕಳಿಸಿದ್ದೆ ಎಂದು ಮೃತ ಬಾಲಕನ ತಾಯಿ ರೋಧಿಸುತ್ತಿದ್ದುದು ಎಲ್ಲರ ಕಣ್ಣಾಲಿ ತುಂಬಿ ಬರುತ್ತಿತ್ತು.

ಕೃಷಿ ಪಂಪ್‌ಸೆಟ್ ಸೇರಿದಂತೆ ಗ್ರಾಮೀಣ ಪ್ರದೇಶಕ್ಕೆ ಹಗಲಲ್ಲಿ ತ್ರೀ ಫೇಸ್ ವಿದ್ಯುತ್ ಪೂರೈಕೆಗೆ ಸಿದ್ಧತೆ

ಪ್ರಧಾನ ಮಂತ್ರಿ ಕುಸುಮ್–ಸಿ ಯೋಜನೆಯಡಿ ಸೌರ ವಿದ್ಯುತ್ ಘಟಕಗಳಿಂದ 172.79 ಮೆಗಾ ವ್ಯಾಟ್ ಉತ್ಪಾದಿಸಿ ಉದ್ದೇಶಿತ ಯೋಜನೆಗೆ ಪೂರೈಕೆ ಉದ್ದೇಶ

ಮೈಸೂರು, ಜು.9(ಎಸ್‌ಪಿಎನ್)– ಕೃಷಿ ಪಂಪ್‌ಸೆಟ್ ಸೇರಿದಂತೆ ಗ್ರಾಮೀಣ ಪ್ರದೇಶಗಳಿಗೆ ಹಗಲು ತ್ರೀ ಫೇಸ್ ವಿದ್ಯುತ್ ನೀಡುವಂತೆ ರೈತರ ಬಹುದಿನಗಳ ಬೇಡಿಕೆಯನ್ನು ಈಡೇರಿಸಲು ಸೆಸ್ಕ್ ಮುಂದಾಗಿದೆ.

ಕೇಂದ್ರ ಸರ್ಕಾರದ ಇಂಧನ ಸಚಿವಾಲಯ ಜಾರಿಗೆ ತಂದಿರುವ ಪ್ರಧಾನಮಂತ್ರಿ ಕುಸುಮ್–ಸಿ ಯೋಜನೆಯಡಿ ಸೌರ ವಿದ್ಯುತ್ ಘಟಕಗಳಿಂದ 172.79 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸಿ, ರೈತರ ಪಂಪ್‌ಸೆಟ್‌ಗಳಿಗೆ ಪೂರೈಸಲು ಮುಂದಾಗಿದೆ. ಮೈಸೂರು ಜಿಲ್ಲೆಯಲ್ಲಿ 33 ವಿದ್ಯುತ್ ವಿತರಣಾ ಘಟಕ ಸ್ಥಾಪಿಸುವ ಮೂಲಕ 172.79 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯ ಗುರಿ ಹೊಂದಿದ್ದು, ಈ ಯೋಜನೆಯೂ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಹಗಲಿನಲ್ಲಿ ಗುಣಮಟ್ಟದ ವಿದ್ಯುತ್ ಪೂರೈಕೆ ಹಾಗೂ ಗ್ರಾಮೀಣ ಪ್ರದೇಶದ ಗೃಹಬಳಕೆಗೂ ಪೂರೈಸಬಹುದಾಗಿದೆ. ರಾಜ್ಯಕ್ಕೆ ಇಂಧನ ಭದ್ರತೆಯನ್ನು ಖಾತ್ರಿಪಡಿಸುವಲ್ಲಿ ಸೌರ ವಿದ್ಯುತ್ ಘಟಕ ಉತ್ತಮ ಮಾರ್ಗವಾಗಿದೆ.

ಸರ್ಕಾರಿ ಜಮೀನಿನಲ್ಲಿ ಸೌರಘಟಕ: ಈ ನಿಟ್ಟಿನಲ್ಲಿ ಇಲಾಖೆಯಿಂದ ಇಲಾಖೆಗೆ ಶೂನ್ಯದರ ಆಧಾರದಲ್ಲಿ ಸರ್ಕಾರಿ ಜಮೀನುಗಳನ್ನು (ಕಂದಾಯ ಇಲಾಖೆಯಿಂದ ಇಂಧನ ಇಲಾಖೆಗೆ) ವಶಕ್ಕೆ ಪಡೆದು ವಿದ್ಯುತ್ ಉಪ ಕೇಂದ್ರಗಳ ಬಳಿ ಫೀಡರ್ ಸೌರೀಕರಣಗೊಳಿಸುವ ಯೋಜನೆ ಆಗಿದೆ. ಕೇಂದ್ರದ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದ ಪ್ರಧಾನ ಮಂತ್ರಿ ಕುಸುಮ್ ಯೋಜನೆಯ ಕಾಂಪೊನೆಂಟ್–ಸಿ ಅಡಿಯಲ್ಲಿ ಫೀಡರ್ ಮಟ್ಟದ ಸೌರೀಕರಣದ ಮೂಲಕ ಕೃಷಿ ಪಂಪ್‌ಸೆಟ್‌ಗಳಿಗೆ ಹಗಲಿನ ವೇಳೆಯಲ್ಲಿ ವಿದ್ಯುತ್ ಪೂರೈಸಲು ಯಾವುದೇ ತೊಂದರೆ ಇಲ್ಲ. ಈ ಯೋಜನೆಯಡಿ ಕೃಷಿ ಪಂಪ್‌ಸೆಟ್ ಫೀಡರ್‌ಗಳನ್ನು ಸೌರೀಕರಣಗೊಳಿಸಿ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಹಗಲಿನ ವೇಳೆ ವಿದ್ಯುತ್ ಸೌಕರ್ಯ ಕಲ್ಪಿಸುವ ಇಂಧನ ಇಲಾಖೆಯ ಯೋಜನೆಗೆ ಪ್ರತಿ ಮೆಗಾವ್ಯಾಟ್ ಉತ್ಪಾದನೆಗೆ ಐದು ಎಕರೆ ಜಮೀನು ಗುರುತಿಸಲಾಗುತ್ತದೆ.



ವಿದ್ಯುತ್ ಖರೀದಿಗೆ ಆದ್ಯತೆ: ಸರ್ಕಾರದ ಜತೆ ಖಾಸಗಿ ಕಂಪನಿ ಒಪ್ಪಂದ ಮಾಡಿಕೊಂಡಿದ್ದು, ಸೌರ ಘಟಕದಿಂದ ಪೂರೈಕೆಯಾಗುವ ಪ್ರತಿ ಯೂನಿಟ್‌ಗೆ 2.36 ರೂ.ನಂತೆ ಖರೀದಿಸಲು ನಿಗದಿಪಡಿಸಲಾಗಿದೆ. ಸೌರ ಘಟಕದಿಂದ ತಯಾರಾಗುವ ವಿದ್ಯುತ್ ಅನ್ನು ಉಪ ವಿದ್ಯುತ್ ಕೇಂದ್ರಗಳು ಯೂನಿಟ್ ಲೆಕ್ಕದಲ್ಲಿ ಪಡೆದು ಅದನ್ನು ಪಂಪ್‌ಸೆಟ್‌ಗಳಿಗೆ ಪೂರೈಸಲಿವೆ.

40 ಮೆಗಾವ್ಯಾಟ್: ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನಲ್ಲಿ ಕೃಷಿ ಪಂಪ್‌ಸೆಟ್‌ಗಳಿಗೆ ತ್ರಿ ಫೇಸ್ ವಿದ್ಯುತ್ ಪೂರೈಕೆಗಾಗಿ ಸೌರ ವಿದ್ಯುತ್ ಘಟಕ ಸ್ಥಾಪನೆಗೆ ಈ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸಿದ್ದು, ಅಲ್ಲಿ 40 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಮೆಗಾವ್ಯಾಟ್ ಉತ್ಪಾದಿಸುವ ಸೌರ ವಿದ್ಯುತ್ ಉತ್ಪಾದನಾ ಘಟಕಗಳನ್ನು ಜಿಲ್ಲೆಯ ವಿವಿಧ ತಾಲೂಕಿನಲ್ಲಿ ಸ್ಥಾಪಿಸಲು ಸೆಸ್ಕ್ ಮುಂದಾಗಿದೆ.

ಜಿಲ್ಲೆಯ ವಿವಿಧ ತಾಲೂಕಿನಲ್ಲಿ ಸರ್ಕಾರಿ ಜಾಗಗಳನ್ನು ಗುರುತಿಸಿದ್ದು, ಕೆಲವೆಡೆ ಖಾಸಗಿ ಜಾಗಗಳಲ್ಲೂ ಒಪ್ಪಂದದ ಮೇರೆಗೆ ಘಟಕ ಸ್ಥಾಪಿಸಬೇಕಾಗುತ್ತದೆ. ಒಂದು ಮೆಗಾ ವ್ಯಾಟ್ ಉತ್ಪಾದನೆಗೆ 4 ಕೋಟಿ ರೂ. ವೆಚ್ಚವಾಗಬಹುದು. ಖಾಸಗಿ ಸಹಭಾಗಿತ್ವದಲ್ಲಿ ಬಂಡವಾಳ ಹೂಡಿಕೆ ಮಾಡಿ ಸೌರ ಶಕ್ತಿಯ ಮೂಲಕ ವಿದ್ಯುತ್ ಉತ್ಪಾದನೆ ಮಾಡಲು 25 ವರ್ಷಗಳವರೆಗೆ ಒಪ್ಪಂದ ಮಾಡಿಕೊಳ್ಳಲಾಗುವುದು ಎನ್ನುತ್ತಾರೆ ಸೆಸ್ಕ್ ಅಧಿಕಾರಿಗಳು.

ಸೌರಘಟಕಗಳಿಂದ ವಿದ್ಯುತ್ ಉತ್ಪಾದನೆ ಗುರಿ: ಎಚ್.ಡಿ. ಕೋಟೆ 10.08, ನಂಜನಗೂಡು–15.43, ತಿ.ನರಸೀಪುರ –19.68, ಹುಣಸೂರು–36.69, ಸರಗೂರು–7.84, ಸಾಲಿಗ್ರಾಮ–3.04, ಪಿರಿಯಾಪಟ್ಟಣ–43.18 ಸೇರಿ ದಂತೆ ಒಟ್ಟು 172.79 ಮೆಗಾ ವ್ಯಾಟ್ ಉತ್ಪಾದನೆಯಾಗಲಿದೆ.

> ಕುಸುಮ್–ಸಿ ಯೋಜನೆಯಡಿ ಮೈಸೂರು ಜಿಲ್ಲೆಯಲ್ಲಿ 172.79 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗಲಿದೆ. ಈ ವಿದ್ಯುತ್ ಅನ್ನು ಹಗಲಿನ ವೇಳೆ ಪೂರೈಕೆ ಕೃಷಿ ಪಂಪ್ ಸೇರಿದಂತೆ ಗ್ರಾಮೀಣ ಪ್ರದೇಶದ ಮಾಡಲಾಗುವುದು. ಇದರಿಂದ ಉಳಿತಾಯವಾಗುವ ಹೆಚ್ಚುವರಿ ವಿದ್ಯುತ್ ಅನ್ನು ಸೆಸ್ಕ್ ಖರೀದಿಸಿ ಗೃಹಬಳಕೆ ಗ್ರಾಹಕರಿಗೆ ವಿತರಿಸಲಾಗುವುದು.
> –ಕೆ.ಎಂ.ಮುನಿಗೋಪಾಲ್‌ರಾಜು
> ವ್ಯವಸ್ಥಾಪಕ ನಿರ್ದೇಶಕರು, ಸೆಸ್ಕ್

ಸಿಇಟಿ: ಎಂಜಿನಿಯರಿಂಗ್ ಆಪ್ಷನ್ಸ್ ದಾಖಲು ಆರಂಭ

ಬೆಂಗಳೂರು,ಜು.9–ವೈದ್ಯಕೀಯ ಕೋರ್ಸ್ ಹೊರತುಪಡಿಸಿ, ಎಂಜಿನಿಯರಿಂಗ್, ಪಶು ವೈದ್ಯಕೀಯ, ಕೃಷಿ, ಬಿಪಿಟಿ, ಎಹೆಚ್‌ಎಸ್ ಕೋರ್ಸ್‌ಗಳ ಪ್ರವೇಶಕ್ಕೆ ಮೊದಲ ಸುತ್ತಿನ ಸೀಟು ಹಂಚಿಕೆಗೆ ಆಪ್ಷನ್ಸ್ ದಾಖಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಲಿಂಕ್ ಬಿಟ್ಟಿದ್ದು, ಜುಲೈ 15ರವರೆಗೆ ಅವಕಾಶ ನೀಡಿದೆ.

ವೈದ್ಯಕೀಯ, ದಂತ ವೈದ್ಯಕೀಯ, ಆಯುರ್ವೇದ, ಹೋಮಿಯೋಪತಿ ಮತ್ತು ಯುನಾನಿ, ಬಿಎಸ್‌ಸಿ ನರ್ಸಿಂಗ್, ಆರ್ಕಿಟೆಕ್ಚರ್, ಯೋಗ ಮತ್ತು ನ್ಯಾಚುರೋಪತಿ ಕೋರ್ಸ್‌ಗಳಿಗೆ ಸಂಬಂಧಿಸಿದ ಸೀಟ್ ಮ್ಯಾಟ್ರಿಕ್ಸ್ ಸಂಬಂಧಪಟ್ಟ ಇಲಾಖೆಗಳಿಂದ ಇನ್ನೂ ಬಂದಿಲ್ಲ. ಹೀಗಾಗಿ ಮ್ಯಾಟ್ರಿಕ್ಸ್ ಬಂದ ನಂತರ ಈ ಕೋರ್ಸ್‌ಗಳ ಪ್ರವೇಶಕ್ಕೂ ಆಪ್ಷನ್ಸ್ ದಾಖಲಿಸಲು ಅವಕಾಶ ನೀಡಲಾಗುವುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅಣಕು ಫಲಿತಾಂಶವನ್ನು ಜುಲೈ 19ರಂದು ಪ್ರಕಟಿಸಲಾಗುವುದು. ಅದರ ಬಳಿಕ ಆದ್ಯತೆಗಳನ್ನು ಅದಲು–ಬದಲು ಮಾಡಿಕೊಳ್ಳಲು ಜು.22 ರವರೆಗೆ ಅವಕಾಶ ಇರುತ್ತದೆ. ಜುಲೈ 25ರಂದು ಅಂತಿಮ ಸೀಟು ಹಂಚಿಕೆ ಫಲಿತಾಂಶ ಪ್ರಕಟಿಸಲಾಗುತ್ತದೆ ಎಂದು ವಿವರಿಸಿದರು.

ಅಭ್ಯರ್ಥಿಗಳು ಸೀಟ್ ಮ್ಯಾಟ್ರಿಕ್ಸ್ ನೋಡಿಕೊಂಡು ಆಯ್ಕೆಗಳನ್ನು ದಾಖಲಿಸುವಾಗ ಆದ್ಯತಾಕ್ರಮಗಳನ್ನು ಅನುಸರಿಸಬೇಕು. ಈ ಕುರಿತ ಹೆಚ್ಚಿನ ಮಾಹಿತಿಯನ್ನು ಯುಜಿಸಿಇಟಿ–25 ಸೀಟು ಹಂಚಿಕೆಯ ಮಾಹಿತಿ ಪುಸ್ತಕದಲ್ಲಿ ನೀಡಿರುವ ಸೂಚನೆ ಓದಿಕೊಳ್ಳಬೇಕು. ಅಲ್ಲದೆ ಕೆಇಎ ವಿಕಸನ ಯೂಟ್ಯೂಬ್ ಚಾನಲ್‌ನಲ್ಲಿ ಇರುವ ವೀಡಿಯೊ ಕೂಡ ನೋಡಬಹುದು. ಪಶು ವೈದ್ಯಕೀಯ, ಪಶು ಸಂಗೋಪನೆ, ಕೃಷಿ ವಿಜ್ಞಾನ ಕೋರ್ಸ್‌ಗಳಿಗೆ ಪ್ರಾಕ್ಟಿಕಲ್ ರ್‍ಯಾಂಕ್ ಪಡೆ ದಿರುವ ಅಭ್ಯರ್ಥಿಗಳು, ಪ್ರಾಕ್ಟಿಕಲ್, ರೆಗ್ಯುಲರ್ ಸೀಟುಗಳಿಗೆ ಪ್ರತ್ಯೇಕವಾಗಿಯೇ ಆಪ್ಷನ್ಸ್ ದಾಖಲಿಸಬೇಕು ಎಂದರು.

ಸಿಎಂ, ಡಿಸಿಎಂ ಹೆಸರಲ್ಲಿ ಕೋಟಿ ಕೋಟಿ ವಂಚನೆ

20ಕ್ಕೂ ಹೆಚ್ಚು ಮಂದಿಗೆ ಪಂಗನಾಮ ಹಾಕಿದ್ದ ಮಹಿಳೆ ಅರೆಸ್ಟ್



ಬೆಂಗಳೂರು,ಜು.9–ನಗರದಲ್ಲಿ ಕಿಟ್ಟಿ ಪಾರ್ಟಿಯಲ್ಲಿ ಪರಿಚಯವಾದ ಸ್ನೇಹಿತೆಯರಿಗೆ ಸಿಎಂ, ಡಿಸಿಎಂ ಹೆಸರೇಳಿ ಕೋಟಿ ಕೋಟಿ ವಂಚನೆ ಮಾಡಿದ ಆರೋಪದಡಿ ಮಹಿಳೆಯನ್ನು ಬಂಧಿಸಲಾಗಿದೆ. 20ಕ್ಕೂ ಹೆಚ್ಚು ಮಹಿಳೆಯರಿಗೆ 30 ಕೋಟಿ ರೂ.ಗಿಂತಲೂ ಹೆಚ್ಚು ವಂಚನೆ ಮಾಡಿದ್ದ ಆರೋಪದಡಿ ಬಸವೇಶ್ವನಗರ ಪೊಲೀಸರಿಂದ ಸವಿತಾಳನ್ನು ಬಂಧಿಸಲಾಗಿದೆ. ಕಿಟ್ಟಿ ಪಾರ್ಟಿ ಹೆಸರಲ್ಲಿ ಶ್ರೀಮಂತ ಮಹಿಳೆಯರನ್ನು ಪರಿಚಯ ಮಾಡಿಕೊಂಡಿದ್ದ ಸವಿತಾ ತನಗೆ ಹಲವು ರಾಜಕಾರಣಿಗಳು ಗೊತ್ತೆಂದು ಹೇಳಿಕೊಳ್ಳುತ್ತಿದ್ದಳು. ಸಿಎಂ, ಡಿಸಿಎಂ, ಎಂ.ಬಿಪಾಟೀಲ್ ಹೆಸರೇಳಿ ಗಾಳ ಹಾಕುತ್ತಿದ್ದ ಸವಿತಾ, ನಿಧಾನವಾಗಿ ಹೂಡಿಕೆ ನೆಪದಲ್ಲಿ ಹಣ ಪಡೆದುಕೊಳ್ಳುತ್ತಿದ್ದಳು. ಅಮೆರಿಕದಿಂದ ಕಡಿಮೆ ಬೆಲೆಗೆ ಚಿನ್ನ ತರಿಸಿಕೊಡುವುದಾಗಿ ವಂಚನೆ ಮಾಡಿದ್ದಾಳೆ. ತಲಾ 50 ಲಕ್ಷದಿಂದ ಎರಡೂವರೆ ಕೋಟಿ ಹಣ ಪಡೆದು ವಾಪಸ್ ಹಣ ನೀಡದೇ ನೆಪ ಹೇಳಿ ತಪ್ಪಿಸಿಕೊಳ್ಳುತ್ತಿದ್ದಳು. ಈ ಹಿಂದೆ ಗೋವಿಂದರಾಜನಗರ ಠಾಣೆಯಲ್ಲಿ ಕೇಸ್ ದಾಖಲಾಗಿ ಬಂಧನದ ನಂತರ ಬೇಲ್ ಮೇಲೆ ಹೊರಗಿದ್ದ ಸವಿತಾ ಮತ್ತದೇ ಚಾಳಿ ಮುಂದುವರೆಸಿ ಈಗ ಬಸವೇಶ್ವರ ನಗರ ಪೊಲೀಸರ ಅತಿಥಿ ಆಗಿದ್ದಾಳೆ.

ಮಂಜೇಗೌಡರಿಗೆ ಚಾಮುಂಡೇಶ್ವರಿ ಹೆಚ್ಚಿನ ಶಕ್ತಿ ನೀಡಲಿ: ಮಾಜಿ ಸಚಿವ ಸಾ.ರಾ.ಮಹೇಶ್ ಹಾರೈಕೆ





ಬುಧವಾರ ಹುಟ್ಟುಹಬ್ಬ ಆಚರಿಸಿಕೊಂಡ ಎಂಎಲ್‌ಸಿ ಸಿ.ಎನ್.ಮಂಜೇಗೌಡರನ್ನು ಮಾಜಿ ಸಚಿವ ಸಾ.ರಾ.ಮಹೇಶ್, ಮಾಜಿ ಶಾಸಕ ಅಶ್ವಿನ್‌ಕುಮಾರ್, ಮಾಜಿ ಮೇಯರ್ ಆರ್.ಲಿಂಗಪ್ಪ ಸೇರಿದಂತೆ ಜೆಡಿಎಸ್ ಕಾರ್ಯಕರ್ತರು, ಅಭಿಮಾನಿಗಳು, ಹಿತೈಷಿಗಳು ಹುಟ್ಟುಹಬ್ಬದ ಶುಭಾಶಯ ಕೋರಿದರು.

ಮೈಸೂರು,ಜು.9–ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡರು ಸರಳ, ಸಜ್ಜನ ವ್ಯಕ್ತಿಯಾಗಿದ್ದು ಜನ ಸಾಮಾನ್ಯರಿಗೆ ಸದಾ ಸೇವೆ ಮಾಡಿಕೊಂಡು ಎರಡು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಜನರ ಸೇವೆಯಲ್ಲಿ ಇನ್ನೂ ಹೆಚ್ಚು ತೊಡಗಿಸಿಕೊಳ್ಳಲು ಚಾಮುಂಡೇಶ್ವರಿ ತಾಯಿ ಆರೋಗ್ಯ, ಆಯುಷ್ಯ, ಶಕ್ತಿ ನೀಡಲಿ ಎಂದು ಮಾಜಿ ಸಚಿವ ಸಾ.ರಾ. ಮಹೇಶ್ ಹಾರೈಸಿದ್ದಾರೆ.

ಸಿ.ಎನ್.ಮಂಜೇಗೌಡರ 61ನೇ ಹುಟ್ಟುಹಬ್ಬದ ಅಂಗವಾಗಿ ಅವರನ್ನು ಅಭಿನಂದಿಸಿ ಮಾತನಾಡಿದ ಅವರು, ಈಗಾಗಲೇ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರು ಮಂಜೇಗೌಡರನ್ನು ಫೋನ್ ಕರೆ ಮಾಡಿ ಅಭಿನಂದಿಸಿದ್ದಾರೆ. ನಾವು ಸಹ ಪಕ್ಷದ ವತಿಯಿಂದ ಅಭಿನಂದಿಸುತ್ತಿದ್ದೇವೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಹೆಚ್ಚಾಗಿದೆ. ಮುಂದಿನ ದಿನಗಳಲ್ಲಿ ಜೆಡಿಎಸ್ ಮತ್ತು ಬಿಜೆಪಿಯ ಸಮ್ಮಿಶ್ರ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರಲಿದೆ. ಬೆಲೆ ಏರಿಕೆಯಿಂದ ಬೇಸತ್ತಿರುವ ಜನತೆ ಬದಲಾವಣೆಯನ್ನು ಬಯಸುತ್ತಿದ್ದಾರೆ. ಕುಮಾರಣ್ಣನವರು ಕೇಂದ್ರ ಸಚಿವರಾಗಿ ಯಶಸ್ವಿಯಾಗಿ ಕೆಲಸ ಮಾಡುತ್ತಿದ್ದಾರೆ. ನಿಖಿಲ್ ಕುಮಾರಸ್ವಾಮಿಯವರು ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದು, ರಾಜ್ಯಾದ್ಯಂತ ಪ್ರವಾಸ ಮಾಡುತ್ತಿದ್ದಾರೆ. ಅವರನ್ನು ಜೆ.ಡಿ.ಎಸ್. ರಾಜ್ಯಾಧ್ಯಕ್ಷರನ್ನಾಗಿ ಮಾಡಬೇಕು ಎಂದು ಕುಮಾರಣ್ಣನವರು, ದೇವೇಗೌಡರಿಗೆ ಒತ್ತಡ ಹಾಕುತ್ತಿದ್ದೇವೆ ಎಂದರು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡರು ಮಾತನಾಡಿ, ತಾಯಿ ಚಾಮುಂಡೇಶ್ವರಿಯ ಆಶೀರ್ವಾದದಿಂದ ಜೆ.ಡಿ.ಎಸ್. ಪಕ್ಷ ಹಾಗೂ ಸಾರಾ ಮಹೇಶಣ್ಣನ ಆಶೀರ್ವಾದದಿಂದ ನಾನು ಎಂಎಲ್‌ಸಿಯಾಗಿ ಜನರ ಸೇವೆ ಮಾಡುತ್ತಿದ್ದೇನೆ. ಎರಡೂ ಜಿಲ್ಲೆಗಳ ಮುಖಂಡರು ನನ್ನ ಮೇಲಿನ ಅತೀವ ಪ್ರೀತಿಯಿಂದ ಬಂದು ಶುಭ ಹಾರೈಸಿದ್ದಾರೆ. ದೇವೇಗೌಡರು ನಮಗೆ ಸ್ಫೂರ್ತಿಯಾಗಿದ್ದಾರೆ. ಹೆಚ್.ಡಿ.ಕುಮಾರಣ್ಣನವರು 2028ಕ್ಕೆ ಮುಖ್ಯಮಂತ್ರಿಯಾಗಬೇಕು ಎನ್ನುವುದು ನನ್ನ ಅಭಿಲಾಷೆ. ನನ್ನನ್ನು ಅಭಿನಂದಿಸಿದ ಎಲ್ಲರಿಗೂ ಧನ್ಯವಾದ ಸಲ್ಲಿಸುತ್ತೇನೆ ಎಂದರು. ಅಭಿಮಾನಿಗಳು, ಮಂಜೇಗೌಡರಿಗೆ ಸೇಬಿನ ಹಾರ, ದೊಡ್ಡ ಭಾರಿ ಹೂವಿನ ಹಾರ ಹಾಕಿ, ಪಟಾಕಿ ಸಿಡಿಸಿ, ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಅಶ್ವಿನ್‌ಕುಮಾರ್, ಡಾ.ನೇಮಿಚಂದ್ರ, ಜಿ.ಪಂ. ಮಾಜಿ ಅಧ್ಯಕ್ಷ ಸಿ.ಜೆ.ದ್ವಾರಕೀಶ್, ಮಾಜಿ ಮೇಯರ್ ಆರ್.ಲಿಂಗಪ್ಪ, ಪಾಲಿಕೆ ಮಾಜಿ ಸದಸ್ಯೆ ಪ್ರೇಮಾಶಂಕರೇಗೌಡ, ಮುಖಂಡರಾದ ಭರತ್ ಮಂಜೇಗೌಡ, ಅಪೆಕ್ಸ್ ಶ್ರೀನಿವಾಸ್, ನಿವೃತ್ತ ಯೋಧರ ಸಂಘದ ಜಿಲ್ಲಾ ಅಧ್ಯಕ್ಷ ದಿವಾಕರ್, ಲೋಕೇಶ್, ಅಮ್ಮಸಂತೋಷ್, ತಾಂಡವಪುರ ಶಿವಣ್ಣ, ಶ್ರೀರಾಂಪುರ ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ರಾಘವೇಂದ್ರ ಮಹದೇವ್, ನೂರಾರು ಅಭಿಮಾನಿಗಳು ಹಾಜರಿದ್ದರು.

ಪಾಲಿಕೆ ಸಿಬ್ಬಂದಿ ಪ್ರತಿಭಟನೆಯಲ್ಲಿ ಎಂಎಲ್ಸಿ ವಿವೇಕಾನಂದ ಭಾಗಿ; ಹೋರಾಟಕ್ಕೆ ಬೆಂಬಲ



ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರು ಮೈಸೂರು ಮಹಾನಗರ ಪಾಲಿಕೆ ಕಚೇರಿಗೆ ಬುಧವಾರ ಭೇಟಿ ನೀಡಿ, ಪಾಲಿಕೆ ಅಧಿಕಾರಿಗಳು, ಸಿಬ್ಬಂದಿ ನಡೆಸುತ್ತಿರುವ ಮುಷ್ಕರಕ್ಕೆ ಬೆಂಬಲ ಸೂಚಿಸಿದರು.

ಮೈಸೂರು, ಜು.9(ಜಿಎ)– ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಅವರು ಮೈಸೂರು ಮಹಾನಗರ ಪಾಲಿಕೆ ಕಚೇರಿಗೆ ಬುಧವಾರ ಭೇಟಿ ನೀಡಿ ಮಹಾನಗರ ಪಾಲಿಕೆ ಅಧಿಕಾರಿಗಳು, ಸಿಬ್ಬಂದಿ ನಡೆಸುತ್ತಿರುವ ಮುಷ್ಕರಕ್ಕೆ ಬೆಂಬಲ ಸೂಚಿಸಿದರು.

ರಾಜ್ಯದ ಎಲ್ಲ 10 ಮಹಾನಗರ ಪಾಲಿಕೆಗಳ ಅಧಿಕಾರಿಗಳು, ಸಿಬ್ಬಂದಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮುಷ್ಕರ ನಡೆಸುತ್ತಿದ್ದು, ಮುಷ್ಕರ ಎರಡನೇ ದಿನಕ್ಕೆ ಕಾಲಿಟ್ಟಿದೆ. ಈ ಹಿನ್ನೆಲೆಯಲ್ಲಿ ಬುಧವಾರ ಮುಷ್ಕರ ಸ್ಥಳಕ್ಕೆ ಭೇಟಿ ನೀಡಿದ ವಿವೇಕಾನಂದ ಅವರು, ಧರಣಿನಿರತ ಅಧಿಕಾರಿಗಳು ಮತ್ತು ಸಿಬ್ಬಂದಿಯೊಂದಿಗೆ ಮಾತನಾಡಿ, ಅವರ ಮನವಿಯನ್ನು ಆಲಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಹಾನಗರ ಪಾಲಿಕೆಗಳ ಅಧಿಕಾರಿಗಳು ನ್ಯಾಯಯುತವಾಗಿ ತಮಗೆ ಸಿಗಬೇಕಿರುವ ಸೌಲಭ್ಯಗಳನ್ನೇ ಕೇಳುತ್ತಿದ್ದಾರೆ. 7ನೇ ವೇತನ ಆಯೋಗದನ್ವಯ ಸಂಪೂರ್ಣ ಸಂಬಳ, ಕೆಜಿಐಡಿ ಮತ್ತು ಜಿಪಿಎಫ್ ಅಡಿಯಲ್ಲಿ ವಿಮಾ ಸೌಲಭ್ಯ, ಆರೋಗ್ಯ ವಿಮೆಗಳನ್ನು ಕೇಳುತ್ತಿದ್ದಾರೆ. ಈ ಎಲ್ಲ ಬೇಡಿಕೆಗಳೂ ಸರ್ಕಾರದ ಬೇರೆ ಇಲಾಖೆಗಳಿಗೆ ನೀಡುತ್ತಿರುವ ಸೌಲಭ್ಯಗಳೇ ಆಗಿವೆ. ಇವುಗಳನ್ನು ಮಹಾನಗರಪಾಲಿಕೆ ಅಧಿಕಾರಿಗಳು, ಸಿಬ್ಬಂದಿಗಳಿಗೆ ವಿಸ್ತರಿಸುವುದು ಸರ್ಕಾರಕ್ಕೆ ಕಠಿಣವಾಗಲಾರದು. ನಮ್ಮ ವ್ಯವಸ್ಥೆಯಲ್ಲಿ ಪೌರಕಾರ್ಮಿಕರೇ ಅತ್ಯಂತ ಮಹತ್ವದ ಕಾರ್ಯನಿರ್ವಹಿಸುವುದರಿಂದ ಪ್ರತಿಭಟನಾಕಾರರ ಬೇಡಿಕೆಗಳ ಸರ್ಕಾರ ಕೂಡಲೇ ಈಡೇರಿಸಬೇಕೆಂದು ಆಗ್ರಹಿಸಿದರು. ಈ ಬಗ್ಗೆ ನಾನು ವಿಧಾನಪರಿಷತ್ತಿನಲ್ಲೂ ಚರ್ಚೆ ಮಾಡುವುದಾಗಿ ವಿವೇಕಾನಂದ ಮಾಹಿತಿ ನೀಡಿದರು.

ಸಮಾಜ ಸೇವಕ ಚೌಡಪ್ಪರಿಗೆ ಶ್ರದ್ಧಾಂಜಲಿ...



ಮೈಸೂರಿನ ಕೆ.ಜಿ.ಕೊಪ್ಪಲು ಹಾಗೂ ಸುತ್ತಮುತ್ತಲಿನ ಬಡಾವಣೆಗಳಲ್ಲಿ ಮೃತದೇಹದ ವಿಧಿ ವಿಧಾನಗಳನ್ನು ನೆರವೇರಿಸುತ್ತಿದ್ದ ಸಮಾಜ ಸೇವಕ ಚೌಡಪ್ಪ ಅವರಿಗೆ ಜಯನಗರದ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಕೆ.ಜಿ.ಕೊಪ್ಪಲಿನ ಮುಖಂಡರಿಂದ ಶ್ರದ್ಧಾಂಜಲಿ ಅರ್ಪಿಸಲಾಯಿತು. ಈ ವೇಳೆ ಶಾಸಕ ಕೆ.ಹರೀಶ್‌ಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಮೇಯರ್ ಆರ್.ಲಿಂಗಪ್ಪ, ನಗರಪಾಲಿಕೆ ಮಾಜಿ ಸದಸ್ಯ ಎನ್.ಶಿವಕುಮಾರ್, ಉದ್ಯಮಿ ಪಿ.ನಾಗೇಂದ್ರ, ಕೆ.ಜಿ.ಕೊಪ್ಪಲಿನ ಚಾಮುಂಡೇಶ್ವರಿ ದೇವಸ್ಥಾನದ ಅಧ್ಯಕ್ಷ ಗಿರೀಶ್ ಡಿ.ಗೌಡ, ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಮುಖಂಡರಾದ ರಾಕೇಶ್‌ಗೌಡ, ಪೈಲ್ವಾನ್ ಮಂಜುನಾಥ್, ಈ.ಚೇತನ್‌ಕುಮಾರ್, ಮೋಹನ್‌ಕುಮಾರ್, ವೆಂಕಟಣ್ಣ, ಚಿಕ್ಕಯ್ಯ, ಭೀಮಣ್ಣ, ಮಾದಪ್ಪ, ಸೊಸೈಟಿ ರಾಜು, ರಮೇಶ್, ನಾಗಣ್ಣ, ರಾಮೇಗೌಡ, ಕೆಂಪಣ್ಣ ಇನ್ನಿತರರು ಉಪಸ್ಥಿತರಿದ್ದರು.

ರಾಜ್ಯದ ಆರು ನೀರಾವರಿ ಯೋಜನೆಗೆ ಒಟ್ಟು 11,122.76 ಕೋಟಿ ಅನುದಾನಕ್ಕೆ ಕೇಂದ್ರಕ್ಕೆ ಮನವಿ

ಉಪಮುಖ್ಯಮಂತ್ರಿಗಳೂ ಆದ ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಮಾಹಿತಿ

ಬೆಂಗಳೂರು,ಜು.9(ಕೆಎಂಶಿ)–ರಾಜ್ಯದ 6 ನೀರಾವರಿ ಯೋಜನೆಗಳಿಗೆ ಒಟ್ಟು 11,122.76 ಕೋಟಿ ರೂ. ಅನುದಾನಕ್ಕಾಗಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಕುಡಿಯುವ ನೀರು ಉದ್ದೇಶದ ಎತ್ತಿನಹೊಳೆ ಯೋಜನೆಗೆ ಶೇ.25ರಷ್ಟು ಆರ್ಥಿಕ ಸಹಾಯ, ಕಳಸಾ–ಬಂಡೂರಿ ಯೋಜನೆ, ಕೃಷ್ಣಾ ನದಿ ನೀರು ವಿಚಾರ ಕೇಂದ್ರ ಜಲಶಕ್ತಿ ಹಾಗೂ ಪರಿಸರ ಸಚಿವರೊಂದಿಗೆ ಚರ್ಚಿಸಲಾಗಿದೆ.

ಕರ್ನಾಟಕದ ಆರು ನೀರಾವರಿ ಯೋಜನೆಗಳಾದ ಸೊನ್ನತಿ ಏತ ನೀರಾವರಿ ಯೋಜನೆಗೆ 804.66 ಕೋಟಿ ರೂ., ಯುಕೆಪಿ ಇಂಡಿ ಶಾಖಾ ಕಾಲುವೆಗೆ 2,666.70 ಕೋಟಿ ರೂ., ಮಲಪ್ರಭಾ ಕಾಲುವೆ ಮೂರನೇ ಹಂತಕ್ಕೆ 3000 ಕೋಟಿ ರೂ., ಘಟಪ್ರಭಾ ಬಲದಂಡೆ ಕಾಲುವೆ ಮತ್ತು ಚಿಕ್ಕೋಡಿ ಶಾಖಾ ನಾಲೆಗೆ 1,444.42 ಕೋಟಿ ರೂ., ಬೆಣ್ಣೆಹಳ್ಳ ಪ್ರವಾಹ ನಿಯಂತ್ರಣ ಹಾಗೂ ನಿರ್ವಹಣೆ ಯೋಜನೆಗೆ 1,610 ಕೋಟಿ ರೂ. ಸೇರಿದಂತೆ ಒಟ್ಟು 11,122.76 ಕೋಟಿ ರೂ. ಅನುದಾನಕ್ಕಾಗಿ ಮನವಿ ಸಲ್ಲಿಸಿದ್ದೇವೆ ಎಂದರು.

ಎತ್ತಿನಹೊಳೆ ಯೋಜನೆ ಹಾದು ಹೋಗುವ ಕಡೆ ಕಂದಾಯ ಭೂಮಿ ಹೊಂದಿದ್ದ ರೈತರಿಗೆ ಪೋಡಿ ವಿತರಣೆ ಮಾಡಿ ಪರಿಹಾರವನ್ನೂ ನೀಡಲಾಗಿತ್ತು. ಆದರೆ, ಅರಣ್ಯ ಇಲಾಖೆ ತಮ್ಮ ಭೂಮಿ ಎಂಬ ತಕರಾರು ತೆಗೆದಿದೆ, ಅವರು ಕ್ಲಿಯರೆನ್ಸ್ ಪ್ರಮಾಣಪತ್ರ ನೀಡಬೇಕಿತ್ತು, ಈಗಾಗಲೇ ಕೇಂದ್ರ ಸಚಿವರನ್ನು ಮೂರು ಬಾರಿ ಭೇಟಿ ಮಾಡಿದ್ದರೂ ಇನ್ನೂ ಒಪ್ಪಿಗೆ ಸಿಕ್ಕಿಲ್ಲ, ಸದ್ಯದಲ್ಲೇ ಬಗೆಹರಿಸುವುದಾಗಿ ಕೇಂದ್ರ ಸಚಿವರು ತಿಳಿಸಿದ್ದಾರೆ.

ಭದ್ರಾ ಮೇಲ್ದಂಡೆ ಯೋಜನೆಗೂ ಅನುದಾನ ಕೇಳಿದ್ದೇವೆ, ಕೇಂದ್ರ ಸರ್ಕಾರಕ್ಕೆ ಪರಿಷ್ಕೃತ ಅಂದಾಜು ಪಟ್ಟಿ ಸಲ್ಲಿಸಿದ್ದೇವೆ, 5,300 ಕೋಟಿ ರೂ.ಗಿಂತ ಹೆಚ್ಚು ಅನುದಾನದ ಪರಿಷ್ಕೃತ ಪಟ್ಟಿ ಕಳುಹಿಸಲಾಗಿದೆ, ಈಗಾಗಲೇ 10,604 ಕೋಟಿ ರೂ. ಖರ್ಚು ಮಾಡಿದ್ದೇವೆ ಎಂದರು.



ಅನುದಾನದ ಬಗ್ಗೆ ಕೇಂದ್ರ ಸರ್ಕಾರವನ್ನೇ ಕೇಳಬೇಕು, ಯೋಜನೆಗೆ ಎಷ್ಟು ಖರ್ಚಾಗಿದೆ ಎಂಬ ಮಾಹಿತಿ ಕೇಳಿದ್ದರು, ಅದನ್ನೂ ನೀಡಲಾಗಿದೆ.

ಡಿಪಿಆರ್ ಸಲ್ಲಿಸಿದ ನಂತರ 5,300 ಕೋಟಿ ರೂ. ಘೋಷಣೆ ಮಾಡಿದರು, ಹಣ ಬಿಡುಗಡೆ ವಿಳಂಬ ಆಗುತ್ತಿದೆ, ಏನು ಮಾಡುವುದು ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಬಂದುಬಿಟ್ಟಿದೆಯಲ್ಲ ಎಂದು ಡಿ.ಕೆ.ಶಿವಕುಮಾರ್ ಮಾರ್ಮಿಕವಾಗಿ ಉತ್ತರಿಸಿದರು.

ಕರ್ನಾಟಕ ಭಾಗದಲ್ಲಿ ಗೋವಾದ ವಿದ್ಯುತ್ ಮಾರ್ಗಕ್ಕೆ ತಕರಾರು ತೆಗೆದಿದ್ದೇವೆ, ಅವರು ನಮಗೆ ಸಹಕಾರ ನೀಡಿದರೆ ನಾವು ಅವರಿಗೆ ನೀಡುತ್ತೇವೆ ಎಂಬುದಾಗಿ ತಿಳಿಸಿದ್ದು, ಒಂದು ವಾರದಲ್ಲಿ ಅಭಿಪ್ರಾಯ ತಿಳಿಸುವುದಾಗಿ ಕೇಂದ್ರ ಪರಿಸರ ಸಚಿವರು ಭರವಸೆ ನೀಡಿದ್ದಾರೆ, ಸಂಸತ್ ಅಧಿವೇಶನದೊಳಗೆ ಪುನಃ ಮತ್ತೆ ಭೇಟಿ ಮಾಡಲಿದ್ದೇವೆ. ಬಿಜೆಪಿ ಸರ್ಕಾರವಿದ್ದಾಗ ಕಳಸಾ ಬಂಡೂರಿ ಕಾಮಗಾರಿ ನಡೆಸಬಹುದು ಎಂದಿದ್ದರು, ನಾವು ಟೆಂಡರ್ ಕರೆದಿದ್ದೆವು, ಆದರೆ, ಗೋವಾ ಸರ್ಕಾರ ಶೋಕಾಸ್ ನೋಟಿಸ್ ನೀಡಿದೆ, ನಮಗೆ ಶೋಕಾಸ್ ನೋಟಿಸ್ ನೀಡಲು ನೀವು ಯಾರು ಎಂಬುದಾಗಿ ತಿಳಿಸಿದ್ದು, ವ್ಯಾಜ್ಯ ನ್ಯಾಯಾಲಯದಲ್ಲಿದೆ.

ನಮ್ಮ ಜಾಗದಲ್ಲಿ ಕಾಮಗಾರಿ ನಡೆಸುತ್ತೇವೆ, ಈ ವಿಚಾರ ಅವರಿಗೆ ತಿಳಿಹೇಳಿ ಎಂಬುದಾಗಿ ಸಚಿವ ಪ್ರಹ್ಲಾದ್ ಜೋಶಿ ಸಹಾ ಮಾತನಾಡಿದ್ದಾರೆಂದು ಕೇಂದ್ರ ಸಚಿವರು ಮಾಹಿತಿ ನೀಡಿದರು.

ನಮ್ಮ ಅರಣ್ಯ ಭೂಮಿ ಬಗ್ಗೆ ಕೇಂದ್ರ ಸರ್ಕಾರ ಕೇಳುವ ಹಕ್ಕಿದೆ, ಗೋವಾ ಸೂಚನೆ ನೀಡಲು ಯಾರು ಎಂದರು. ಮೇಕೆದಾಟು ಯೋಜನೆಗೆ ಕೇಂದ್ರ ಸರ್ಕಾರ ಸಿಡಬ್ಲ್ಯೂಸಿಗೆ ಅಪ್ರೇಸಲ್ ವರದಿ ನೀಡಿ, ಡಿಪಿಆರ್‌ಗೆ ಅನುಮತಿ ನೀಡಬೇಕು, ಈ ಯೋಜನೆಯಿಂದ ತಮಿಳುನಾಡಿಗೆ ಹೆಚ್ಚು ಉಪಯೋಗ ಎಂಬುದನ್ನು ಕೇಂದ್ರಕ್ಕೆ ತಿಳಿಸಿದ್ದು, ಅವರನ್ನು ಕರೆಸಿ ಮಾತನಾಡುವುದಾಗಿ ಸಚಿವರು ಭರವಸೆ ನೀಡಿದ್ದಾರೆ.

ಕೃಷ್ಣಾ ನದಿ ನೀರಿನ ವಿಚಾರ ಸಭೆ ಇದ್ದಕ್ಕಿದ್ದಂತೆ ರದ್ದಾಯಿತು, ಜುಲೈನಲ್ಲಿ ಮತ್ತೊಮ್ಮೆ ಸಭೆ ಕರೆಯುವುದಾಗಿ ಜಲಶಕ್ತಿ ಸಚಿವರು ತಿಳಿಸಿದ್ದಾರೆ.

ಆಲಮಟ್ಟಿ ಅಣೆಕಟ್ಟೆ ಎತ್ತರ ಹೆಚ್ಚಳದ ಬಗ್ಗೆ ತೀರ್ಮಾನವಾಗಿದ್ದರೂ 10 ವರ್ಷದಿಂದ ನಮ್ಮ ಪಾಲಿನ ನೀರು ಸಿಗದೇ ಕಾಯುತ್ತಿದ್ದೇವೆ, 1.40 ಲಕ್ಷ ಎಕರೆಗೆ ನೀರಾವರಿ ನೀಡಲು ತಯಾರಿ ಮಾಡಿಕೊಂಡಿದ್ದೇವೆ, ಒಪ್ಪಂದವೂ ಆಗಿದೆ, ಕೇಂದ್ರದಿಂದ ಗೆಜೆಟ್ ನೋಟಿಫಿಕೇಷನ್ ಮಾತ್ರ ಬಾಕಿ ಇದೆ. ನಮ್ಮ ಪಾಲಿನ ನೀರಿಗೆ ಮಹಾರಾಷ್ಟ್ರ ಏಕೆ ತಕರಾರು ತೆಗೆಯಬೇಕು, ಮಹಾರಾಷ್ಟ್ರ, ಆಂಧ್ರ, ತೆಲಂಗಾಣ ಒಳಗೊಂಡ ಸಭೆಯನ್ನು ಸಂಸತ್ ಅಧಿವೇಶನದೊಳಗೆ ಕರೆಯುವುದಾಗಿ ತಿಳಿಸಿದ್ದಾರೆ.


ಕೇಂದ್ರ ಸಚಿವರ ಭೇಟಿ ವೇಳೆ ಸಚಿವ ವಿ.ಸೋಮಣ್ಣ ಜೊತೆಗಿದ್ದರು. ಸಚಿವ ಪ್ರಹ್ಲಾದ್ ಜೋಶಿ ಅವರನ್ನೂ ಭೇಟಿ ಮಾಡಲಾಯಿತು ಎಂದು ತಿಳಿಸಿದರು.

ಇಂದು ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಜು.9(ಎಂಟಿವೈ)–ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕ ಅಧ್ಯಕ್ಷ ಆರೀಫ್ ಪಾಷ ಅವರ ಜನ್ಮದಿನದ ಅಂಗವಾಗಿ ನಾಳೆ (ಜು.10) ಬೆಳಗ್ಗೆ 11ಕ್ಕೆ ಆರೀಫ್ ಪಾಷಾ ಸ್ನೇಹ ಬಳಗದಿಂದ ಭಾರತ್‌ನಗರದ ಸಾತಗಳ್ಳಿ ಬಸ್ ಡಿಪೋ ಸಮೀಪ ಉಚಿತ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗಿದೆ ಎಂದು ಅಖಿಲ ಕರ್ನಾಟಕ ಸಿದ್ದರಾಮಯ್ಯ ಬ್ರಿಗೇಡ್ ಅಧ್ಯಕ್ಷ ಹಿನಕಲ್ ಉದಯ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀನಿವಾಸ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಸಹಯೋಗದಲ್ಲಿ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ತನ್ವೀರ್ ಸೇಠ್ ವಹಿಸಲಿದ್ದು, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಜಿ.ಪಂ. ಮಾಜಿ ಅಧ್ಯಕ್ಷ ಕೆ.ಮರಿಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಅರುಣ್ ಸೇರಿದಂತೆ ಇನ್ನಿತರರು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಶ್ರೀನಿವಾಸ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವ್ಯವಸ್ಥಾಪಕ ಗಂಧನಹಳ್ಳಿ ವೆಂಕಟೇಶ್, ಮುಖಂಡರಾದ ಅಜ್ಮಲ್ ಪಾಷಾ, ಮೋಹನ್‌ಕುಮಾರ್ ಉಪಸ್ಥಿತರಿದ್ದರು.

ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಸನ್ಮಾನ...



ಮೈಸೂರಿನ ಹಿನಕಲ್ ಗ್ರಾಮದ ಶ್ರೀ ಚಾಮುಂಡೇಶ್ವರಿ ವಿವಿಧೋದ್ದೇಶ ಸಹಕಾರ ಸಂಘದ ವತಿಯಿಂದ ಎಂಸಿಡಿಸಿಸಿ ಬ್ಯಾಂಕಿನ ನಿರ್ದೇಶಕರಾಗಿ ಆಯ್ಕೆಯಾದ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ರಾಜ್‌ಕುಮಾರ್, ಉಪಾಧ್ಯಕ್ಷ ಕುಮಾರ್, ನಿರ್ದೇಶಕರಾದ ಶ್ರೀನಿವಾಸ್, ಪ್ರಸನ್ನ, ಮಹದೇವ, ಹರೀಶ, ಹಿನಕಲ್ ಗಣೇಶ್ ಉಪಸ್ಥಿತರಿದ್ದರು.

ಇಂದು ಭಗೀರಥ ಶತದಿನೋತ್ಸವ

ಮೈಸೂರು, ಜು.9(ಎಂಟಿವೈ)–ನಟ ಎಸ್.ಜಯಪ್ರಕಾಶ್(ಜೆಪಿ) ಅಭಿನಯದ ಭಗೀರಥ ಸಿನಿಮಾ ಶತದಿನೋತ್ಸವ ಪೂರೈಸಿರುವ ಹಿನ್ನೆಲೆಯಲ್ಲಿ ಮೈಸೂರಿನ ಪ್ರಭಾ ಥಿಯೇಟರ್‌ನಲ್ಲಿ ನಾಳೆ(ಜು.10) ಮಧ್ಯಾಹ್ನ 12ಕ್ಕೆ ಜೆಪಿ ಅಭಿಮಾನಿಗಳ ಬಳಗದಿಂದ ಅಭಿಮಾನಿಗಳಿಗೆ ಸಿಹಿ ವಿತರಣೆ ಮಾಡಲಾಗುವುದು ಎಂದು ಕರ್ನಾಟಕ ಸೇನಾಪಡೆ ಅಧ್ಯಕ್ಷ ತೇಜೇಶ್ ಲೋಕೇಶ್‌ಗೌಡ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿತ್ರವು ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತಿದ್ದು, 155ನೇ ದಿನದತ್ತ ದಾಪುಗಾಲಿಡುತ್ತಿದೆ. ಚಿತ್ರದ ಎಲ್ಲಾ ಕಲಾವಿದರು, ತಾಂತ್ರಿಕ ಸಿಬ್ಬಂದಿಗೆ ಅಭಿನಂದನೆ ಸಲ್ಲಿಸಲಾಗುವುದು ಎಂದರು. ಗೋಷ್ಠಿಯಲ್ಲಿ ಸೇನಾಪಡೆ ಉಪಾಧ್ಯಕ್ಷ ಹನುಮಂತಯ್ಯ, ಅಭಿಮಾನಿಗಳ ಬಳಗದ ಉಪಾಧ್ಯಕ್ಷರಾದ ಹನುಮಂತೇಗೌಡ, ರಘು ಆಚಾರ್, ಬಿಜೆಪಿ ಮುಖಂಡ ವಿಜೇಂದ್ರಕುಮಾರ್ ಇದ್ದರು.

ನಕಲಿ ಪ್ರಮಾಣ ಪತ್ರ ನೀಡಿ ಉದ್ಯೋಗ: ಆರೋಗ್ಯ ಇಲಾಖೆಗೆ ದೂರು

ಮೈಸೂರು,ಜು.9(ಎಂಟಿವೈ)–ಆರೋಗ್ಯ ಇಲಾಖೆಗೆ ನಕಲಿ ಪ್ರಮಾಣ ಪತ್ರ ನೀಡಿ ಮಂಗಳೂರಿನ ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ ಕ್ಷ–ಕಿರಣ ತಂತ್ರಜ್ಞ ಹುದ್ದೆಯಲ್ಲಿರುವ ಯೋಗೇಶ್ ಕೆ.ದೇವಾಡಿಗ ಎಂಬುವರನ್ನು ವಜಾಗೊಳಿಸಿ ಕ್ರಮ ಕೈಗೊಳ್ಳುವಂತೆ ದೂರು ನೀಡಿರುವುದಾಗಿ ವಿಜಯನಗರದ ನಿವಾಸಿ ಆರ್.ಎನ್.ಸತ್ಯನಾರಾಯಣ ತಿಳಿಸಿದ್ದಾರೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯೋಗೇಶ್ ಕೆ.ದೇವಾಡಿಗ 1995ರಲ್ಲಿ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿ 1996ರ ಜೂನ್‌ನಲ್ಲಿ ಕೇರಳದ ಸಂಸ್ಥೆಯಲ್ಲಿ ಎಕ್ಸ್–ರೇ ಟೆಕ್ನಿಷಿಯನ್ ಕೋರ್ಸ್ ಪಾಸಾಗಿರುವುದಾಗಿ ನಕಲಿ ಪ್ರಮಾಣ ಪತ್ರ ನೀಡಿ, ಕ್ಷ–ಕಿರಣ ತಂತ್ರಜ್ಞರಾಗಿ ಆಯ್ಕೆಯಾಗಿ ಮಂಗಳೂರಿನ ವೆನ್‌ಲಾಕ್ ಜಿಲ್ಲಾಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಆರ್‌ಟಿಐ ಅನ್ವಯ ದಾಖಲೆಗಳನ್ನು ಪಡೆದು, ಅವುಗಳೊಂದಿಗೆ ದೂರು ಸಲ್ಲಿಸಿರುವುದಾಗಿ ತಿಳಿಸಿದರು.

ಜು.12, ರಮಾಗೋವಿಂದ ರಂಗಮಂದಿರದಲ್ಲಿ ನೃತ್ಯಾರಾಧನೆ

ಮೈಸೂರು,ಜು.9(ಎಂಟಿವೈ)–ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಜು.12ರಂದು ಸಂಜೆ 4 ಗಂಟೆಗೆ ಕಲಾವಿದೆ ಇಂಚರ ಮೊಟ್ಟನ ಅವರಿಂದ ನೃತ್ಯಾರಾಧನೆ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಕಲಾ ಗಂಗೋತ್ರಿ ಫೌಂಡೇಶನ್ ಸಂಸ್ಥಾಪಕಿ, ನೃತ್ಯ ಗುರು ಅಖಿಲಾ ಚೇತನ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಲಾ ಗಂಗೋತ್ರಿ ಫೌಂಡೇಶನ್ ನೃತ್ಯಾರಾಧನೆ ಕಾರ್ಯಕ್ರಮ ಆಯೋಜಿಸಲಾಗಿದ್ದು, ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಂಸದ ಯದುವೀರ ಒಡೆಯರ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸರ್ವೇಶ್ವರ ನೃತ್ಯ ಕಲಾಮಂದಿರದ ವಿದುಷಿ ಪಂಕಜಾ ರಾಮಕೃಷ್ಣ ವಹಿಸಲಿದ್ದಾರೆ. ಕಲಾವಿದೆ ಇಂಚರ ಉಷಾ ಗಣಪತಿ ಹಾಗೂ ಸುಬ್ರಮಣಿ ಮೊಟ್ಟನ ದಂಪತಿ ಪುತ್ರಿಯಾಗಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಲಾವಿದೆ ಇಂಚರ ಮೊಟ್ಟನ ಉಪಸ್ಥಿತರಿದ್ದರು.

ದೇಶ - ವಿದೇಶ

ನಿರ್ದಿಷ್ಟ ರಾಷ್ಟ್ರಗಳ ಪ್ರಜೆಗಳಿಗೆ ಗೋಲ್ಡನ್ ವೀಸಾ: ವರದಿ ತಳ್ಳಿ ಹಾಕಿದ ಯುಎಇ

ದುಬೈ: ನಿರ್ದಿಷ್ಟ ರಾಷ್ಟ್ರಗಳ ಪ್ರಜೆಗಳಿಗೆ ಜೀವಮಾನ ಗೋಲ್ಡನ್ ವೀಸಾ ನೀಡಲಿದೆ ಎಂಬ ಮಾಧ್ಯಮಗಳಲ್ಲಿನ ವರದಿಗಳನ್ನು ಯುಎಇ ಸರ್ಕಾರ ತಳ್ಳಿಹಾಕಿದೆ. ಗೋಲ್ಡನ್ ವೀಸಾ ವಿತರಣೆಗೆ ಸಂಬಂಧಿಸಿ ಅರ್ಜಿಗಳ ಪರಿಶೀಲನೆ ಹಾಗೂ ವಿಲೇವಾರಿ ಪ್ರಕ್ರಿಯೆಗೆ ಯುಎಇ ಅಧಿಕಾರಿಗಳು ಚಾಲನೆ ನೀಡಿದ್ದಾರೆ ಎಂಬುದಾಗಿ ಕೆಲ ಮಾಧ್ಯಮಗಳು ವರದಿ ಮಾಡಿವೆ.



ಇಂತಹ ಯಾವ ಪ್ರಕ್ರಿಯೆಯೂ ನಡೆಯುತ್ತಿಲ್ಲ. ಈ ಪ್ರಕ್ರಿಯೆ ಮೂಲಕ ಗೋಲ್ಡನ್ ವೀಸಾ ಪಡೆಯಬಹುದು ಎಂದು ತಪ್ಪಾಗಿ ಅರ್ಥೈಸಲಾಗಿದೆ ಎಂದು ಯುಎಇ ಫೆಡರಲ್ ಪೌರತ್ವ, ಕಸ್ಟಮ್ಸ್ ಮತ್ತು ಬಂದರು ಭದ್ರತಾ ಪ್ರಾಧಿಕಾರ (ಐಸಿಪಿ) ತಿಳಿಸಿದೆ. ಗೋಲ್ಡನ್ ವೀಸಾ ಪಡೆಯಲು ಕೆಲವು ನಿಬಂಧನೆ, ಷರತ್ತು ಮತ್ತು ಕಾನೂನುಗಳಿದ್ದು, ಈ ಕುರಿತ ಎಲ್ಲ ಅರ್ಜಿಗಳನ್ನು ಸರ್ಕಾರವೇ ನಿರ್ವಹಿಸುತ್ತದೆ. ಅದಕ್ಕಾಗಿ ಯಾವುದೇ ಮಧ್ಯವರ್ತಿಗಳು ಇಲ್ಲ ಎಂದೂ ಹೇಳಿದೆ.

ಅಂತರಿಕ್ಷದಲ್ಲಿ ಮೆಂತ್ಯ, ಹೆಸರುಕಾಳು ಮೊಳಕೆ: ಶುಕ್ಲಾ ಯಶಸ್ವಿ ಪ್ರಯೋಗ

ನವದೆಹಲಿ: ಆಕ್ಸಿಯಂ–4 ಮಿಷನ್ ಅಡಿ ವಿವಿಧ ಪ್ರಯೋಗಗಳನ್ನು ನಡೆಸಲು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿರುವ ಭಾರತ ಮೂಲದ ಗಗನಯಾನಿ ಶುಭಾಂಶು ಶುಕ್ಲಾ, ಅಂತರಿಕ್ಷದಲ್ಲಿ ಹೆಸರುಕಾಳು ಮತ್ತು ಮೆಂತ್ಯ ಬೀಜಗಳನ್ನು ನೆಟ್ಟು ಮೊಳಕೆ ಹೊಡೆಸುವ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಿದ್ದಾರೆ. ಈ ಸಂಬಂಧಿತ ಚಿತ್ರಗಳನ್ನು ಅವರು ಹಂಚಿಕೊಂಡಿದ್ದಾರೆ.



ಬೀಜಗಳ ಮೊಳಕೆಯೊಡೆಯುವಿಕೆ ಮತ್ತು ಸಸ್ಯ ಬೆಳವಣಿಗೆಗೆ ಸೂಕ್ಷ್ಮ ಗುರುತ್ವಾಕರ್ಷಣೆಯು ಹೇಗೆ ಪ್ರಭಾವ ಬೀರುತ್ತದೆ ಎಂಬುದರ ಕುರಿತಾದ ಅಧ್ಯಯನದ ಭಾಗವಾಗಿದೆ. ಶುಕ್ಲಾ ಮತ್ತು ಅವರ ಸಹವರ್ತಿಗಳಾದ ಆಕ್ಸಿಯಂ–4 ಗಗನಯಾನಿಗಳು ಕಕ್ಷೆಯ ಪ್ರಯೋಗಾಲಯದಲ್ಲಿ 12 ದಿನಗಳನ್ನು ಕಳೆದಿದ್ದಾರೆ. ಫ್ಲಾರಿಡಾ ಕರಾವಳಿಯ ಹವಾಮಾನ ಪರಿಸ್ಥಿತಿಗಳ ಆಧಾರದ ಮೇಲೆ ಜುಲೈ 10ರ ನಂತರ ಯಾವುದೇ ದಿನ ಅವರು ಭೂಮಿಗೆ ಮರಳುವ ನಿರೀಕ್ಷೆಯಿದೆ. ಬಾಹ್ಯಾಕಾಶ ನಿಲ್ದಾಣದಿಂದ ಆಕ್ಸಿಯಂ–4 ಮಿಷನ್ ನೌಕೆಯನ್ನು ವಾಪಸ್ ಕರೆಸಿಕೊಳ್ಳುವ ದಿನಾಂಕವನ್ನು ನಾಸಾ ಇನ್ನೂ ಘೋಷಿಸಿಲ್ಲ.

ಉಕ್ರೇನ್ ಮೇಲೆ 728 ಡ್ರೋನ್ ಬಳಸಿ ರಷ್ಯಾ ದಾಳಿ: 8 ಸಾವು

ಕೀವ್: ಉಕ್ರೇನ್ ಮೇಲಿನ ದಾಳಿ ತೀವ್ರಗೊಳಿಸಿರುವ ರಷ್ಯಾ, ಮಂಗಳವಾರ ರಾತ್ರಿ ಮದ್ದುಗುಂಡು ಸಜ್ಜಿತವಾದ ಬರೋಬ್ಬರಿ 728 ಡ್ರೋನ್‌ಗಳು ಹಾಗೂ 13 ಕ್ಷಿಪಣಿಗಳನ್ನು ಬಳಸಿ ದಾಳಿ ನಡೆಸಿದೆ. ಈ ದಾಳಿಯಿಂದಾಗಿ 8 ಜನರು ಮೃತಪಟ್ಟಿದ್ದಾರೆ ಎಂದು ಉಕ್ರೇನ್ ಬುಧವಾರ ಹೇಳಿದೆ.



ವಾಯವ್ಯ ಉಕ್ರೇನ್‌ನ ಲುಟ್ಸ್ಕ್ ನಗರ, ನೆರೆಯ ರಾಷ್ಟ್ರಗಳಾದ ಪೋಲೆಂಡ್ ಮತ್ತು ಬೆಲರೂಸ್ ಗಡಿಗೆ ಹೊಂದಿಕೊಂಡಿರುವ ಪ್ರದೇಶಗಳು ತೀವ್ರ ಹಾನಿಗೊಳಗಾಗಿವೆ. ಇವುಗಳ ಹೊರತಾಗಿ 10 ಪ್ರದೇಶಗಳೂ ದಾಳಿಗೆ ಒಳಗಾಗಿವೆ ಎಂದು ಉಕ್ರೇನ್ ವಾಯುಪಡೆ ತಿಳಿಸಿದೆ. ಲುಟ್ಸ್ಕ್ ನಗರದಲ್ಲಿ ಉಕ್ರೇನ್ ಸೇನಾಪಡೆಗಳ ನೆಲೆಗಳಿವೆ. ಸರಕು ಸಾಗಣೆ ವಿಮಾನಗಳು ಹಾಗೂ ಯುದ್ಧ ವಿಮಾನಗಳ ದೈನಂದಿನ ತರಬೇತಿಗೆ ಈ ನೆಲೆ ಬಳಸಲಾಗುತ್ತದೆ. ರಷ್ಯಾದ 296 ಡ್ರೋನ್ ಹಾಗೂ 7 ಕ್ಷಿಪಣಿಗಳನ್ನು ಹೊಡೆದುರುಳಿಸಲಾಗಿದೆ ಎಂದೂ ಉಕ್ರೇನ್ ಹೇಳಿದೆ.

ಹಳಸಿದ ಆಹಾರ ನೀಡಿದ್ದಕ್ಕೆ ಕ್ಯಾಂಟೀನ್ ಸಿಬ್ಬಂದಿಗೆ ಥಳಿಸಿದ ಶಿವಸೇನೆ ಶಾಸಕ

ಮುಂಬಯಿ: ಹಳಸಿದ ಆಹಾರ ನೀಡಲಾಗಿದೆ ಎಂದು ಆರೋಪಿಸಿ ಆಡಳಿತಾರೂಢ ಶಿವಸೇನೆಯ ಶಾಸಕ ಸಂಜಯ್ ಗಾಯಕ್ವಾಡ್ ಮುಂಬೈ ಶಾಸಕರ ಹಾಸ್ಟೆಲ್ ಕ್ಯಾಂಟೀನ್‌ನ ಉದ್ಯೋಗಿಯೊಬ್ಬರಿಗೆ ಥಳಿಸಿರುವ ಆರೋಪ ಕೇಳಿಬಂದಿದೆ. ಘಟನೆಯ ವಿಡಿಯೊ ಹರಿದಾಡಿದ್ದು, ಅವರ ನಡವಳಿಕೆಯನ್ನು ವಿಪಕ್ಷಗಳು ಟೀಕಿಸಿವೆ. ಮಂಗಳವಾರ ರಾತ್ರಿ ಘಟನೆ ನಡೆದಿದ್ದು, ತನಗೆ ಕಳಪೆ ಆಹಾರ ನೀಡಲಾಗಿದೆ.




ಇದರ ಬಗ್ಗೆ ಮಹಾರಾಷ್ಟ್ರ ವಿಧಾನಸಭೆ ಅಧಿವೇಶನದಲ್ಲಿ ಪ್ರಸ್ತಾಪಿಸುವುದಾಗಿ ಹೇಳಿದ್ದಾರೆ. ಕ್ಯಾಂಟೀನ್ ನಿರ್ವಾಹಕರನ್ನು ಗದರಿಸಿರುವುದು ವಿಡಿಯೊದಲ್ಲಿ ದಾಖಲಾಗಿದ್ದು, ಬಿಲ್ ಪಾವತಿಸಲು ನಿರಾಕರಿಸಿ, ಕೌಂಟರ್‌ನಲ್ಲಿ ಕೂತಿದ್ದ ಸಿಬ್ಬಂದಿಯನ್ನು ಥಳಿಸಿದ್ದಾರೆ.

ಶಿವಸೇನೆ (ಉದ್ಧವ್ ಠಾಕ್ರೆ) ಬಣದ ರಾಜ್ಯಸಭಾ ಸಂಸದೆ ಪ್ರಿಯಾಂಕಾ ಚತುರ್ವೇದಿ ಶಾಸಕನ ಕೃತ್ಯವನ್ನು ಖಂಡಿಸಿದ್ದು, ಕಳೆದ ವರ್ಷ ಅವರು ರಾಹುಲ್ ಗಾಂಧಿ ನಾಲಗೆಯನ್ನು ಕತ್ತರಿಸುವವರಿಗೆ 11 ಲಕ್ಷ ಘೋಷಿಸಿದ್ದನ್ನು ನೆನಪಿಸಿಕೊಂಡಿದ್ದಾರೆ. ಈಗ ಈ ವ್ಯಕ್ತಿ ಬಡ, ಅಸಹಾಯಕ ಕ್ಯಾಂಟೀನ್ ನೌಕರನನ್ನು ಥಳಿಸಿದ್ದಾರೆ ಎಂದು ಹೇಳಿದ್ದಾರೆ.

ಎಕ್ಸ್ ಸಿಇಒ ಹುದ್ದೆಗೆ ಲಿಂಡಾ ಯಾಕಾರಿನೊ ರಾಜೀನಾಮೆ

ವಾಷಿಂಗ್ಟನ್: ಸಾಮಾಜಿಕ ಜಾಲತಾಣ ಎಕ್ಸ್‌ನ (ಟ್ವಿಟರ್) ಸಿಇಒ ಹುದ್ದೆಗೆ ಲಿಂಡಾ ಯಾಕಾರಿನೊ ರಾಜೀನಾಮೆ ಸಲ್ಲಿಸಿದ್ದಾರೆ. ಲಿಂಡಾ ಅವರು ಇಲಾನ್ ಮಸ್ಕ್ ಒಡೆತನದ ಸಾಮಾಜಿಕ ಮಾಧ್ಯಮ ವೇದಿಕೆಯಾದ ಎಕ್ಸ್ ಕಂಪನಿಯ ಸಿಇಒ ಆಗಿ ಎರಡು ವರ್ಷ ಸೇವೆ ಸಲ್ಲಿಸಿದ್ದಾರೆ. ರಾಜೀನಾಮೆ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, ಇದೊಂದು ಜೀವಮಾನದ ಅವಕಾಶ. ವಾಕ್ ಸ್ವಾತಂತ್ರ್ಯವನ್ನು ರಕ್ಷಿಸುವ, ಕಂಪನಿಯನ್ನು ಪುನರುಜ್ಜೀವನಗೊಳಿಸುವ ಮತ್ತು ಎಕ್ಸ್ ಅನ್ನು ಎವೆರಿಥಿಂಗ್ ಅಪ್ಲಿಕೇಶನ್ ಆಗಿ ಅಭಿವೃದ್ಧಿಪಡಿಸಲು ಅವಕಾಶ ನೀಡಿದಕ್ಕಾಗಿ ಇಲಾನ್ ಮಸ್ಕ್ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದಿದ್ದಾರೆ.



2023ರ ಜೂನ್‌ನಲ್ಲಿ ಟ್ವಿಟರ್‌ನ ಸಿಇಒ ಆಗಿ ಲಿಂಡಾ ಯಾಕಾರಿನೊ ನೇಮಕಗೊಂಡಿದ್ದರು. ಇದಕ್ಕೂ ಮುನ್ನ ಲಿಂಡಾ ಅವರು 2011ರಿಂದಲೂ ಎನ್‌ಬಿಸಿ ಯೂನಿವರ್ಸಲ್‌ನ ಜಾಹೀರಾತು ಮತ್ತು ಪಾಲುದಾರಿಕೆ ವಿಭಾಗದ ಕಾರ್ಯ ನಿರ್ವಾಹಕಿಯಾಗಿ ಕೆಲಸ ಮಾಡುತ್ತಿದ್ದರು. 2022ರಲ್ಲಿ ಟ್ವಿಟರ್ ಖರೀದಿಸಿದ್ದ ಮಸ್ಕ್, ಸಿಇಒ ಆಗಿದ್ದ ಭಾರತದ ಪರಾಗ್ ಅಗರ್‌ವಾಲ್ ಅವರನ್ನು ವಜಾಗೊಳಿಸಿ ತಾವೇ ಅಧಿಕಾರ ವಹಿಸಿಕೊಂಡಿದ್ದರು. ಇದಾದ ಆರು ವಾರಗಳ ಬಳಿಕ ಲಿಂಡಾ ಅಧಿಕಾರ ಸ್ವೀಕರಿಸಿದ್ದರು.

ಮೈಸೂರು ಮಿತ್ರ ಗುರುವಾರ 10 ಜುಲೈ 2025

ರಸ್ತೆಗಳಲ್ಲಿ ಕಸ ಹಾಕುವವರ ವಿರುದ್ಧ ದಂಡ ವಿಧಿಸಲು ಪುರಸಭೆ ನಿರ್ಣಯ

ವಿರಾಜಪೇಟೆ, ಜು.9–ಪಟ್ಟಣದ ಮುಖ್ಯ ರಸ್ತೆ ಸೇರಿದಂತೆ ಇತರ ರಸ್ತೆಗಳಲ್ಲಿ ಕಂಡ ಕಂಡಲ್ಲಿ ಕಸ ಹಾಕುವವರ ವಿರುದ್ದ ಹೆಚ್ಚಿನ ದಂಡ ವಿಧಿಸಲು ಪುರಸಭೆ ಸರ್ವಾನು ಮತದಿಂದ ನಿರ್ಣಯ ತೆಗೆದುಕೊಂಡಿತು.

ಪುರಸಭೆ ಅಧ್ಯಕ್ಷೆ ದೇಚಮ್ಮ ಕಾಳಪ್ಪ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಮಾತನಾಡಿ, ಪ್ರತಿಯೊಬ್ಬರು ಶುಚಿತ್ವಕ್ಕೆ ಆದ್ಯತೆ ನೀಡಬೇಕು. ಕಸದ ವಾಹನ ಮನೆಯ ಬಾಗಿಲಿಗೆ ಹೋದಾಗ ಕಸವನ್ನು ಹಾಕಬೇಕು. ಅದನ್ನು ಬಿಟ್ಟು ಎಲ್ಲೆಂದರಲ್ಲಿ ಕಸ ಎಸೆಯುವುದು ಸರಿಯಲ್ಲ ಅಂತಹವರ ವಿರುದ್ದ ಪುರಸಭೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಕೊಡಗು ಪ್ರವಾಸಿ ತಾಣವಾಗಿದ್ದು ರಾಜ್ಯ, ಅಂತರ ರಾಜ್ಯದಿಂದಲೂ ಪ್ರವಾಸಿಗರು ಆಗಮಿಸುತ್ತಿದ್ದಾರೆ ಅದರಿಂದ ಶುಚಿತ್ವವನ್ನು ಕಾಪಾಡುವುದು ನಮ್ಮ ಕರ್ತವ್ಯವಾಗಿದೆ ಎಂದರು. ಶಾಸಕರ ಈ ಸಲಹೆಗೆ ಇತರೆ ಸದಸ್ಯರು ದನಿಗೂಡಿಸಿದಾಗ ಅಧ್ಯಕ್ಷೆ ಕಸ ಹಾಕುವವರ ವಿರುದ್ಧ ದಂಡ ವಿಧಿಸಲು ಕ್ರಮ ಜರುಗಿಸಲಾಗುವುದೆಂದರು

ಸದಸ್ಯ ವಿನಾಂಕ್ ಕುಟ್ಟಪ್ಪ ಮಾತನಾಡಿ ಪಟ್ಟಣದ ಮಲಬಾರ್ ರಸ್ತೆಗೆ ಕಂಚಿ ಕಾಮಾಕ್ಷಿ ರಸ್ತೆ ಎಂದು ನಾಮಕರಣ ಮಾಡುವ ಸಂದರ್ಭ ಸ್ಥಳೀಯ ವಾರ್ಡ್ ಸದಸ್ಯನ ಗಮನಕ್ಕೆ ತಂದಿಲ್ಲ, ಅಲ್ಲಿನ ಶ್ರೀ ಮುತ್ತಪ್ಪ ದೇವಾಲಯವಿದ್ದು ಅದೇ ಹೆಸನ್ನು ನಾಮಕರಣ ಮಾಡುವಂತೆ ದೇವಾಲಯ ಸಮಿತಿ ಆಗ್ರಹಿಸಿದೆ. ಅದರಿಂದ ಜನರ ಭಾವನೆಯನ್ನು ಗೌರವಿಸಿ ಮುತ್ತಪ್ಪನ್ ರಸ್ತೆ ಎಂದು ನಾಮಕರಣ ಮಾಡುವಂತೆ ಹೇಳಿದರು, ಆಗ ನಾಮ ನಿರ್ದೇಶಿತ ಸದಸ್ಯ ಹಾಗೂ ದೇವಾಲಯದ ಆಡಳಿತ ಮಂಡಳಿ ಅಧ್ಯಕ್ಷರಾದ ಜಿ.ಜಿ. ಮೋಹನ್ ಮಾತನಾಡಿ ಕಂಚಿ ಕಾಮಾಕ್ಷಿ ದೇವಿಯ ಹೆಸ ರನ್ನೆ ಇಟ್ಟಿರುವುದು ಸೂಕ್ತವಾಗಿದೆ ಇದರಲ್ಲಿ ಯವುದೇ ರಾಜಕೀಯ ಬೇಡ ಎಂದರು, ಇದಕ್ಕೆ ಪುರಸಭೆ ಅಧ್ಯಕ್ಷೆ ಈ ವಿಚಾರದಲ್ಲಿ ಗೊಂದಲಬೇಡ ನಿಯಮದಂತೆ ಜಿಲ್ಲಾಧಿ ಕಾರಿಗೆ ಮನವಿ ಕಳಿಸಿ ಅವರಿಂದ ಮಾಹಿತಿ ಬಂದ ನಂತರ ಸಮಸ್ಯೆ ಬಗೆಹರಿಯಲಿದೆ ಎಂದರು.



ರಾಜಕಾಲುವೆಯಲ್ಲಿ ಹೂಳೆತ್ತುವ ಕಾರ್ಯದಲ್ಲಿ ಭ್ರಷ್ಟಾಚಾರ ನಡೆರುವ ಬಗ್ಗೆ ಪುರಸಭಾ ಸಾಮಾನ್ಯ ಸಭೆಯಲ್ಲಿ ಸದಸ್ಯರು ಮಾತಿನ ಚಕಮಕಿ ನಡೆಸಿದರು

ಸದಸ್ಯ ಪಟ್ಟಡ ರಂಜಿ ಪೂಣಚ್ಚ ಮತ್ತು ಶಭರೀಶ್ ಶೆಟ್ಟಿ ಮಾತನಾಡಿ ಪುರಸಬೆ ವ್ಯಾಪ್ತಿಯಲ್ಲಿ 18 ವಾರ್ಡ್‌ಗಳಿದ್ದು ಈಗಾಗಲೇ 5 ವಾರ್ಡ್‌ಗಳನ್ನು ಸೇರಿಸಿ ಅವರಿಂದ ಕಂದಾಯ ವಸೂಲಿ ಮಾಡುತ್ತಿದ್ದರೂ ಅವರಿಗೆ ಮೂಲ ಸೌಲಭ್ಯಗಳನ್ನು ಕಲ್ಪಿಸಿ ಕೊಡಬೇಕು. ಈಗಾಗಲೇ ಕಸದ ಸಮಸ್ಯೆ ಇದ್ದು ಕಸದ ವಾಹನಗಳು ಎರಡು ಕೆಟ್ಟು ನಿಂತಿವೆ ಮತ್ತು ಪ್ರತಿದಿನವು ಸಮಯಕ್ಕೆ ಸರಿಯಾಗಿ ಕಸ ಸಂಗ್ರಹ ಮಾಡುವಂತಾಗಬೇಕು ಸಮಸ್ಯೆಗಳು ಉದ್ಭವ ಆಗದಂತೆ ಎಚ್ಚರ ವಹಿಸಬೇಕೆಂದು ತಿಳಿಸಿದರು.

ಹಿರಿಯ ಸದಸ್ಯ ಸಿ.ಕೆ.ಪೃಥ್ವಿನಾಥ್ ಮಾತನಾಡಿ ಪುರಸಭೆ ವ್ಯಾಪ್ತಿಯ ಮುಖ್ಯ ತೋಡು ರಾಜಕಾಲುವೆಗಳನ್ನು ಹೂಳೆತ್ತುವ ಕಾಮಗಾರಿಗೆ ಕ್ರಿಯಾ ಯೋಜನೆ ರೂಪಿಸಲಾಗಿದೆ. ಪಟ್ಟಣದ ಸುತ್ತಳತೆ ಜೆ.ಸಿ.ಬಿ. ಮೂಲಕ ಸತತವಾಗಿ ಕೆಲಸ ಮಾಡಿದ್ದರು ಅನೇಕ ವಾರ್ಡ್‌ಗಳಲ್ಲಿ ಕೆಲಸ ಇನ್ನು ಆಗಿಲ್ಲ ಖರ್ಚು ಮಾತ್ರ 10 ಲಕ್ಷ ಅನುದಾನ ಎಂದು ತೋರಿಸಿದ್ದೀರ ಇದರಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿದಾಗ ಸಭೆಯಲ್ಲಿ ಕೆಲ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು. ಕಾಂಗ್ರೆಸ್ ಸದಸ್ಯ ರಾಜೇಶ್ ಮಾತನಾಡಿ ಸ್ಥಾಯಿ ಸಮಿತಿ ಅಧ್ಯಕ್ಷ ಅಬ್ದುಲ್ ಜಲೀಲ್ ಸ್ಥಾಯಿ ಸಮಿತಿ ಸಭೆಗೆ ನಮ್ಮನ್ನು ಆಹ್ವಾನಿಸದಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಸ್ಥಾಯಿಸಮಿತಿ ಅಗತ್ಯವಿಲ್ಲ ವಿಸರ್ಜಿಸಿ ಎಂದು ಆಗ್ರಹಿಸಿದಾಗ ಅನಾವಶ್ಯಕ ಕಾಲಾಹರಣ ಮಾಡುವುದನ್ನು ಬಿಟ್ಟು ಅಭಿವೃದ್ಧಿ ಕಡೆಗೆ ಒತ್ತು ನೀಡಬೇಕೆಂದು ಅಧ್ಯಕ್ಷರು ಹೇಳಿದಾಗ ಸಭೆಯಲ್ಲಿ ಸದಸ್ಯರು ದನಿಗೂಡಿಸಿದರು.

ಸಭೆಯಲ್ಲಿ ಕುಡಿಯುವ ನೀರು, ಬೀದಿ ದೀಪಗಳು, ಒಳಚರಂಡಿ, ಸ್ವಚ್ಚತೆ ಹಾಗೂ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲಾಯಿತು. ಸಭೆಯಲ್ಲಿ ಉಪಾಧ್ಯಕ್ಷೆ ಫಾಹಾ ತಬಸಮ್, ಮುಖ್ಯಾಧಿಕಾರಿ ಪಿ.ಕೆ.ನಾಚಪ್ಪ, ಅಭಿಯಂತರ ಹೇಮಕುಮಾರ್, ಪರಿಸರ ಅಭಿಯಂತರ ರೀತು ಸಿಂಗ್, ಸ್ಥಾಯಿ ಸಮಿತಿ ಅಧ್ಯಕ್ಷರಾದ ಅಬ್ದುಲ್ ಜಲೀಲ್, ಮತ್ತು ಪೂರ್ಣಿಮಾ, ಸದಸ್ಯರಾದ ರಜನಿಕಾಂತ್, ಮತೀನ್, ಸುನೀತಾ ಜೂನ, ಆಶಾ ಸುಬ್ಬಯ್ಯ, ಅನಿತಾ, ಅಗಸ್ಟಿನ್ ಬೆನ್ನಿ, ಮಹದೇವ್, ಇತರೆ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ್ದರು.

ಅಕ್ರಮ ರೆಸಾರ್ಟ್ ನೆಲಸಮಕ್ಕೆ ಗ್ರಾಮಸ್ಥರ ಒತ್ತಾಯ



ಅಕ್ರಮ ರೆಸಾರ್ಟ್‌ಗಳ ನೆಲಸಮಗೊಳಿಸಲು ನಿವೃತ್ತ ಕರ್ನಲ್ ಚೆಪ್ಪುಡಿರ ಪಿ.ಮುತ್ತಣ್ಣ ಸುದ್ದಿಗೋಷ್ಠಿಯುಲ್ಲಿ ಆಗ್ರಹಿಸಿದರು

ಮಡಿಕೇರಿ,ಜು.9–ಜಿಲ್ಲೆಯ ಭೂಕುಸಿತ ಪೀಡಿತ ಪ್ರದೇಶಗಳಲ್ಲಿ ಭೂ ಕಂದಾಯ ಕಾಯ್ದೆಯನ್ನು ಉಲ್ಲಂಘಿಸಿ ಅಕ್ರಮವಾಗಿ ನಿರ್ಮಿಸಿರುವ ರೆಸಾರ್ಟ್‌ಗಳನ್ನು ತಕ್ಷಣ ನೆಲಸಮಗೊಳಿಸಬೇಕೆಂದು ಎನ್ವಿರಾನ್ಮೆಂಟ್ ಐಂಡ್ ಹೆಲ್ತ್ ಫೌಂಡೇಶನ್ ಸಂಸ್ಥೆ ಹಾಗೂ ಸೋಮವಾರಪೇಟೆ ತಾಲೂಕಿನ ಕಿರಗಂದೂರು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಜಿಲ್ಲೆಯೆಲ್ಲೆಡೆ ಅಕ್ರಮ ರೆಸಾರ್ಟ್‌ಗಳು ತಲೆ ಎತ್ತಿದ್ದು, ಒಂದು ವೇಳೆ ಭೂ ಕುಸಿತ ಉಂಟಾಗಿ ರೆಸಾರ್ಟ್‌ಗಳು ಹಾನಿಗೀಡಾದರೆ ಇವುಗಳಲ್ಲಿ ತಂಗಿರುವ ಪ್ರವಾಸಿಗರು ಹಾಗೂ ಉದ್ಯೋಗಿಗಳು ಸಾವಿ ಗೀಡಾಗುವ ಸಾಧ್ಯತೆಗಳಿವೆ ಎಂದು ಎನ್ವಿರಾನ್ಮೆಂಟ್ ಐಂಡ್ ಹೆಲ್ತ್ ಫೌಂಡೇಶನ್‌ನ ಅಧ್ಯಕ್ಷ ನಿವೃತ್ತ ಕರ್ನಲ್ ಚೆಪ್ಪುಡಿರ ಪಿ. ಮುತ್ತಣ್ಣ ಸುದ್ದಿಗೋಷ್ಠಿಯಲ್ಲಿ ಆತಂಕ ವ್ಯಕ್ತಪಡಿಸಿದರು.

ಸರ್ಕಾರ ಆದೇಶ ಹೊರಡಿಸಿದ ನಂತರವೂ ಭೂಕುಸಿತ ಪೀಡಿತ ಪ್ರದೇಶಗಳಲ್ಲಿ ರೆಸಾರ್ಟ್‌ಗಳು ತಲೆ ಎತ್ತಿರುವುದು ಕಂಡುಬಂದಿದೆ. ಬಿಳಿಗೇರಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬಿಳಿಗೇರಿ ಗ್ರಾಮದಲ್ಲಿ, ಮಕ್ಕಂದೂರು ಗ್ರಾಪಂ ವ್ಯಾಪ್ತಿಯ ಹಾಲೇರಿ ಗ್ರಾಮದಲ್ಲಿ, ಕೆದಕಲ್ ಗ್ರಾಪಂ ವ್ಯಾಪ್ತಿಯ ಮೋದೂರು ಗ್ರಾಮದಲ್ಲಿ ಮತ್ತು ಗಾಳಿಬೀಡು ಗ್ರಾಮದಲ್ಲಿ ನಿರ್ಮಿಸಲಾಗುತ್ತಿದೆ. ಮಕ್ಕಂದೂರಿನಲ್ಲಿ ನಿರ್ಮಾಣಗೊಂಡಿರುವ ರೆಸಾರ್ಟ್ ಕುರಿತು ಮಾಹಿತಿ ಹಕ್ಕು ನಿಯಮದಡಿ ಜಿಲ್ಲಾಡಳಿತದಿಂದ ಮಾಹಿತಿ ಬಯಸಲಾಗಿತ್ತು ಇಲ್ಲಿ ರೆಸಾರ್ಟ್ ನಿರ್ಮಿಸಲು ಯಾರೂ ಅನುಮತಿ ನೀಡಿಲ್ಲವೆಂದು ಉತ್ತರ ದೊರೆತಿದೆ. ಅಕ್ರಮ ರೆಸಾರ್ಟ್‌ಗಳ ಬಗ್ಗೆ ಜಿಲ್ಲಾಧಿಕಾರಿಗಳನ್ನು ಕೇಳಿದಾಗ ತಮಗೇನು ತಿಳಿದಿಲ್ಲವೆಂದು ಹೇಳಿದ್ದು, ಆಶ್ಚರ್ಯಕ್ಕೆ ಕಾರಣವಾಗಿದೆ. ಪರಿಸ್ಥಿತಿ ನಿಯಂತ್ರಣಕ್ಕೆ ಬಾರದೆ ಇರುವುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ ಉಲ್ಲಂಘನೆ ಮತ್ತು ಅಕ್ರಮ ರೆಸಾರ್ಟ್‌ಗಳ ನಿರ್ಮಾಣದ ವಿರುದ್ಧ ತಾವು ಕಾನೂನು ಹೋರಾಟ ನಡೆಸುವುದಾಗಿ ತಿಳಿಸಿದರು.

ಭೂಕಂದಾಯ ಕಾಯ್ದೆಯನ್ನು ಉಲ್ಲಂಘಿಸಿ ಭೂಪರಿವರ್ತನೆ ಮಾಡುತ್ತಿರುವ ಜಿಲ್ಲಾಡಳಿತ ಕ್ರಮದ ವಿರುದ್ಧ ನ್ಯಾಯಾಲಯದಲ್ಲಿ ಹೋರಾಟ ಮುಂದುವರಿದಿದೆ. ಕೆಲವೇ ದಿನಗಳಲ್ಲಿ ಅಂತಿಮ ತೀರ್ಪು ಬರಲಿದೆ ಎಂದರು.

ಸಮಾಜ ಸೇವಕ ಗೋಪಿನಾಥ್ ವೈಡಿ ಮಾತನಾಡಿ ಗ್ರಾಪಂ ಸಭೆಗಳಲ್ಲಿ ರೆಸಾರ್ಟ್‌ಗೆ ವಿರೋಧ ವ್ಯಕ್ತಪಡಿಸಿ ನಿರ್ಣಯ ಕೈಗೊಂಡಿದ್ದರೂ ಯಾವುದೇ ಸ್ಪಂದನೆ ದೊರೆತ್ತಿಲ್ಲ. ಹೊರಗಿನ ಪ್ರಭಾವಿ ವ್ಯಕ್ತಿಗಳ ಬೆಂಬಲದಿಂದ ಜಿಲ್ಲೆಯಲ್ಲಿ ಅಕ್ರಮ ರೆಸಾರ್ಟ್‌ಗಳು ನಿರ್ಮಾಣಗೊಳ್ಳುತ್ತಿವೆ. ಮರಗಳ ಹನನ ನಿಷೇಧವಿದ್ದರೂ ಭಾರದ ವಾಹನಗಳು ರೆಸಾರ್ಟ್ ಕಾಮಗಾರಿಗಾಗಿ ಸಂಚರಿಸುತ್ತಿವೆ ಎಂದು ಗಮನ ಸೆಳೆದರು.

ಕಿರಗಂದೂರು ಗ್ರಾಮಸ್ಥರು ಮಾತನಾಡಿ ಕರ್ನಾಟಕ ಭೂಕಂದಾಯ ಕಾಯ್ದೆಯ ಉಲ್ಲಂಘನೆ ಮತ್ತು ಅಕ್ರಮ ರೆಸಾರ್ಟ್‌ಗಳ ನಿರ್ಮಾಣದ ವಿರುದ್ಧ ಜಿಲ್ಲಾಡಳಿತ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ

ಸಿಐಟಿಯು ಕಾರ್ಮಿಕ ಸಂಘಟನೆ ಪ್ರತಿಭಟನೆ



ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಕುಶಾಲ ನಗರದಲ್ಲಿ ಇಂದು ಸಿಐಟಿಯು ನೇತೃತ್ವದಲ್ಲಿ ವಿವಿಧ ಕಾರ್ಮಿಕ ಸಂಘಟನೆ ನೌಕರರು ಪ್ರತಿಭಟನೆ ನಡೆಸಿದರು.

ಕುಶಾಲನಗರ, ಜು.9–ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪಟ್ಟಣದಲ್ಲಿ ಇಂದು ವಿವಿಧ ಕಾರ್ಮಿಕ ಸಂಘಟನೆ ನೌಕರರು ಪ್ರತಿಭಟನೆ ನಡೆಸಿದರು.

ಸಿಐಟಿಯು ಕಾರ್ಮಿಕ ಸಂಘಟನೆ ಜಿಲ್ಲಾಧ್ಯಕ್ಷ ಪಿ.ಆರ್.ಭರತ್ ನೇತೃತ್ವದಲ್ಲಿ ವಿವಿಧ ಸಂಘಟನೆಗಳ ನೂರಾರು ಕಾರ್ಮಿಕರು ಇಲ್ಲಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಸೇರಿ ಮಳೆಯ ನಡುವೆಯೇ ಪ್ರತಿಭಟನೆ ನಡೆಸಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಕಾರ್ಮಿಕರ ಹಿತಾಸಕ್ತಿಗೆ ವಿರೋಧವಾಗಿರುವ ನಾಲ್ಕು ಕಾರ್ಮಿಕ ಸಹಿಂತೆಗಳನ್ನು ರದ್ದುಪಡಿಸಬೇಕು ಎಂದು ಆಗ್ರಹಿಸಿದರು.

ಕಾರ್ಯಪ್ಪ ವೃತ್ತದಿಂದ ರಥಬೀದಿ ಮೂಲಕ ತಹಶೀಲ್ದಾರ್ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಕಾರ್ಮಿಕರು ತಹಶೀಲ್ದಾರ್ ಕಚೇರಿ ಮುಂದೆ ಕೂಡ ಕೆಲಕಾಲ ಪ್ರತಿಭಟನೆ ನಡೆಸಿ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ತಹಶೀಲ್ದಾರ್ ಕಿರಣ್ ಗೌರಯ್ಯ ಅವರ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು.

ಸಿಐಟಿಯು ಜಿಲ್ಲಾಧ್ಯಕ್ಷ ಪಿ.ಆರ್.ಪ್ರತಾಪ್, ಕರ್ನಾಟಕ ಪ್ರಾಂತ್ಯ ರೈತ ಸಂಘದ ಮುಖಂಡ ಟಿ.ಟಿ.ಉದಯ ಕುಮಾರ್, ಅಂಗನವಾಡಿ ನೌಕರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಮುನಾ, ತಾಲೂಕು ಅಧ್ಯಕ್ಷೆ ಸಾವಿತ್ರಿ, ಕಾರ್ಯದರ್ಶಿ ಚಂದ್ರಿಕಾ, ಮಡಿಕೇರಿ ತಾಲೂಕು ಅಧ್ಯಕ್ಷೆ ಯಶೋಧ, ಬಿಸಿಊಟ ನೌಕರರ ಸಂಘದ ಕುಶಾಲನಗರ ತಾಲೂಕು ಅಧ್ಯಕ್ಷೆ ರಾಣಿ, ಮಡಿಕೇರಿ ತಾಲೂಕು ಅಧ್ಯಕ್ಷೆ ಲಲಿತಾಮ್ಮ, ಆದಿವಾಸಿ ಮುಖಂಡ ರಘು, ಅಮಾಲಿ ಕಾರ್ಮಿಕ ಸಂಘಟನೆ ಗಿರೀಶ್, ಕಟ್ಟಡ ಕಾರ್ಮಿಕರ ಸಂಘದ ಯೋಗೇಶ್, ಪ್ಲಾಂಟೇಷನ್ ಸಂಘದ ಕೃಷ್ಣಕುಮಾರ್, ಸಿಐಟಿಯು ಜಯಣ್ಣ ಮತ್ತು ಮಂಜುನಾಥ್ ಇತರರು ಪಾಲ್ಗೊಂಡಿದ್ದರು.

ಕಾಫಿತೋಟಗಳಲ್ಲಿ ಹುಲಿಯ ಹೆಜ್ಜೆ ಗುರುತುಗಳು ಪತ್ತೆ



ಸಿದ್ದಾಪುರ: ತಿತಿಮತಿ ವಲಯದ ಬಾಡಗ ಬಾಣಂಗಾಲ ಮತ್ತು ಮೇಕೂರು ಹೊಸ್ಕೇರಿ ಗ್ರಾಮದ ಹೊಲಮಾಳ, ಮತಪೈಸಾರಿ, ಬಜೆಗೊಳ್ಳಿ ಎಸ್ಟೇಟ್, ವಡ್ಡರಲ್ಲಿ ಎಸ್ಟೇಟ್, ಪಾರ್ವತಿ ಎಸ್ಟೇಟ್‌ಗಳಲ್ಲಿ ಹುಲಿಯ ಚಲನ ವಲನದ ಹೆಜ್ಜೆ ಗುರುತುಗಳು ಕಂಡುಬಂದಿವೆ.

ವಿರಾಜ್ ಪೇಟೆ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗೋಪಾಲ್ ಮಾರ್ಗದರ್ಶನದ ಮೇರೆಗೆ ವಲಯ ಅರಣ್ಯ ಅಧಿಕಾರಿ ಗಂಗಾಧರ್ ನೇತೃತ್ವದಲ್ಲಿ ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಗಿದೆ ಅಲ್ಲಲ್ಲಿ ಹೆಜ್ಜೆ ಗುರುತುಗಳು ಕಂಡುಬಂದಿದ್ದು ಹುಲಿ ಎಲಿಕಲ್ ಬೆಟ್ಟದ ಕಡೆಗೆ ಹೋಗಿರುವ ಕುರುಹುಗಳು ಪತ್ತೆಯಾಗಿರುತ್ತದೆ. ರಾತ್ರಿ ಕೂಡ ಕಾರ್ಯಾಚರಣೆ ಮುಂದುವರೆದಿದ್ದು ಜೋರು ಮಳೆಯಿಂದಾಗಿ ಸಿಬ್ಬಂದಿಗಳಿಗೆ ಹುಲಿಯ ಚಲನ ವಲನದ ಹೆಜ್ಜೆ ಗುರುತುಗಳು ಸರಿಯಾಗಿ ಗೋಚರಿಸದೆ ಸಂಜೆ ವೇಳೆಗೆ ಕಾಂರ್ಯಾಚರಣೆ ನಿಲ್ಲಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಉಪ ವಲಯ ಅರಣ್ಯ ಅಧಿಕಾರಿ ಶಶಿ ಪಿ.ಟಿ, ಆರ್‌ಆರ್‌ಟಿ ಸಿಬ್ಬಂದಿ ಹಾಗೂ ಅರಣ್ಯ ವೀಕ್ಷಕರು ಭಾಗವಹಿಸಿದ್ದರು.

ಮಗುಚಿ ಬಿದ್ದ ಲಾರಿ; ಚಾಲಕ ಪಾರು



ಸಿದ್ದಾಪುರ: ಸೇತುವೆ ಕಾಮಗಾರಿ ನಡೆಯುತ್ತಿದ್ದ ರಸ್ತೆಯಲ್ಲಿ ಮರ ಸಾಗಾಟ ಮಾಡುತ್ತಿದ್ದ ಲಾರಿ ಸಿಲುಕಿ ಮಗುಚಿ ಬಿದ್ದ ಘಟನೆ ಸಿದ್ದಾಪುರ ಮುಖ್ಯರಸ್ತೆಯಲ್ಲಿ ನಡೆದಿದೆ.

ಮರದ ದಿಮ್ಮಿಗಳನ್ನು ತುಂಬಿ ವಿರಾಜಪೇಟೆ ರಸ್ತೆಯಿಂದ ಸಿದ್ದಾಪುರ ಮಾರ್ಗಕ್ಕೆ ತೆರಳುತ್ತಿದ್ದ ವೇಳೆ ಅಂಬೇಡ್ಕರ್ ನಗರದ ಬಳಿ ಸೇತುವೆ ನಿರ್ಮಾಣದ ಕಾಮಗಾರಿ ನಡೆಯುತ್ತಿದ್ದ ರಸ್ತೆಯ ಗುಂಡಿಯಲ್ಲಿ ಸಿಲುಕಿ ಲಾರಿ ಮಗುಚಿ ಬಿದ್ದಿದೆ. ಲಾರಿಯಲ್ಲಿದ್ದ ಚಾಲಕ ಹಾಗೂ ಕ್ಲೀನರ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಸಿದ್ದಾಪುರ– ವಿರಾಜಪೇಟೆ ಮಾರ್ಗದ ವಾಹನ ಸಂಚಾರಕ್ಕೆ ತೊಡಕುಂಟಾದ ಹಿನ್ನೆಲೆ ತಕ್ಷಣ ರಾತ್ರಿಯೇ ಮರದ ದಿಮ್ಮಿಗಳನ್ನು ಸ್ಥಳಾಂತರ ಮಾಡಲಾಗಿತ್ತು.

ಬೆಳಿಗ್ಗೆ ಜೆಸಿಬಿ ಕ್ರೈನನ್ನು ಬಳಸಿ ಲಾರಿಯನ್ನು ಮೇಲೆತ್ತಿ ಸುಗಮ ಸಂಚಾರ ವ್ಯವಸ್ಥೆ ಮಾಡಲಾಯಿತು. ಸಿದ್ದಾಪುರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಮುಂದಿನ ಕ್ರಮ ಕೈಗೊಂಡಿದ್ದಾರೆ. ಏಳು ತಿಂಗಳಿಂದ ಸಿದ್ದಾಪುರ ಮುಖ್ಯ ರಸ್ತೆಯ ಸೇತುವೆ ಹಾಗೂ ರಸ್ತೆ ಕಾಮಗಾರಿ ವಿಳಂಬವಾಗುತ್ತಿರುವ ಹಿನ್ನೆಲೆ ಹಲವು ವಾಹನಗಳು ಅಪಘಾತದಿಂದ ಹಾನಿಯಾಗಿದೆ. ಕೇರಳ, ಹಾಸನ, ಕೊಡಗು ಮಾರ್ಗದ ಮುಖ್ಯ ರಸ್ತೆಯಾಗಿದ್ದು ರಸ್ತೆ ಕಾಮಗಾರಿ ವಿಳಂಬದಿಂದ ವಾಹನ ಸಂಚಾರಕ್ಕೆ ತೊಡಕು ಉಂಟಾಗುತ್ತಿದೆ.

ವಿವಿಧ ಬೇಡಿಕೆಗಾಗಿ ಅಂಗನವಾಡಿ ನೌಕರರ ಪ್ರತಿಭಟನೆ



ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಜಿಲ್ಲೆ ವಿವಿಧೆಡೆಯಿಂದ ಬಂದಿದ್ದ ಅಂಗನವಾಡಿ ನೌಕರರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಜು.9–ಹುದ್ದೆ ಖಾಯಂಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಹನೂರು ಹಾಗೂ ಗುಂಡ್ಲುಪೇಟೆ ಸೇರಿದಂತೆ ಜಿಲ್ಲಾದ್ಯಂತ ಅಂಗನವಾಡಿ ನೌಕರರು ಪ್ರತಿಭಟನೆ ನಡೆಸಿದರು.

ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತ ಬಿ.ರಾಚಯ್ಯ ಜೋಡಿ ರಸ್ತೆಯ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ, ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಉಪನಿರ್ದೇಶಕ ಸುರೇಶ್ ಹಾಗೂ ತಹಶೀಲ್ದಾರ್ ಗಿರಿಜಾರ ಮುಖಾಂತರ ಪ್ರಧಾನಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಮುಖಂಡರ ಬಂಧನ ಬಿಡುಗಡೆ : ಮನವಿ ಸಲ್ಲಿಸಿದ ನಂತರವೂ ಪ್ರತಿಭಟನೆಗೆ ನೌಕರರು ಮುಂದಾದಾಗ ಪೊಲೀಸರು ಸಂಘದ ಅಧ್ಯಕ್ಷೆ ಕೆ.ಸುಜಾತ, ಪ್ರಧಾನ ಕಾರ್ಯದರ್ಶಿ ಎ. ನಾಗಮಣಿ, ಖಜಾಂಚಿ ಭಾಗ್ಯ, ಉಪಾಧ್ಯಕ್ಷೆ ಶಾಯೀದ ಬಾನು ಸೇರಿದಂತೆ ಇತರರನ್ನು ವಶಕ್ಕೆ ಪಡೆದು, ನಂತರ ಬಿಡುಗಡೆಗೊಳಿಸಿದರು.

ತಮ್ಮಗಳ ಬೇಡಿಕೆಯನ್ನು ಈಡೇರಿಸದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯ ಸಂಘಟನೆಯ ನೇತೃತ್ವದಲ್ಲಿ ಕೇಂದ್ರ ಸಚಿವರ ನಿವಾಸಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದರು.

ಜಿಲ್ಲಾಧ್ಯಕ್ಷೆ ಕೆ.ಸುಜಾತ ಮಾತನಾಡಿದರು. ಪ್ರತಿಭಟನೆಯಲ್ಲಿ ಚಿಕ್ಕತಾಯಮ್ಮ, ಪುಷ್ಪಲತಾ, ಚಿಕ್ಕನಾಗಮ್ಮ, ನೀಲಾಂಬಿಕೆ, ಚಿಕ್ಕಮಣಿ, ಪುಟ್ಟಮ್ಮ, ಶಾಂತಮ್ಮ, ಮಂಜುಳಾ, ಪುಷ್ಪಾಲತಾ, ಸೋಮಮ್ಮ, ರಾಣಿ, ವಿಶಾಲಾಕ್ಷಿ, ಶಹಜಾನ್ ಸೇರಿದಂತೆ ಇತರರು ಇದ್ದರು.

ಮಲೆಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದಿಂದ ಸ್ವಚ್ಛ ಕಾರ್ಮಿಕರ ಪ್ರೋತ್ಸಾಹ ದಿನಾಚರಣೆ

ಹನೂರು, ಜು. 9–ಸ್ವಚ್ಛ ಕಾರ್ಮಿಕರ ಪ್ರೋತ್ಸಾಹ ದಿನಾಚರಣೆ ಕಾರ್ಯಕ್ರಮವನ್ನು ಪ್ರಾಧಿಕಾರದ ಕಾರ್ಯದರ್ಶಿ ಎಇ ರಘುರವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.

ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನದ ಆವರಣ ಹಾಗೂ ಮಾಸ್ಟರ್ ಪ್ಲಾನ್ ಆವರಣದಲ್ಲಿ ಪ್ರತಿನಿತ್ಯ ಶುದ್ಧತೆ ಮತ್ತು ಸ್ವಚ್ಛತೆಗೆ ತಮ್ಮ ಅಮೂಲ್ಯ ಸೇವೆ ನೀಡುತ್ತಿರುವ ಪೌರಕಾರ್ಮಿಕರ ಸೇವೆ ಶ್ಲಾಘನೀಯವಾಗಿದೆ. ಪ್ರಾಧಿಕಾರದ ವ್ಯಾಪ್ತಿಯಲ್ಲಿ ಪೌರ ಕಾರ್ಮಿಕರಾಗಿ ಹಗಲಿರುಳು ದುಡಿಯುತ್ತಿರುವ ಪೌರ ಕಾರ್ಮಿಕರ ಪ್ರೋತ್ಸಾಹ ದಿನಚರಣೆ ಆಚರಣೆ ಮಾಡುತ್ತಿರುವುದು ಸಂತಸದ ವಿಚಾರ ಎಂದು ಹೇಳಿದರು.

ಪ್ರತಿಯೊಬ್ಬರೂ ಶ್ರೀ ಕ್ಷೇತ್ರದಲ್ಲಿ ಉತ್ತಮವಾಗಿ ಸೇವೆ ಸಲ್ಲಿಸುತ್ತಿದ್ದೀರಾ ಜಾತ್ರಾ ಮಹೋತ್ಸವ, ಹಬ್ಬ ಹರಿದಿನಗಳಲ್ಲಿ ದಿನದ 24 ಗಂಟೆಯೂ ಮಾದಪ್ಪನ ಸೇವೆ ಮಾಡುತ್ತಿದ್ದೇವೆ ಎಂಬ ಭಾವನೆಯಿಂದ ತಮ್ಮ ಕರ್ತವ್ಯ ನಿರ್ವಹಿಸುತ್ತಿರುವುದು ಹೆಮ್ಮೆಯ ವಿಚಾರ. ಇತ್ತೀಚಿನ ದಿನಗಳಲ್ಲಿ ಶ್ರೀ ಕ್ಷೇತ್ರಕ್ಕೆ ಲಕ್ಷಾಂತರ ಭಕ್ತಾದಿಗಳು ಆಗಮಿಸುತ್ತಿದ್ದಾರೆ ಆದರೂ ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡುವುದರ ಮೂಲಕ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿದ್ದೀರಾ. ನಿಮ್ಮ ಈ ಸೇವೆ ನಿರಂತರವಾಗಿರಲಿ ಮುಂದಿನ ದಿನಗಳಲ್ಲಿ ಪೌರ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ವಿಶೇಷ ಆಯೋಜನೆ ಮಾಡಿ ಸಮಸ್ಯೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಈಗಾಗಲೇ ಪೌರಕಾರ್ಮಿಕರಿಗೆ 2,000ರೂ. ಸಂಕಷ್ಟ ಭತ್ಯೆ ನೀಡಲಾಗುತ್ತಿದೆ. ಸರ್ಕಾರದ ನಿರ್ದೇಶನದಂತೆ ವಾರ್ಷಿಕ 50 ಪೌರಕಾರ್ಮಿಕರಿಗೆ ರೂ.7 ಸಾವಿರದಂತೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ ಎಂದರು.

ವ್ಯಾಸಂಗದಲ್ಲಿ ಸಮಯ ಸದ್ಬಳಕೆ ವಿದ್ಯಾರ್ಥಿಗಳಿಗೆ ಅಗತ್ಯ

ಚಾಮರಾಜನಗರ: ವಿದ್ಯಾರ್ಥಿಗಳು ಶ್ರಮಪಟ್ಟು ಓದಿದರೆ ಮಾತ್ರ ತಮ್ಮ ಮುಂದಿನ ಜೀವನದಲ್ಲಿ ಯಶಸ್ಸು ಕಾಣಬಹುದು ಎಂದು ಬೆಂಗಳೂರು ಅಕ್ಕ ಐಎಎಸ್ ಅಕಾಡೆಮಿ ಸಂಸ್ಥಾಪಕ ನಿರ್ದೇಶಕ ಡಾ.ಶಿವಕುಮಾರ್ ಹೇಳಿದರು.

ನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಭಾರತೀಯ ವಿದ್ಯಾರ್ಥಿ ಸಂಘ(ಬಿವಿಎಸ್) ಛತ್ರಪತಿ ಶಾಹು ಮಹಾರಾಜ್ ಮತ್ತು ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನದ ಅಂಗವಾಗಿ ತಾಲೂಕು ಮಟ್ಟದ ಎಸ್‌ಎಸ್ ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.85ಕ್ಕಿಂತ ಅಂಕ ಪಡೆದ ಎಲ್ಲಾ ಸಮುದಾಯದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಓದುವ ಸಮಯದಲ್ಲಿ ಸಮಯವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಓದುವ ವಯಸ್ಸು ಕಳೆದುಕೊಂಡ ಮೇಲೆ ಓದುವುದು ಕಷ್ಟಕರವಾಗಿತ್ತು ಎಂದರು. ಹೆಣ್ಣುಮಕ್ಕಳು ಎಸ್‌ಎಸ್‌ಎಲ್‌ಸಿ, ಪಿಯುಸಿವರೆಗೆ ಚೆನ್ನಾಗಿ ಓದುವ ಮೂಲಕ ಮೇಲುಗೈ ಸಾಧಿಸುವ ಹೆಣ್ಣು ಮಕ್ಕಳು ಪಿಯುಸಿಗೆ ಶಿಕ್ಷಣ ಮೊಟಕುಗೊಳಿಸದೆ ಉನ್ನತ ಶಿಕ್ಷಣ ಓದುವ ಮೂಲಕ ಉನ್ನತ ಹುದ್ದೆಗಳಿಗೆ ಹೋಗಬೇಕು.ಉನ್ನತ ಹುದ್ದೆಗಳಿಗೆ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆ. ಹಾಗಾಗಿ ಹೆಣ್ಣುಮಕ್ಕಳ ಉನ್ನತ ಶಿಕ್ಷಣಕ್ಕೂ ಪೋಷಕರು ಸಹಕಾರ ನೀಡಬೇಕಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಪುಷ್ಪಾರ್ಚನೆ ಮಾಡಿ ತಾಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ 450 ವಿದ್ಯಾರ್ಥಿಗಳು ಶೇ.85ಕ್ಕಿಂತ ಹೆಚ್ಚು ಅಂಕ ಪಡೆದಿರುವುದು ಒಳ್ಳೆಯ ಬೆಳವಣಿಯಾಗಿದೆ. ಹೆಣ್ಣು ಮಕ್ಕಳು, ಗಂಡುಮಕ್ಕಳು ಇಬ್ಬರು ಚೆನ್ನಾಗಿ ಓದುವ ಮೂಲಕ ರಾಜ್ಯ, ದೇಶಕ್ಕೆ ಸಂಪತ್ತು ಆಗಬೇಕು ಎಂದರು.

ಇಂದು ಚಾಮರಾಜೇಶ್ವರ ರಥೋತ್ಸವ

ಚಾಮರಾಜನಗರ,ಜು.9–ಆಷಾಢ ಮಾಸದಲ್ಲಿ ನವದಂಪತಿಗಳನ್ನು ಒಂದೆಡೆ ಸೇರಿಸುವ, ಹಣ್ಣು ಜವನ ಎಸೆದು ಸಂಭ್ರಮಿಸುವಂತೆ ಮಾಡುವ ಪ್ರಸಿದ್ಧ ಚಾಮರಾಜೇಶ್ವರ ರಥೋತ್ಸವ ಜುಲೈ 10ರ ಗುರುವಾರ ನಡೆಯಲಿದ್ದು, ಜಾತ್ರೆಗೆ ಎಲ್ಲಾ ಸಿದ್ಧತೆ, ಸಂಪೂರ್ಣಗೊಂಡಿದೆ.

ಬೆಳಗ್ಗೆ 11.30ರಿಂದ ಮಧ್ಯಾಹ್ನ 12.15 ರೊಳಗೆ ಸಲ್ಲುವ ಶುಭ ಕನ್ಯಾ ಲಗ್ನದಲ್ಲಿ ರಥೋತ್ಸವಕ್ಕೆ ಚಾಲನೆ ದೊರೆಯಲಿದ್ದು, ಇದಕ್ಕಾಗಿ ಮುಜರಾಯಿ ಇಲಾಖೆ, ಜಿಲ್ಲಾಡಳಿತ, ತಾಲೂಕು ಆಡಳಿತ ಹಾಗೂ ದೇವಸ್ಥಾನದ ಆಡಳಿತ ಮಂಡಳಿಯಿಂದ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ.

ಸಾಮಾನ್ಯವಾಗಿ ಆಷಾಢ ಮಾಸದಲ್ಲಿ ಶುಭ ಕಾರ್ಯ ಎಲ್ಲೂ ನಡೆಯುವುದಿಲ್ಲ. ಆದರೆ, ಚಾಮರಾಜೇಶ್ವರಸ್ವಾಮಿ ರಥೋತ್ಸವ ನಡೆಯುವುದು ಮಾತ್ರ ವಿಶೇಷ. ಹೀಗಾಗಿ ಆಷಾಢ ಜಾತ್ರೆ ಎಂದೇ ಪ್ರಸಿದ್ಧಿ ಪಡೆದಿದೆ.

ಪುರಾಣ ಪ್ರಸಿದ್ಧವಾಗಿರುವ ಚಾಮರಾಜೇಶ್ವರ ರಥೋತ್ಸವ, ಹಿಂದೆ ಅತೀ ವೈಭವವಾಗಿ ನಡೆದು, ತೆಪ್ಪೋತ್ಸವವೂ ನಡೆಯುತ್ತಿತ್ತು. 1836ರಲ್ಲಿ ಮೊದಲ ಬಾರಿಗೆ ಆಷಾಢ ಶುದ್ಧ ಹುಣ್ಣಿಮೆಯ ಸೋಮವಾರದಂದು ರಥೋತ್ಸವ ನಡೆಯಿತು. ರಥವನ್ನು ಅರೇಪುರದ ಬಸವರಾಜೇ ಅರಸು ಮಾಡಿಸಿಕೊಟ್ಟಿದ್ದರು.

1970ರಲ್ಲಿ ತೇರಿನ ಚಕ್ರ ಬದಲಾಯಿಸಲಾಗಿತ್ತು ಈ ಹಿಂದೆ ತೇರು ಕಟ್ಟುವ ಕಾರ್ಯಕ್ಕೆ 15 ದಿನ ಹಿಡಿಯುತಿತ್ತು. ಒಟ್ಟು 56 ಕಂಬ, 84 ಅಡ್ಡಪಟ್ಟಿಗಳಿಂದ ತೇರು ಕಟ್ಟಿದ ನಂತರ, ಧ್ವಜ ಅಲಂಕಾರ ಬಟ್ಟೆಗಳಿಂದ ಸಿಂಗಾರ ಮಾಡಲಾಗುತಿತ್ತು. 2017ರ ಫೆಬ್ರವರಿಯಲ್ಲಿ ಮಾನಸಿಕ ಅಸ್ವಸ್ಥನೊಬ್ಬ ರಥಕ್ಕೆ ಬೆಂಕಿ ಹಾಕಿದ್ದರಿಂದ ಅದು ಸುಟ್ಟು ಹೋಗಿತ್ತು.



ವಿವಿಧ ಬಣ್ಣಗಳ ಹೂಗಳಿಂದ ಅಲಂಕೃತಗೊಂಡಿರುವ ಚಾಮರಾಜೇಂದ್ರ ದೇವಾಲಯ



1826ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಚಾಮರಾಜೇಶ್ವರ ದೇವಸ್ಥಾನ ನಿರ್ಮಿಸಿದರು. ಅಂದಿನಿಂದಲೂ ಇಂದಿನವರೆಗೂ ಆಷಾಢ ಮಾಸದಲ್ಲಿ ಈ ಜಾತ್ರೆ ನಡೆಸಲಾಗುತ್ತಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಆಷಾಢ ಮಾಸದ ಪೂರ್ವಾಷಾಢ ನಕ್ಷತ್ರದಂದು ಜನಿಸಿದ್ದರಿಂದ ಆ ದಿನದಂದೇ ಶ್ರೀ ಚಾಮರಾಜೇಶ್ವರ ರಥೋತ್ಸವವನ್ನು ನಡೆಸಲಾಗುತ್ತಿದೆ.

–ರಾಮಕೃಷ್ಣ ಭಾರದ್ವಜ್ ಮುಖ್ಯ ಅರ್ಚಕರು.

ಆ ಬಳಿಕ 5 ವರ್ಷಗಳ ಕಾಲ ರಥೋತ್ಸವ ಸ್ಥಗಿತಗೊಂಡಿತ್ತು. ನಂತರ 2022ರಿಂದ ಮತ್ತೆ ರಥೋತ್ಸವ ಆರಂಭವಾಗಿದೆ.

ನವಜೋಡಿಗಳ ಜಾತ್ರೆ : ಚಾಮರಾಜೇಶ್ವರನ ಆಷಾಢ ಜಾತ್ರೆ ನವಜೋಡಿಗಳನ್ನು ಒಂದುಗೂಡಿಸುತ್ತದೆ. ಜಾತ್ರೆಗೆ ಜಿಲ್ಲೆಯ ನವಜೋಡಿಗಳಲ್ಲದೆ ಹೊರಗಿನ ಜಿಲ್ಲೆಯ ನವಜೋಡಿಗಳು ಆಗಮಿಸುವ ಮೂಲಕ ದಂಪತಿಗಳ ಸಮೇತ ರಥಕ್ಕೆ ಹಣ್ಣುಜವನಗಳನ್ನು ಎಸೆಯುವ ಮೂಲಕ ಇಷ್ಟಗಳನ್ನು ನೆರವೇರಿಸುವಂತೆ ಪ್ರಾರ್ಥಿಸುತ್ತಾರೆ. ಅಲ್ಲದೆ, ರೈತರು ಮಳೆ ಬೆಳೆಗಾಗಿ ಪ್ರಾರ್ಥಿಸುತ್ತಾರೆ.

ಚಾಮರಾಜೇಶ್ವರಸ್ವಾಮಿ ದೊಡ್ಡ ರಥದ ಮುಂದೆ ಗಣಪತಿ ರಥ, ಸುಬ್ರಹ್ಮಣ್ಯಸ್ವಾಮಿ ಚಿಕ್ಕರಥ, ಚಂಡಿಕೇಶ್ವರ ಚಿಕ್ಕರಥ, ಮಹಾರಾಜರ ಉತ್ಸವ ಮೂರ್ತಿ ಸಾಗುತ್ತದೆ. ದೊಡ್ಡರಥದ ಹಿಂದೆ ಶ್ರೀಚಾಮುಂಡೇಶ್ವರಿ ಅಮ್ಮನವರ ಚಿಕ್ಕರಥ ಸಾಗುತ್ತದೆ. ಇದು ಜಾತ್ರೆಯ ಮತ್ತೊಂದು ವಿಶೇಷವಾಗಿದೆ.

ರಥೋತ್ಸವದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಇದಕ್ಕಾಗಿ ಜಿಲ್ಲಾ ಪೊಲೀಸ್ ವತಿಯಿಂದ ವ್ಯಾಪಕವಾದ ವ್ಯವಸ್ಥೆ ಮಾಡಲಾಗಿದೆ.



ರಥೋತ್ಸವಕ್ಕೆ ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯುಲ್ಲಿ ಆಗಮಿಸುವುದರಿಂದ ಅಗತ್ಯ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಲಾಗಿದೆ. ರಥೋತ್ಸವ ವೀಕ್ಷಣೆ, ದೇವಾಲಯ ಪ್ರವೇಶ, ಮತ್ತಿತರ ಪೂಜಾ ಕಾರ್ಯಕ್ರಮಗಳಿಗೆ ಭಕ್ತಾಧಿಗಳಿಗೆ ಅನುವು ಮಾಡಿಕೊಡಲು ಸೂಕ್ತ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ. ರಥೋತ್ಸವ ನಡೆಯುವ ಸಮೀಪದ ಆವರಣದಲ್ಲಿ ತಾತ್ಕಾಲಿಕ ಆರೋಗ್ಯ ಕೇಂದ್ರ ತೆರೆಂಯುವ ಜೊತೆಗೆ, ಆಂಬುಲೆನ್ಸ್, ಅಗ್ನಿಶಾಮಕ ವಾಹನ ನಿಂಯೋಜನೆಗೆ ಸೂಚಿಸಲಾಗಿದೆ.

– ಶಿಲ್ಪಾ ನಾಗ್, ಡಿಸಿ

ಶಾಸಕರಿಂದ ಸಿದ್ಧತಾ ಕಾರ್ಯ ಪರಿಶೀಲನೆ

ಚಾಮರಾಜೇಶ್ವರ ಬ್ರಹ್ಮರಥೋತ್ಸವ ಸಂಬಂಧ ಶಾಸಕ ಸಿ.ಪುಟ್ಟರಂಗಶೆಟ್ಟಿ ದೇವಾಲಯಕ್ಕೆ ಭೇಟಿನೀಡಿ ಸಿದ್ದತಾ ಕಾರ್ಯ ಪರಿಶೀಲಿಸಿ, ವೈಯಕ್ತಿಕವಾಗಿ ದೇವಾಲಯ, ರಥಕ್ಕೆ ಹೂವಿನ ಅಲಂಕಾರ, ವಿದ್ಯುತ್ ದೀಪಾಲಂಕಾರಕ್ಕೆ ನೆರವು ನೀಡಿದ್ದಾರೆ.

ಶಾಸಕರು ಮಾತನಾಡಿ, ಚಾಮರಾಜೇಶ್ವರ ರಥೋತ್ಸವಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದು, ಭಕ್ತಾದಿಗಳಿಗೆ ತೊಂದರೆಯಾಗದಂತೆ ದೇವಾಲಯದ ಆಡಳಿತಾಧಿಕಾರಿಗಳು ಕ್ರಮ ವಹಿಸಬೇಕು ಎಂದು ಸೂಚನೆ ನೀಡಿದರು. ಪೇಷ್ಕರ್ ರಾಜಶೇಖರ್, ಅರ್ಚಕ ರಾಮಕೃಷ್ಣ ಭಾರಧ್ವಾಜ್ ಶಾಸಕರೊಂದಿಗೆ ಹಾಜರಿದ್ದರು.

ಇಂದಿನಿಂದ ರಾಜ್ಯ ಸರ್ಕಾರದ ಸಾಧನೆ ಬಿಂಬಿಸುವ ವಸ್ತುಪ್ರದರ್ಶನ

ಚಾಮರಾಜನಗರ: ರಾಜ್ಯ ಸರ್ಕಾರದ ಎರಡು ವರ್ಷಗಳ ಅಭಿವೃದ್ಧಿ ಕಾರ್ಯಕ್ರಮಗಳ ಸಾಧನೆ ಹಾಗೂ ಪಂಚ ಗ್ಯಾರಂಟಿ ಯೋಜನೆಗಳನ್ನು ಬಿಂಬಿಸುವ ವಸ್ತುಪ್ರದರ್ಶನವನ್ನು ನಗರದ ಕೆ.ಎಸ್ ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ ಜು.10 ರಿಂದ 12ರವರೆಗೆ ಏರ್ಪಡಿಸಲಾಗಿದೆ.

ಮೂರು ದಿನಗಳ ಕಾಲ ನಡೆಯಲಿರುವ ವಸ್ತು ಪ್ರದರ್ಶನದಲ್ಲಿ ಸರ್ಕಾರದ ಯೋಜನೆ, ಸಾಧನೆಗಳು, ಪಂಚ ಗ್ಯಾರಂಟಿ ಯೋಜನೆಗಳ ಪ್ರಂಯೋಜನ ಕುರಿತ ಮಾಹಿತಿ ಇರಲಿದೆ. ಬೆಳಿಗ್ಗೆ 10 ಗಂಟೆಗೆ ವಸ್ತುಪ್ರದರ್ಶನದ ಉದ್ಘಾಟನೆ ನೆರವೇರಲಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಕಟಣೆ ತಿಳಿಸಿದೆ.

ನಾಳೆ ಯಕ್ಷಗಾನ ಪ್ರದರ್ಶನ

ಚಾಮರಾಜನಗರ, ಜು. 9 – ಕರ್ನಾಟಕ ಯಕ್ಷಗಾನ ಅಕಾಡೆಮಿ ಮತ್ತು ರಂಗವಾಹಿನಿ ಸಹಯೋಗದಲ್ಲಿ 'ಮೋಹಿನಿ ಭಸ್ಮಾಸುರ' ಯಕ್ಷಗಾನ ಪ್ರದರ್ಶನವನ್ನು ಜು.11ರ ರಾತ್ರಿ 7 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಏರ್ಪಡಿಸಲಾಗಿದೆ.

ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟನೆ ನೆರವೇರಿಸುವರು. ಬಿ.ಎಸ್.ವಿ ಪ್ರತಿಷ್ಠಾನದ ವೆಂಕಟನಾಗಪ್ಪಶೆಟ್ಟಿ ಅಧ್ಯಕ್ಷತೆ ವಹಿಸುವರು. ಅಶ್ವಿನಿ ಡಯಾಗ್ನೋಸ್ಟಿಕ್ ಸೆಂಟರ್‌ನ ಡಾ. ರಮೇಶ್ ಉಡುಪ, ಡಾ. ಶಶಿಕಲ ರಮೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಆರ್. ನಂಜುಂಡಯ್ಯ, ರೋಟರಿ ಸಂಸ್ಥೆ ಅಧ್ಯಕ್ಷ ಕಾಗಲವಾಡಿ ಚಂದ್ರು, ಕರ್ನಾಟಕ ಸೇನಾ ಪಡೆ ರಾಜ್ಯಾಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ, ಕರ್ನಾಟಕ ಯಕ್ಷಗಾನ ಅಕಾಡೆಮಿ ಸದಸ್ಯ ಪುಟ್ಟಸ್ವಾಮಿ, ಚಾಮರಾಜೇಶ್ವರ ದೇವಸ್ಥಾನ ಪ್ರಧಾನ ಅರ್ಚಕ ರಾಮಕೃಷ್ಣ ಭಾರದ್ವಜ, ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಕಾರ್ಯದರ್ಶಿ ವಿಜಯಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಉಚಿತ ಕಣ್ಣಿನ ತಪಾಸಣಾ ಶಿಬಿರ

ಗುಂಡ್ಲುಪೇಟೆ,ಜು.9– ಸಾರ್ವಜನಿಕ ಹಿತಾಸಕ್ತಿಯಿಂದ ಕಣ್ಣಿನ ಉಚಿತ ತಪಾಸಣಾ ಶಿಬಿರ ಆಯೋಜಿಸುತ್ತಿದ್ದು ಅರ್ಹರು ಸದ್ಬಳಕೆ ಮಾಡಿಕೊಳ್ಳುವಂತೆ ಪಿಡಿಓಗಳ ಸಂಘದ ಜಿಲ್ಲಾಧ್ಯಕ್ಷ ಕುಮಾರಸ್ವಾಮಿ ಹೇಳಿದ್ದಾರೆ.

ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ಕೊಯಮತ್ತೂರು ಅರವಿಂದ ಕಣ್ಣಾಸ್ಪತ್ರೆ, ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘ ಸಹಯೋಗದೊಂದಿಗೆ ಆಯೋಜಿಸಿದ್ದ ಉಚಿತ ಕಣ್ಣಿನ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಕಣ್ಣಿನ ಸಮಸ್ಯೆಗಳು ಹಾಗೂ ಚಿಕಿತ್ಸಾ ವೆಚ್ಚ ಹೆಚ್ಚಾಗುತ್ತಿದೆ. ಆದರೆ ಈ ಶಿಬಿರಗಳಲ್ಲಿ ತಪಾಸಣೆಗೊಳಗಾದ ರೋಗಿಗಳಿಗೆ ಉಚಿತವಾಗಿ ಶಸ್ತ್ರಚಿಕಿತ್ಸೆ ಮಾಡುವುದಲ್ಲದೆ ರಿಯಾಯಿತಿ ದರದಲ್ಲಿ ಕನ್ನಡಕಗಳನ್ನು ಕೊಡಲಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅರವಿಂದ ಕಣ್ಣಾಸ್ಪತ್ರೆ ಪಿಆರ್‌ಓ ಬಿ.ವಿಜಯಕಾಂತ್, ಶಿಬಿರದ ಆಯೋಜಕ ಎಂ.ಶ್ರೀನಾಥ್ ಮಾತನಾಡಿದರು. ಲಯನ್ ಮಾಜಿ ಅಧ್ಯಕ್ಷ ಎನ್. ನಾಗೇಂದ್ರ, ಎಂ.ಸಿ.ಶಿವಪ್ರಸಾದ್, ಶಂಕರ ನಾರಾಯಣ ಜೋಯಿಸ್, ಅನುಗ್ರಹ ಫೌಂಡೇಶನ್ ಸಂಚಾಲಕ ಕೆ.ರಮೇಶ್, ಉದ್ಯಮಿ ರಘು, ಪಿಡಿಓ ಶಿವಸ್ವಾಮಿ, ನೌಕರರ ಸಂಘದ ಜಿಲ್ಲಾ ಉಪಾಧ್ಯಕ್ಷ ಎಂ.ಮಲ್ಲು, ಎಂ.ಶ್ರೀನಾಥ್, ಎ.ಮಹದೇವ, ಮಹಾಲಿಂಗಪ್ಪ, ಪತ್ರಕರ್ತ ಕೆ.ಎನ್. ಮಹದೇವಸ್ವಾಮಿ ಇದ್ದರು.

ಮೌಲ್ಯ ಭವನದಲ್ಲಿ ಮೈಸೂರು ವಿವಿ ಸ್ನಾತಕೋತ್ತರ ಪರೀಕ್ಷೆಗಳು

ಒಂದೇ ಸೂರಿನಡಿ ಎಲ್ಲಾ 54 ವಿಭಾಗದ ಪರೀಕ್ಷಾ ಚಟುವಟಿಕೆ



ಮೈಸೂರು ವಿಶ್ವವಿದ್ಯಾನಿಲಯದ ಮೌಲ್ಯ ಭವನ.

ಮೈಸೂರು, ಜು.9(ಎಂಕೆ)– ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯ ಮೊದಲ ಬಾರಿಗೆ ಸ್ನಾತಕೋತ್ತರ ಪದವಿ ಪರೀಕ್ಷೆಗಳನ್ನು ಮೌಲ್ಯ ಭವನದಲ್ಲಿ ನಡೆಸುವ ಮೂಲಕ ಒಂದೇ ಸೂರಿನಡಿ 54 ವಿಭಾಗಗಳ ಪರೀಕ್ಷಾ ಚಟುವಟಿಕೆಗಳನ್ನು ನಡೆಸಲು ನಿರ್ಧರಿಸಿದೆ.

ಆಯಾಯ ಅಧ್ಯಯನ ವಿಭಾಗಗಳಲ್ಲಿಯೇ ನಡೆಸಲಾಗುತ್ತಿದ್ದ ಪರೀಕ್ಷೆಗಳನ್ನು, 2025–26ನೇ ಶೈಕ್ಷಣಿಕ ವರ್ಷದಿಂದ ಮೈಸೂರು ವಿವಿಯ ಮೌಲ್ಯ ಭವನದಲ್ಲಿ ನಡೆಸಲಾಗುತ್ತಿದೆ. ಈಗಾಗಲೇ ಪ್ರಸಕ್ತ ಶೈಕ್ಷಣಿಕ ಸಾಲಿನ 2ನೇ ಮತ್ತು 4ನೇ ಸೆಮಿಸ್ಟರ್ ಸ್ನಾತಕೋತ್ತರ ಪದವಿ ಪರೀಕ್ಷೆಗಳು ಜು.3ರಿಂದ ಪ್ರಾರಂಭವಾಗಿದ್ದು, ಈ ಮೂಲಕ ಮೈಸೂರು ವಿವಿಯು ಮಹತ್ವದ ಹೆಜ್ಜೆ ಇರಿಸಿದೆ.

ವಿಶ್ವವಿದ್ಯಾನಿಲಯದ 54 ವಿಭಾಗಗಳ ವಿದ್ಯಾರ್ಥಿಗಳು ಒಂದೇ ಸೂರಿನಡಿ ಪರೀಕ್ಷೆ ಬರೆದಾಗ ಸಾರ್ಥಕ ಭಾವನೆ ಬರುತ್ತದೆ. ಇದರಿಂದ ವಿದ್ಯಾರ್ಥಿಗಳಿಗೂ ಪರೀಕ್ಷೆಯ ಬಗ್ಗೆ ಶಿಸ್ತು ಬರಲಿದೆ. ಇಲ್ಲಿಯವರೆಗೆ ಆಯಾ ವಿಭಾಗಗಳಲ್ಲೇ ಪರೀಕ್ಷೆಗಳು ನಡೆಯುತ್ತಿದ್ದಾಗ ಅದೇ ವಿಭಾಗಗಳ ಅಧ್ಯಾಪಕರು, ಪರಿವೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಇದೀಗ ಬೇರೆ ಬೇರೆ ವಿಭಾಗದವರು ಪರಿವೀಕ್ಷಕರಾಗಿ ಪರೀಕ್ಷೆಯ ಮೇಲ್ವಿಚಾರಣೆ ನಡೆಸುವಂತಾಗಿದೆ.

ಸ್ನಾತಕೋತ್ತರ ಪದವಿಯ 2ನೇ ಮತ್ತು 4ನೇ ಸೆಮಿಸ್ಟರ್‌ಗಳಲ್ಲಿ ಒಟ್ಟು 4,500 ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದು, ಎರಡು ಅವಧಿಗಳಲ್ಲಿ ಪರೀಕ್ಷೆಗಳು ನಡೆಯುತ್ತಿವೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ(ಮೌಲ್ಯಮಾಪನ) ಪ್ರೊ.ಎನ್.ನಾಗರಾಜು ತಿಳಿಸಿದ್ದಾರೆ.

ಈ ಹಿಂದೆ ಪರೀಕ್ಷಾ ಸಮಯದಲ್ಲಿ ನಿತ್ಯ ಆಯಾ ವಿಭಾಗಕ್ಕೆ ಹೋಗಿ ಪ್ರಶ್ನೆ ಪತ್ರಿಕೆ ನೀಡುವುದು, ಬಳಿಕ ಉತ್ತರ ಪತ್ರಿಕೆ ಸಂಗ್ರಹಿಸುವ ಕಾರ್ಯ ಮಾಡಲಾಗುತ್ತಿತ್ತು. ಇದರಿಂದ ವಿವಿಯ ಆರ್ಥಿಕತೆಗೂ ಪೆಟ್ಟು ಬೀಳುತ್ತಿತ್ತು. ಆದರೆ, ಇದೀಗ ಎಲ್ಲ ವಿಭಾಗಗಳ ಪರೀಕ್ಷೆಗಳು ಒಂದೇ ಸೂರಿನಡಿ ನಡೆಯುತ್ತಿರುವುದರಿಂದ ವಿವಿಗೆ ಆರ್ಥಿಕ ಅನುಕೂಲವಾಗಲಿದೆ. ಮೌಲ್ಯಭವನದಲ್ಲಿ ಪರೀಕ್ಷೆಗಳು ಯಾವುದೇ ಸಮಸ್ಯೆಗಳಿಲ್ಲದೆ ನಡೆಯುತ್ತಿದ್ದು, ಈ ಹೊಸ ವ್ಯವಸ್ಥೆಗೆ ವಿದ್ಯಾರ್ಥಿಗಳೂ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಮೋದಿಗೆ ನಮೀಬಿಯಾದ ಅತ್ಯುನ್ನತ ನಾಗರಿಕ ಪ್ರಶಸ್ತಿ



ಪ್ರಧಾನಿ ಮೋದಿ ಅವರಿಗೆ ನಮೀಬಿಯಾದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಆರ್ಡರ್ ಆಫ್ ದಿ ಮೋಸ್ಟ್ ಏನ್ಷಿಯೆಂಟ್ ವೆಲ್ವಿಟ್ಚಿಯಾ ಮಿರಾಬಿಲಿಸ್' ನೀಡಿ ನಮೀಬಿಯಾದ ಅಧ್ಯಕ್ಷ ನೆಟುಂಬೊ ನಂದಿ–ದೈತ್ವಾ ಗೌರವಿಸಿದರು.

ವಿಂಡ್‌ಹುಕ್ (ನಮೀಬಿಯಾ): ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ತಮ್ಮ ಐದು ರಾಷ್ಟ್ರಗಳ ಪ್ರವಾಸದಲ್ಲಿ ಕೊನೆಯದಾಗಿ ಆಫ್ರಿಕಾ ಖಂಡದ ದಕ್ಷಿಣ ಭಾಗದಲ್ಲಿರುವ ನಮೀಬಿಯಾಗೆ ಭೇಟಿ ನೀಡಿದ್ದಾರೆ. ಈ ವೇಳೆ ಅವರಿಗೆ ನಮೀಬಿಯಾದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಆರ್ಡರ್ ಆಫ್ ದಿ ಮೋಸ್ಟ್ ಏನ್ಷಿಯೆಂಟ್ ವೆಲ್ವಿಟ್ಚಿಯಾ ಮಿರಾಬಿಲಿಸ್' ಪ್ರಶಸ್ತಿಯನ್ನು ನೀಡಿ ನಮೀಬಿಯಾದ ಅಧ್ಯಕ್ಷ ನೆಟುಂಬೊ ನಂದಿ–ದೈತ್ವಾ ಗೌರವಿಸಿದ್ದಾರೆ. ಈ ಭೇಟಿಯ ವೇಳೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ನಮೀಬಿಯಾ ವಿಶ್ವದ ಅತಿ ದೊಡ್ಡ ವಜ್ರ ಉತ್ಪಾದಕರಲ್ಲಿ ಒಂದಾಗಿದೆ ಮತ್ತು ಭಾರತವು ಅತಿ ದೊಡ್ಡ ವಜ್ರ ಹೊಳಪು ಮಾಡುವ ಉದ್ಯಮವನ್ನು ಹೊಂದಿದೆ. ಅದು ನನ್ನ ತವರು ರಾಜ್ಯವಾದ ಗುಜರಾತ್‌ನಲ್ಲಿದೆ. ಮುಂಬರುವ ದಿನಗಳಲ್ಲಿ ನಮ್ಮ ಸಹಭಾಗಿತ್ವವೂ ಈ ವಜ್ರಗಳಂತೆ ಹೊಳೆಯುತ್ತದೆ ಎಂಬ ವಿಶ್ವಾಸ ನನಗಿದೆ ಎಂದು ಹೇಳಿದ್ದಾರೆ.

ಚಿಟ್ ಫಂಡ್ ಹೆಸರಿನಲ್ಲಿ 50 ಕೋಟಿ ರೂ. ವಂಚನೆ; ಕೇರಳ ದಂಪತಿ ಪರಾರಿ

ಬೆಂಗಳೂರು: ಬೆಂಗಳೂರಿನಲ್ಲಿ ಚಿಟ್ ಫಂಡ್ ಕಂಪನಿ ನಡೆಸುತ್ತಿದ್ದ ಕೇರಳ ಮೂಲದ ದಂಪತಿ 1,300ಕ್ಕೂ ಹೆಚ್ಚು ಹೂಡಿಕೆದಾರರಿಗೆ 50 ಕೋಟಿ ರೂ.ಗೂ ಹೆಚ್ಚು ವಂಚನೆ ಮಾಡಿ ಪರಾರಿಯಾಗಿದ್ದಾರೆ. ಹೂಡಿಕೆ ಮಾಡಿದವರಲ್ಲಿ ಹೆಚ್ಚಿನವರು ಕೇರಳೀಯರು ಎಂದು ಪೊಲೀಸರು ತಿಳಿಸಿದ್ದಾರೆ. ಈ ಚಿಟ್ ಫಂಡ್ ಯೋಜನೆಯಲ್ಲಿ 70 ಲಕ್ಷ ರೂ. ಕಳೆದುಕೊಂಡಿರುವುದಾಗಿ ಹೇಳಿಕೊಂಡ ಹೂಡಿಕೆದಾರರಲ್ಲಿ ಒಬ್ಬರಾದ ಪಿಟಿ ಸವಿಯೊ ಅವರು, ಜು.5 ರಂದು ರಾಮಮೂರ್ತಿ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ದೂರಿನ ಆಧಾರದ ಮೇಲೆ, ಬೆಂಗಳೂರಿನ ರಾಮಮೂರ್ತಿ ನಗರದ ಎ & ಎ ಚಿಟ್ ಫಂಡ್ಸ್ ಮತ್ತು ಫೈನಾನ್ಸ್‌ನ ಮಾಲೀಕರಾದ ಟಾಮಿ ಎ ಮತ್ತು ಅವರ ಪತ್ನಿ ಶಿನಿ ಟಾಮಿ ವಿರುದ್ಧ ಚಿಟ್ ಫಂಡ್ಸ್ ಕಾಯ್ದೆ, ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಸುಗ್ರೀವಾಜ್ಞೆ 2019 ರ ಸಂಬಂಧಿತ ಸೆಕ್ಷನ್ ಮತ್ತು ಭಾರತೀಯ ನ್ಯಾಯ ಸಂಹಿತಾದ ಸೆಕ್ಷನ್ 318(ವಂಚನೆ), 316 (ಕ್ರಿಮಿನಲ್ ನಂಬಿಕೆ ಉಲ್ಲಂಘನೆ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಡಾ.ಹರ್ಷ ಬಸಪ್ಪ ಅವರೊಂದಿಗೆ ಫೋನ್–ಇನ್ ಕಾರ್ಯಕ್ರಮ



ಮೈಸೂರು: ಜು.11 ರಂದು ಬೆಳಗ್ಗೆ 11.30 ರಿಂದ ಮಧ್ಯಾಹ್ನ 12:30 ರವರೆಗೆ ಹೃದಯ ಸಂಬಂಧಿತ ತೊಂದರೆಗಳ ಕುರಿತು ಫೋನ್–ಇನ್–ಕಾರ್ಯಕ್ರಮನ್ನು ಜೆಎಸ್‌ಎಸ್ ರೇಡಿಯೋ 91.2 ಎಫ್‌ಎಂ. ಸಮುದಾಯ ಬಾನುಲಿ ಕೇಂದ್ರವು ಆಯೋಜಿಸಿದ್ದು, ಕಾರ್ಯಕ್ರಮದಲ್ಲಿ ಜಯದೇವ ಹೃದಯರೋಗ ಆಸ್ಪತ್ರೆಯ ಹೃದಯರೋಗ ಶಸ್ತ್ರಚಿಕಿತ್ಸಾ ತಜ್ಞರಾದ ಡಾ.ಹರ್ಷ ಬಸಪ್ಪ ಭಾಗವಹಿಸಲಿದ್ದಾರೆ. ಸಾರ್ವಜನಿಕರು ಹೃದಯ ಸಂಬಂಧಿತ ಖಾಯಿಲೆಗಳು, ಹೃದಯಘಾತ, ಹೃದಯ ಸ್ತಂಬನಕ್ಕೆ ಕಾರಣಗಳು ಮತ್ತು ಲಕ್ಷಣಗಳು, ಇವುಗಳಿಗಿರುವ ಮುಂಜಾಗ್ರತಾ ಕ್ರಮಗಳ ಕುರಿತು ಯಾವುದೇ ಪ್ರಶ್ನೆಗಳು ಸಂದೇಹಗಳು ಇದ್ದಲ್ಲಿ ನೇರವಾಗಿ ತಜ್ಞ ವೈದ್ಯರ ಜೊತೆ ಮಾತನಾಡಬಹುದು. ನೀವು ಕರೆಮಾಡಬಹುದಾದ ದೂರವಾಣಿ ಸಂಖ್ಯೆ: 8296725912 / 0821–2546563. ವಿಶ್ವದ ಯಾವುದೇ ಮೂಲೆಯಲ್ಲಾದರೂ ಆ್ಯಪ್ ಮೂಲಕ ನಮ್ಮ ರೇಡಿಯೋವನ್ನು ಆಲಿಸಬಹುದು. JSS Radio ಆ್ಯಪ್ https://play.google.com/store/apps/details?id=com.atc.jss

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಕೃಷಿ ಸಾಲಕ್ಕೆ ರಿಯಾಯಿತಿ ನೀಡದೆ ಪ್ರಕರಣ ದಾಖಲಿಸಿರುವ

ಯೂನಿಯನ್ ಬ್ಯಾಂಕ್ ವಿರುದ್ಧ ರೈತರ ಪ್ರತಿಭಟನೆ

ತಿ.ನರಸೀಪುರ, ಜು.9– ರೈತರು ಬ್ಯಾಂಕ್‌ನಿಂದ ಪಡೆದಿರುವ ಕೃಷಿ ಸಾಲಕ್ಕೆ ಓಟಿಎಸ್ ಯೋಜನೆಯಡಿ ರಿಯಾಯಿತಿ ನೀಡದೆ ಸಾರ್ವಜನಿಕ ಹಣಕಾಸು ಕಾಯಿದೆ ಅಡಿ ಪ್ರಕರಣ ದಾಖಲಿಸಿರುವ ಪಟ್ಟಣದ ಯೂನಿಯನ್ ಬ್ಯಾಂಕ್ ವ್ಯವಸ್ಥಾಪಕರ ನಡೆ ಖಂಡಿಸಿ ರೈತರು ಪ್ರತಿಭಟನೆ ನಡೆಸಿದರು.

ಪಟ್ಟಣದ ಯೂನಿಯನ್ ಬ್ಯಾಂಕ್ ಎದುರು ಜಮಾಯಿಸಿದ ರೈತರು ರಾಜ್ಯ ಮತ್ತು ಕೇಂದ್ರ ಸರ್ಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೇರಿದಂತೆ ಬ್ಯಾಂಕ್ ವ್ಯವಸ್ಥಾಪಕರ ವಿರುದ್ಧ ಘೋಷಣೆ ಕೂಗಿದರು.

ಅಲ್ಲದೇ ಅಯ್ಯಯ್ಯೋ ಅನ್ಯಾಯ, ರೈತರ ಬಗ್ಗೆ ಕಾಳಜಿ ಇಲ್ಲದ ಕೇಂದ್ರ ಸರ್ಕಾರಕ್ಕೆ ಧಿಕ್ಕಾರ, ರೈತರನ್ನು ಶೋಷಣೆ ಮಾಡುತ್ತಿರುವ ಅಧಿಕಾರಿಗಳಿಗೆ ಧಿಕ್ಕಾರ, ರೈತರನ್ನು ವಂಚಿಸುತ್ತಿರುವ ಅಧಿಕಾರಿಗಳಿಗೆ ಧಿಕ್ಕಾರ, ಜಿಲ್ಲಾಡಳಿತ ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ಧಿಕ್ಕಾರ ಎಂಬಿತ್ಯಾದಿ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ವಕೀಲ ಚೌಹಳ್ಳಿ ರವಿಶಂಕರ್ ಮಾತನಾಡಿ, ಕಳೆದ 10 ವರ್ಷಗಳಿಂದ ಕಬ್ಬು ಬೆಳೆಯುತ್ತಿರುವ ಈ ಭಾಗದ ರೈತರು ಸೂಕ್ತ ಸಮಯದಲ್ಲಿ ಕಬ್ಬು ಕಟಾವು ಮಾಡಲು ಸಾಧ್ಯವಾಗಿಲ್ಲ. 18 ರಿಂದ 20 ತಿಂಗಳಿಗೆ ಕಬ್ಬು ಕಟಾವು ಮಾಡಿ ರೈತ ನಷ್ಟ ಅನುಭವಿಸಿದ್ದಾನೆ. ಕಬ್ಬು ಖರೀದಿಸುವ ಸಕ್ಕರೆ ಕಾರ್ಖಾನೆಯವರು ಮಾರಾಟ ಮಾಡಿದ ಕಬ್ಬಿನ ಹಣ ಕೊಡಲು 2 ರಿಂದ 3 ತಿಂಗಳು ಸತಾಯಿಸಿದ್ದಾರೆ. ಭತ್ತಕ್ಕೆ ಸೂಕ್ತ ಬೆಲೆ ದೊರಕಿಲ್ಲ. ಕೋವಿಡ್ ವೇಳೆ 6 ತಿಂಗಳು ರೈತ ತಾನು ಬೆಳೆದ ಬೆಳೆಗಳನ್ನು ಮಾರಾಟ ಮಾಡಲಾಗದೆ ಸಂಕಷ್ಟಕ್ಕೆ ಗುರಿಯಾಗಿದ್ದಾನೆ. ಇಂತಹ ಸಂದರ್ಭದಲ್ಲಿ ರೈತರು ತಮ್ಮ ಸುಸ್ತಿ ಸಾಲವನ್ನು ಓಟಿಎಸ್ ಯೋಜನೆ ಮೂಲಕ ಬೇರೆ ವಾಣಿಜ್ಯ ಬ್ಯಾಂಕ್‌ಗಳು ಸಾಲದ ಹಣಕ್ಕೆ ಶೇ.80 ರಷ್ಟು ರಿಯಾಯಿತಿ ನೀಡಿ ಸಾಲದಿಂದ ರೈತ ಋಣ ಮುಕ್ತರಾಗಲೂ ಅವಕಾಶ ನೀಡಿದ್ದರೆ, ಯೂನಿಯನ್ ಬ್ಯಾಂಕ್ ಮಾತ್ರ ಈ ಯೋಜನೆಗೆ ಅವಕಾಶ ನೀಡುತ್ತಿಲ್ಲ ಎಂದು ಆರೋಪಿಸಿದರು.

ಇತರೆ ವಾಣಿಜ್ಯ ಬ್ಯಾಂಕುಗಳು ಶೇ.20ರಷ್ಟು ಹಣ ಕಟ್ಟಿಸಿಕೊಂಡು ರೈತ ಪಡೆದ ಸಾಲ ಮನ್ನಾ ಮಾಡುತ್ತಿದ್ದರೆ, ಯೂನಿಯನ್ ಬ್ಯಾಂಕ್‌ನವರು ಮಾತ್ರ ಓಟಿಎಸ್ ಯೋಜನೆಗೆ ಸ್ಪಂದಿಸುತ್ತಿಲ್ಲ. ಕೇವಲ 10 ರಿಂದ 20 ಪರ್ಸೆಂಟ್ ಮಾತ್ರವೇ ರಿಯಾಯಿತಿ ನೀಡುತ್ತೇವೆ ಎಂದು ರೈತರನ್ನು ಸಂಕಷ್ಟಕ್ಕೆ ದೂಡುವ ಕೆಲಸದಲ್ಲಿ ನಿರತರಾಗಿದ್ದಾರೆ ಎಂದು ದೂರಿದರು.

ಯೂನಿಯನ್ ಬ್ಯಾಂಕ್ ಸ್ಥಳೀಯ ಶಾಖೆ ಅಧಿಕಾರಿಗಳು ಮೈಸೂರಿನ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಾರ್ಯಾಲಯದಲ್ಲಿ ಕರ್ನಾಟಕ ಸಾರ್ವಜನಿಕ ಹಣಕಾಸು (ಸಾಲ ಬಾಕಿ ವಸೂಲಾತಿ) ಕಾಯಿದೆಯಡಿ ಪ್ರಕರಣ ಸಹ ದಾಖಲಿಸಿದ್ದು, ರೈತರಿಗೆ ಓಟಿಎಸ್ ಯೋಜನೆಯಡಿ ಸಾಲ ಮರುಪಾವತಿಸಲು ಉಳಿದ ವಾಣಿಜ್ಯ ಬ್ಯಾಂಕುಗಳಂತೆ ಅವಕಾಶ ನೀಡಿರುವುದಿಲ್ಲ. ತಾಲೂಕಿನ ಎಲ್ಲಾ ವಾಣಿಜ್ಯ ಬ್ಯಾಂಕುಗಳು ರೈತರ ಕೃಷಿ ಸಾಲಕ್ಕೆ ಓಟಿಎಸ್ ಯೋಜನೆಯಡಿ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ ಹಿನ್ನೆಲೆಯಲ್ಲಿ ನ್ಯಾಯಾಲಯದಲ್ಲಿ ಮಧ್ಯಸ್ಥಿಕೆದಾರರು ಸಂಧಾನ ನಡೆಸಿದ್ದಾರೆ. ರೈತರಿಗೆ ತಮ್ಮ ಅಹವಾಲು ತೋಡಿಕೊಳ್ಳಲು ಅವಕಾಶವಿರುತ್ತೆ. ಮಾನ್ಯ ನ್ಯಾಯಾಧೀಶರ ಸಮ್ಮುಖದಲ್ಲಿ ಓಟಿಎಸ್ ಯೋಜನೆಯಡಿ ತೀರ್ಮಾನವಾಗಿರುತ್ತದೆ. ಆದರೂ ಯೂನಿಯನ್ ಬ್ಯಾಂಕ್‌ನವರು ಇದಕ್ಕೆ ಅವಕಾಶವಿಲ್ಲದೇ ಇರುವ ಪ್ರಾಧಿಕಾರದಲ್ಲಿ ದಾವೆ ಹಾಕಿ ಕೇವಲ ಮೌಖಿಕವಾಗಿ ಮಾತನಾಡಿಸಿ ವಸೂಲಾತಿ ಸರ್ಟಿಫಿಕೇಟ್ ನೀಡುವ ವಿಧಾನವಾಗಿದೆ. ಈ ಕ್ರಮವು ರೈತರನ್ನು ಒಕ್ಕಲೆಬ್ಬಿಸುವ ಹುನ್ನಾರ ಎಂದು ಆರೋಪಿಸಿದರು.

ಬಿಜೆಪಿ ಮುಖಂಡ ಕರೋಹಟ್ಟಿ ಬಸವರಾಜು ಹಾಗೂ ರೈತ ಮುಖಂಡ ಕಳ್ಳೀಪುರ ಮಹದೇವಸ್ವಾಮಿ ಮಾತನಾಡಿದರು. ಇದೇ ವೇಳೆ ಶಿರಸ್ತೇದಾರ್ ಮಂಜುಳಾ ಅವರಿಗೆ ರೈತರು ಮನವಿ ಸಲ್ಲಿಸಿದರು.

ರೈತ ಮುಖಂಡರಾದ ಆಲಗೂಡು ಗ್ರಾಪಂ ಮಾಜಿ ಉಪಾಧ್ಯಕ್ಷ ಹೆಚ್.ಬಿ.ಚಿಕ್ಕನಂಜಯ್ಯ, ಲೋಕೇಶ್, ನಟರಾಜು, ಶೇಖರಪ್ಪ, ಮಹದೇವಸ್ವಾಮಿ, ಪ್ರಕಾಶ್, ಸಿದ್ದರಾಜು, ಸಿದ್ದಪ್ಪ, ಶೀಲಾ, ಚಿನ್ನಸ್ವಾಮಿ, ರೇಚಣ್ಣಸ್ವಾಮಿ, ರಾಜಮ್ಮ, ಚಿಕ್ಕೀರಮ್ಮ, ಶೇಖರಪ್ಪ, ಬಿ.ಎಸ್.ಶಾಂತಿ, ಶಿವಮಲ್ಲು, ರಮೇಶ್, ಶಿವರಾಜು, ಪುಟ್ಟಮಲ್ಲಯ್ಯ, ಮಲ್ಲೇಶ್, ಆಲಗೂಡು ಮಹದೇವ, ಸಿದ್ದರಾಜು, ಬನ್ನೂರು ರಾಮಕೃಷ್ಣ, ಶಿವಶಂಕರ್, ನಾಗಸುಂದ್ರಪ್ಪ ಸೇರಿದಂತೆ ಮತ್ತಿತರರಿದ್ದರು.



ಯೂನಿಯನ್ ಬ್ಯಾಂಕ್ ವ್ಯವಸ್ಥಾಪಕರ ನಡೆ ಖಂಡಿಸಿ ರೈತರು ಪ್ರತಿಭಟನೆ ನಡೆಸಿದರು.

ಗುಂಡಿಗೆ ಬಿದ್ದಿದ್ದ ಹುಲಿ ರಕ್ಷಣೆ

ಸರಗೂರು, ಜು.9– ಗೋಬರ್ ಗ್ಯಾಸ್ ಗುಂಡಿಗೆ ಬಿದ್ದಿದ್ದ ಹುಲಿಯನ್ನು ಬುಧವಾರ ಅರಣ್ಯ ಇಲಾಖೆ ಅಧಿಕಾರಿಗಳು ರಕ್ಷಿಸಿದ್ದಾರೆ.

ಪಟ್ಟಣದ 11ನೇ ವಾರ್ಡ್ ಬಿಡಗಲು ನಿವಾಸಿಯೊಬ್ಬರ ಮನೆ ಹಿಂಬದಿ ಇರುವ ಗೋಬರ್ ಗ್ಯಾಸ್ ಗುಂಡಿಗೆ ಮಧ್ಯಾಹ್ನ 1 ಗಂಟೆಗೆ ವೇಳೆ ಹುಲಿ ಬಿದ್ದಿರುವುದನ್ನು ಗಮನಿಸಿದ ಸ್ಥಳೀಯ ನಿವಾಸಿಗಳು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಎಸಿಎಫ್ ಸುಮಿತ್ರ, ಆರ್‌ಎಫ್‌ಓ ಮಹಾಲಕ್ಷ್ಮಿ ಪರಿಶೀಲನೆ ನಡೆಸಿ ಹುಲಿ ಇರುವುದನ್ನು ಖಚಿತಪಡಿಸಿಕೊಂಡರು. ಬಳಿಕ ಸರಗೂರು ವಲಯ ಸಿಬ್ಬಂದಿ, ವಿಶೇಷ ಹುಲಿ ಸಂರಕ್ಷಣಾ ದಳದ ಸಿಬ್ಬಂದಿ, ಆನೆ ಕಾರ್ಯ ಪಡೆ ಹುಣಸೂರು ವಲಯ ಸಿಬ್ಬಂದಿ, ವಲಯ ಅರಣ್ಯಾಧಿಕಾರಿಗಳು ಮತ್ತು ಹೆಚ್.ಡಿ.ಕೋಟೆ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮೈಸೂರು ವಿಭಾಗ ಇವರ ಸಮ್ಮುಖದಲ್ಲಿ ಅಗ್ನಿಶಾಮಕ ಅಧಿಕಾರಿಗಳ ಸಹಾಯದೊಂದಿಗೆ ಕಾರ್ಯಾಚರಣೆ ನಡೆಸಿ ಹುಲಿಯನ್ನು ಗುಂಡಿಯಿಂದ ಮೇಲೆತ್ತಿ, ಬೋನಿಗೆ ಹಾಕಲಾಯಿತು.

6 ತಿಂಗಳ ಗಂಡು ಹುಲಿ ಆರೋಗ್ಯ ಹಾಗೂ ಚಲನವಲನದ ಬಗ್ಗೆ ತಿಳಿಯಲು ಮೈಸೂರಿನ ಕೂರ್ಗಳ್ಳಿ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದರು. ಈ ವೇಳೆ ಹುಲಿ ನೋಡಲು ಜನರ ದಂಡೇ ನೆರೆದಿತ್ತು.

ಕಾರ್ಯಾಚರಣೆಯಲ್ಲಿ ಎಸ್‌ಐ ಕಿರಣ್, ಡಿಸಿಎಫ್ ಸೀಮಾ, ಡಿಆರ್‌ಎಫ್ ಅಭಿಲಾಶ್, ಪ್ರದೀಪ್, ಅರವಳಿಕೆ ಪಶುವೈದ್ಯಾಧಿಕಾರಿ ಆದರ್ಶ್, ಶಾರ್ಪ್ ಶೂಟರ್ ಅಕ್ರಮ್, ಅಗ್ನಿಶಾಮಕದಳದ ಅಧಿಕಾರಿಗಳು ಭಾಗವಹಿಸಿದ್ದರು.



ಸರಗೂರಲ್ಲಿ ಗುಂಡಿಗೆ ಬಿದ್ದಿದ್ದ ಹುಲಿ ಸಂರಕ್ಷಣೆ ಮಾಡಲಾಯಿತು.

ಟ್ರ್ಯಾಕ್‌ಸೂಟ್, ಸಮವಸ್ತ್ರ ಹಸ್ತಾಂತರ



ಮೈಸೂರು ತಾಲೂಕಿನ ಡಿ.ಸಾಲುಂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 30 ವಿದ್ಯಾರ್ಥಿಗಳಿಗೆ ಸಮಾಜ ಸೇವಕ ಎಸ್.ಶ್ರೀಕಾಂತ್ ಟ್ರ್ಯಾಕ್ ಸೂಟ್, ಸಮವಸ್ತ್ರಗಳನ್ನು ಶಾಲಾ ಮುಖ್ಯಶಿಕ್ಷಕ ಶಿವಸ್ವಾಮಿ ಅವರಿಗೆ ಬುಧವಾರ ಹಸ್ತಾಂತರಿಸಿದರು. ನಿವೃತ್ತ ದೈಹಿಕ ಶಿಕ್ಷಕ ಎ.ಚಿಕ್ಕಣ್ಣಚಾರಿ, ಶಿಕ್ಷಕರಾದ ಭಾಗ್ಯ, ಜಯಲಕ್ಷ್ಮಿ, ಮಹದೇವಸ್ವಾಮಿ ಉಪಸ್ಥಿತರಿದ್ದರು.

ವಿಧುಷಿ ಶ್ರೀ ವಿದ್ಯಾ ಆರ್‌ರಿಂದ ಭರತನಾಟ್ಯ ಪ್ರದರ್ಶನ



ನಂಜನಗೂಡಿನ ಶ್ರೀ ಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಗಿರಿಜಾ ಕಲ್ಯಾಣ ಮಹೋತ್ಸವದ ಅಂಗವಾಗಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಂಜನಗೂಡಿನ ಶ್ರೀವಿದ್ಯಾ ಸಂಗೀತ ಮತ್ತು ನೃತ್ಯ ಶಾಲೆಯ ಗುರು ವಿಧುಷಿ ಶ್ರೀ ವಿದ್ಯಾ ಆರ್ ಅವರು ಭರತನಾಟ್ಯ ಪ್ರದರ್ಶನ ಎಲ್ಲರ ಗಮನ ಸೆಳೆದರು.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ

ನಂಜನಗೂಡು, ಜು.9– ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಅಂಗನವಾಡಿ ಕಾರ್ಯಕರ್ತೆಯರು ನಗರದ ಹೆಜ್ಜಿಗೆ ಲಿಂಗಣ್ಣ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಸಂಘದ ಪ್ರಧಾನ ಕಾರ್ಯದರ್ಶಿ ಸುನಂದ ಮಾತನಾಡಿ, ಕಳೆದ 50 ವರ್ಷಗಳಿಂದ ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರು ಕನಿಷ್ಟ ವೇತನವಿಲ್ಲದೆ ದುಡಿಯುತ್ತಿದ್ದಾರೆ. ದೇಶದ ಕಾರ್ಪೋರೇಟ್ ವಲಯದ ಬಂಡವಾಳಗಾರರ 15ಲಕ್ಷಕೋಟಿ ಸಾಲಮನ್ನಾ, 1.97 ಲಕ್ಷ ಕೋಟಿ ಸಬ್ಸಿಡಿ ನೀಡುವ ಕೇಂದ್ರ ಸರ್ಕಾರ ದೇಶದ ಮಾನವ ಸಂಪನ್ಮೂಲದ ಬೆಳವಣಿಗೆಗೆ ದುಡಿಯುತ್ತಿರುವ ಅಂಗನವಾಡಿ ಕಾರ್ಯಕರ್ತೆಯರಿಗೆ ಕನಿಷ್ಟ ಸೌಲಭ್ಯ ನೀಡಲು ಮೀನಾ ಮೇಷ ಎಣಿಸುತ್ತಿದೆ ಗುಜರಾತ್ ಹೈಕೋರ್ಟ್ ತೀರ್ಪಿನಂತೆ ಅಂಗನವಾಡಿ ಕಾರ್ಯಕರ್ತೆಯರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು. ಅಂಗನವಾಡಿ ಕಾರ್ಯಕರ್ತೆಯರರನ್ನು ಖಾಯಂಗೊಳಿಸುವವರೆಗೆ ಕನಿಷ್ಟ ವೇತನ ನೀಡ ಬೇಕು. ಸರ್ಕಾರದ ಜನಗಣತಿ, ಬಿಎಲ್‌ಒ ಕೆಲಸಗಳಿಗೆ ಅಂಗನವಾಡಿ ಕಾರ್ಯಕರ್ತೆಯರನ್ನು ನೇಮಿಸಬಾರದು ಎಂದು ಆಗ್ರಹಿಸಿದರು.

ತಾಲೂಕು ಅಂಗನವಾಡಿ ಕಾರ್ಯಕರ್ತೆಯರ ಸಂಘದ ಅಧ್ಯಕ್ಷೆ ಲೀಲಾವತಿ ಮಾತನಾಡಿ, ಕೇಂದ್ರ ಸರ್ಕಾರ ಪೋಷಣ್ ಅಭಿಯಾನ್ ಕಾರ್ಯಕ್ರಮದಲ್ಲಿ ತನ್ನ ಪಾಲಿನ ವಂತಿಗೆ ಕಡಿತಗೊಳಿಸಲು ಸಲ್ಲದ ನೆಪಗಳನ್ನು ಹುಡುಕುತ್ತಿದ್ದು, ಅಂಗನವಾಡಿ ಕಾರ್ಯಕರ್ತೆಯರ ಷೋಷಣೆ ಮಾಡುತ್ತಿದೆ. ಕನಿಷ್ಟ ವೇತನ ನೀಡದೆ 7 ಗಂಟೆಗಳ ಕಾಲ ದುಡಿಸಿಕೊಂಡು ನಮ್ಮ ದುಡಿಮೆಗೆ ಗೌರವ ವೇತನವೆಂಬ ಹೆಸರಿನಲ್ಲಿ ಕೆಲಸಕ್ಕೆ ಸರಿಯಾದ ವೇತನ ನೀಡದೆ ವಂಚಿಸುತ್ತಿದೆ. ರಾಜ್ಯ ಕಾಂಗ್ರೆಸ್ ಮುಖಂಡರು ಚುನಾವಣೆ ಸಮಯ ತಿಂಗಳಿಗೆ 15 ಸಾವಿರ ವೇತನ ನೀಡುವುದಾಗಿ ಭರವಸೆ ಕೊಟ್ಟು ಗೆದ್ದ ಮೇಲೆ ಮೋಸ ಮಾಡುತ್ತಿದ್ದಾರೆ ಎಂದು ಆಪಾದಿಸಿದರು.

ತಾಲೂಕಿನಾದ್ಯಂತ ಬುಧವಾರ ಅಂಗನವಾಡಿ ಕೇಂದ್ರಗಳನ್ನು ಬಂದ್ ಮಾಡಿದ ಕಾರ್ಯಕರ್ತೆಯರು ನಗರದ ಪ್ರಮುಖ ಬೀದಿಗಳಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ತಾಲೂಕು ಅಂಗನವಾಡಿ ಕಾರ್ಯಕರ್ತೆಯರ ಸಂಘದ ಜಿ.ಕಮಲ, ಭಾಗ್ಯ, ದಾಕ್ಷಾಯಿಣಿ, ಚಂದ್ರಮ್ಮ, ಕೃಷ್ಣವೇಣಿ, ಮಹದೇವಮ್ಮ, ಚಂದ್ರಮ್ಮ, ಸುನಂದಮ್ಮ, ಕಮಲಮ್ಮ, ರೇಖಾ ಉಪಸ್ಥಿತರಿದ್ದರು.



ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ಜು.11ಕ್ಕೆ, ನಾಡಪ್ರಭು ಕೆಂಪೇಗೌಡ ಜಯಂತಿ

ಸಾಲಿಗ್ರಾಮ, ಜು.9– ಕೃಷ್ಣರಾಜನಗರ ಹಾಗೂ ಸಾಲಿಗ್ರಾಮ ತಾಲೂಕು ಒಕ್ಕಲಿಗರ ಸಂಘದಿಂದ ಜು.11ರಂದು ನಾಡಪ್ರಭು ಕೆಂಪೇಗೌಡರ 516ನೇ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಗುವುದು ಎಂದು ಕೆ.ಆರ್.ನಗರ ಹಾಗೂ ಸಾಲಿಗ್ರಾಮ ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಶಿವರಾಂ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ಗಂಟೆಗೆ ಸಾಲಿಗ್ರಾಮ ಮತ್ತು ಕೆಆರ್.ನಗರ ಅವಳಿ ತಾಲೂಕು ಒಳಗೊಂಡಂತೆ ಕೃಷ್ಣರಾಜನಗರ ಪಟ್ಟಣದ ಪುರಸಭಾ ವೃತ್ತದಿಂದ ಪೂರ್ಣಕುಂಭ ಕಳಸ ಹೊತ್ತ ಮಹಿಳೆಯರು, ನಾದಸ್ವರ, ಡೊಳ್ಳು ಕುಣಿತ, ವೀರಗಾಸೆ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳ ಮೆರವಣಿಗೆಯೊಂದಿಗೆ ಶ್ರೀಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಹೆಚ್.ಡಿ.ದೇವೇಗೌಡ ಸಮುದಾಯ ಭವನಕ್ಕೆ ಬರಮಾಡಿಕೊಳ್ಳಲಾಗುವುದು. ನಂತರ ಶ್ರೀಗಳು ಮಾಜಿ ಸಚಿವ ಸಾ.ರಾ.ಮಹೇಶ್ ಹಾಗೂ ಗಣ್ಯರ ಸಮ್ಮುಖದಲ್ಲಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಕಂಚಿನ ಪ್ರತಿಮೆ ಅನಾವರಣಗೊಳಿಸುವ ಜೊತೆಗೆ ಗಣಪತಿ ದೇವಸ್ಥಾನ ಉದ್ಘಾಟಿಸುವರು. ಬಳಿಕ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯರಾದ ಮಂಜೇಗೌಡ, ವಿವೇಕಾನಂದ ಸೇರಿದಂತೆ ಹಲವು ಗಣ್ಯರು ಆಗಮಿಸಲಿದ್ದು, ತಾಲೂಕಿನ ಒಕ್ಕಲಿಗ ಸೇರಿದಂತೆ ಎಲ್ಲಾ ಸಮುದಾಯದ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ತಾಲೂಕು ಒಕ್ಕಲಿಗರ ಸಂಘದ ಉಪಾಧ್ಯಕ್ಷ ಹೊಸೂರು ಕುಚೇಲ, ನಿರ್ದೇಶಕರಾದ ಮಿರ್ಲೆ ರಾಧಾಕೃಷ್ಣ, ಪ್ರಕಾಶ್, ಮೇಲೂರು ನರೇಂದ್ರ ಕುಮಾರ್ ಮತ್ತಿತರರಿದ್ದರು.



ಸುದ್ದಿಗೋಷ್ಠಿಯಲ್ಲಿ ಶಿವರಾಂ ಮಾತನಾಡಿದರು.

ಆಸಕ್ತಿ, ಶ್ರದ್ಧೆ ಇದ್ದಲ್ಲಿ ನಾವೇ ವ್ಯಕ್ತಿತ್ವ ರೂಪಿಸಿಕೊಳ್ಳಬಹುದು

ವ್ಯಕ್ತಿತ್ವ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕಿ ಡಾ.ನವಿತಾ ತಿಮ್ಮಯ್ಯ



ಕಾರ್ಯಕ್ರಮವನ್ನು ಪ್ರಾಧ್ಯಾಪಕಿ ಡಾ.ನವಿತಾ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಜು.9– ಆಸಕ್ತಿ ಮತ್ತು ಶ್ರದ್ಧೆ ಇದ್ದಲ್ಲಿ ನಮ್ಮ ವ್ಯಕ್ತಿತ್ವವನ್ನು ನಾವೇ ರೂಪಿಸಿಕೊಳ್ಳಬಹುದು ಎಂದು ಮೈಸೂರು ವಿವಿ ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ಪ್ರಾಧ್ಯಾಪಕಿ ಡಾ.ನವಿತಾ ತಿಮ್ಮಯ್ಯ ತಿಳಿಸಿದರು.

ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ಮತ್ತು ಆಂತರಿಕ ಗುಣಮಟ್ಟ ಮತ್ತು ಭರವಸೆ ಕೋಶದ ಸಹಯೋಗದಲ್ಲಿ ಆಯೋಜಿಸಲಾಗಿದ್ದ ವ್ಯಕ್ತಿತ್ವ ಅಭಿವೃದ್ಧಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಒಬ್ಬ ವ್ಯಕ್ತಿ ಸರ್ಕಾರಿ ಉದ್ಯೋಗ ಹೊಂದಬೇಕಾದರೆ ಜ್ಞಾನದ ದಾಹ ನೀಗಿಸಿಕೊಂಡು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತಮವಾಗಿ ಭಾಗವಹಿಸಿದರೆ ಮಾತ್ರ ಸಾಧ್ಯ ಎಂದು ತಿಳಿಸಿದರು.

ರಾಜ್ಯದಲ್ಲಿ ಶೇ.100ಕ್ಕೆ ಕೇವಲ ಶೇ.28ರಷ್ಟು ವಿದ್ಯಾರ್ಥಿಗಳು ಮಾತ್ರ ಉನ್ನತ ವ್ಯಾಸಾಂಗಕ್ಕೆ ಒಲವು ವ್ಯಕ್ತಪಡಿಸುತ್ತಿದ್ದಾರೆ. ಉಳಿದ ಶೇಕಡವಾರು ಮಂದಿ ಮದುವೆ ಮತ್ತು ದುಡಿಮೆಯತ್ತ ಸಾಗುತ್ತಿದ್ದಾರೆ ಎಂದು ಬೇಸರಿಸಿದ ಅವರು ವಿದ್ಯಾರ್ಥಿಗಳು ಸಾಧನೆ ತೋರಬೇಕಾದರೆ ಪುಸ್ತಕದ ಹುಳುವಾಗದೇ ಇತರೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ಭಾಗವಹಿಸಿಕೊಳ್ಳಬೇಕು. ವಿದ್ಯಾರ್ಥಿಗಳು ರ್‍ಯಾಂಕ್ ಮತ್ತು ಗೋಲ್ಡ್ ಮೆಡಲ್‌ಗಾಗಿ ಓದದೇ ಆಸೆ ಮತ್ತು ಹಸಿವಿನಿಂದ ಓದಬೇಕು ಆಗ ಯಶಸ್ಸು ಸಾಧ್ಯ ಎಂದರು.

ಪ್ರಾಂಶುಪಾಲ ಜೆ.ಎನ್.ವೆಂಕಟೇಶ್ ಮಾತನಾಡಿ, ನಮ್ಮ ಕಾಲೇಜು ಮೈಸೂರು ವಿಶ್ವವಿದ್ಯಾಲಯ ಮಟ್ಟದಲ್ಲಿ ಹೆಚ್ಚಿನ ಮನ್ನಣೆ ಗಳಿಸಿದೆ. ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಚಿನ್ನದ ಪದಕಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆದಿದ್ದಾರೆ. ಅಲ್ಲದೇ ವಿವಿಧ ರಾಷ್ಟ್ರಮಟ್ಟದ ಪೆರೇಡ್‌ಗಳಲ್ಲಿ ನಮ್ಮ ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ನಮ್ಮ ಕಾಲೇಜು ಇತರೆ ಕಾಲೇಜುಗಳಿಗೆ ಮಾದರಿಯಾಗಿದೆ ಎಂದರು.

ಮೈಸೂರು ವಿವಿ ವಿಶ್ರಾಂತ ಪ್ರಾಧ್ಯಾಪಕ ಚಂದ್ರೇಗೌಡ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಇರುವ ಉತ್ಸಾಹ, ಆಸಕ್ತಿಯನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ವಿದ್ಯೆ ತಿಳಿಸುತ್ತದೆ. ಹಂಚಿದಷ್ಟು ವಿದ್ಯೆ ಹೆಚ್ಚುತ್ತದೆ. ಆದ್ದರಿಂದ ವಿದ್ಯೆ ದಾನ ಮಾಡಲು ಹಿಂಜರಿಯುವುದಿಲ್ಲ. ವಿದ್ಯೆ ದಾನ ಮಾಡುವಂತಹ ಸಂದರ್ಭದಲ್ಲಿ ಅದನ್ನು ಕಲಿಯಲು ಹಿಂಜರಿಯಬೇಡಿ ಎಂದರು.

ಎನ್‌ಎಸ್‌ಎಸ್ ಸಲಹಾ ಸಮಿತಿ ಸದಸ್ಯ ಎ.ಜೆ.ಕಾಳೇಗೌಡ, ದೈಹಿಕ ಶಿಕ್ಷಣ ನಿರ್ದೇಶಕ ಬಿ.ಕಲ್ಲೇಶ್‌ಗೌಡ, ಸಿದ್ದೇಗೌಡ, ಉಪನ್ಯಾಸಕರಾದ ಬಿ.ಸಿ.ಮಹೇಂದ್ರ, ಚನ್ನಕೇಶವ ನಾಯಕ, ಸಿದ್ದರಾಜು, ರವೀಶ್, ಅವೀನಾ, ಮಹೇಶ್, ಚಿಕ್ಕದೇವಿ, ಪ್ರಕಾಶನಾಯಕ, ಮಹದೇವ, ರವಿ, ಚಂದನ, ಸಂಗೀತಾ, ಶಾಂಭವಿ, ದಿಲೀಪ್, ಸೋಮಶೇಖರ್ ಎಂದರು.

ಕಾರ್ಮಿಕ ಸಂಘಟನೆಗಳ ಮುಷ್ಕರ ಬೆಂಬಲಿಸಿ ಪ್ರತಿಭಟನೆ

ತಿ.ನರಸೀಪುರ, ಜು.9– ಕಾರ್ಮಿಕ ಸಂಘಟನೆಗಳ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಬೆಂಬಲಿಸಿ ಪಟ್ಟಣದಲ್ಲಿ ಬುಧವಾರ ಅಕ್ಷರ ದಾಸೋಹ ನೌಕರರು ಪ್ರತಿಭಟನೆ ನಡೆಸಿ, ರಾಜ್ಯ ಸರ್ಕಾರಕ್ಕೆ ಹಕ್ಕೊತ್ತಾಯದ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದರು.

ಡಿವೈಎಫ್‌ಐ ಅಧ್ಯಕ್ಷ ಸಿ.ಪುಟ್ಟಮಲ್ಲಯ್ಯ ನೇತೃತ್ವದಲ್ಲಿ ಮೆರವಣಿಗೆ ಮೂಲಕ ತಾಲೂಕು ಕಚೇರಿ ಆವರಣಕ್ಕೆ ಆಗಮಿಸಿದ ಅಕ್ಷರ ದಾಸೋಹ ನೌಕರರು ಕಾರ್ಮಿಕ ವಿರೋಧಿ ಕಾಯ್ದೆಗಳನ್ನು ಆಡಳಿತರೂಢ ಸರ್ಕಾರ ಹಿಂಪಡೆಯಬೇಕು ಎಂದು ಆಗ್ರಹಿಸಿದರಲ್ಲದೆ, ಹಲವು ದಶಕಗಳಿಂದ ಸರ್ಕಾರಿ ಶಾಲೆಗಳಲ್ಲಿ ಅಕ್ಷರ ದಾಸೋಹ ಯೋಜನೆ ಅನುಷ್ಠಾನಕ್ಕೆ ದುಡಿಯುತ್ತಿರುವ ನೌಕರರ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟಿಸಿದರು. ಅಲ್ಲದೆ ರೈತ ವಿರೋಧಿ ಕಾಯ್ದೆಗಳನ್ನು ಹಿಂಪಡೆಯಬೇಕು. ಪಟ್ಟಣದಲ್ಲಿ ಆಗಬೇಕಿರುವ ಅಭಿವೃದ್ಧಿ ಕಾರ್ಯಗಳ ಪಟ್ಟಿಯನ್ನು ಮುಖ್ಯಮಂತ್ರಿಗಳಿಗೆ ತಾಲೂಕು ಆಡಳಿತದ ಮೂಲಕ ಸಲ್ಲಿಸಿದರು.

ಸ್ಥಳಕ್ಕಾಗಮಿಸಿದ ಗ್ರೇಡ್–2 ತಹಸೀಲ್ದಾರ್ ರಾಜಕಾಂತ್ ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಸಾವಿತ್ರಮ್ಮ, ಮಹದೇವಮ್ಮ, ಗೌರಮ್ಮ, ಮಂಜುಳಾ, ಜರಿನಾಥಾಜ್, ನೀಲಾವತಿ, ರತ್ನಮ್ಮ, ಮಂಗಳಮ್ಮ, ನೀಲಾ, ಸುಜಾತ ಕುಮಾರಿ, ಸೌಮ್ಯ, ನಾಗಮ್ಮ, ಪ್ರೇಮ, ನಾಗರತ್ನಮ್ಮ, ಸಿದ್ದರಾಜಮ್ಮ, ಭಾಗ್ಯಲಕ್ಷ್ಮಿ, ವಸಂತ, ಉಮಾದೇವಿ, ನಿಂಗಮ್ಮಣ್ಣಿ, ಪ್ರಮೀಳಾ, ರತ್ನಮ್ಮ, ಶಿವರುದ್ರಮ್ಮ, ಜ್ಯೋತಿ, ರೇಣುಕಾ, ಚಂದ್ರಮ್ಮ, ಸುಧಾಮಣಿ, ಪ್ರೇಮ, ಲತಾ, ಶಶಿರೇಖಾ, ದೊಡ್ಡನಾಗಮ್ಮ, ಸಿದ್ದಮ್ಮ ಹಾಗೂ ಇತರರು ಇದ್ದರು.



ಕಾರ್ಮಿಕ ಸಂಘಟನೆಗಳ ಮುಷ್ಕರ ಬೆಂಬಲಿಸಿ ಅಕ್ಷರ ದಾಸೋಹ ನೌಕರರು ಪ್ರತಿಭಟನೆ ನಡೆಸಿದರು.

ಹಳಿಯೂರು ಶಾಲೆ ನಿವೃತ್ತ ಮುಖ್ಯ ಶಿಕ್ಷಕಿಗೆ ಬೀಳ್ಕೊಡುಗೆ



ಕಾರ್ಯಕ್ರಮದಲ್ಲಿ ನಿವೃತ್ತ ಮುಖ್ಯ ಶಿಕ್ಷಕಿ, ಬಿಸಿಯೂಟ ತಯಾರಕಿಯನ್ನು ಸನ್ಮಾನಿಸಲಾಯಿತು.

ಚುಂಚನಕಟ್ಟೆ, ಜು.9– ಗ್ರಾಮೀಣ ಭಾಗದಲ್ಲಿ ಗುಣಮಟ್ಟದ ಶಿಕ್ಷಣ ನೀಡಿ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಶಿಕ್ಷಕರ ಹೆಸರು ವಿದ್ಯಾರ್ಥಿಗಳ ಹೃದಯದಲ್ಲಿ ಶಾಶ್ವತ ಸ್ಥಾನ ಪಡೆಯಲಿದೆ ಎಂದು ಕೆ.ಅರ್.ನಗರ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮಾಜಿ ನಿರ್ದೇಶಕಿ ರೇಣುಕಾ ಧರ್ಮರಾಜ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಹಳಿಯೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಕೆ.ಸಿ.ಶೋಭಾವತಿ ಅವರ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಜ್ಞಾನಾರ್ಜನೆ, ಅವರನ್ನು ಸಮಾಜದ ಮುಖ್ಯವಾಹಿನಿಗೆ ಕರೆ ತರುವಲ್ಲಿ ಶಿಕ್ಷಕರ ಪಾತ್ರ ಪ್ರಮುಖವಾಗಿದೆ. ಸುಶಿಕ್ಷಿತ ಸಮಾಜ ನಿರ್ಮಾಣದ ಜವಾಬ್ದಾರಿ ಹಾಗೂ ಹೊಣೆಗಾರಿಕೆ ಶಿಕ್ಷಕರ ಮೇಲಿದೆ. ಶಿಕ್ಷಕರು ಕಠಿಣ ಪರಿಶ್ರಮದಿಂದ, ಪ್ರಾಮಾಣಿಕತೆಯಿಂದ ವಿದ್ಯಾದಾನ ಮಾಡಬೇಕು. ಈ ನಿಟ್ಟಿನಲ್ಲಿ ವೃತ್ತಿ ಜೀವನದಲ್ಲಿ ಶಿಕ್ಷಣ ನೀಡಿದ ಶೋಭಾವತಿ ಅವರ ನಿವೃತ್ತಿ ಜೀವನ ಸುಖರವಾಗಿರಲಿ ಎಂದು ಹಾರೈಸಿದರು.

ಈ ವೇಳೆ ನಿವೃತ್ತ ಮುಖ್ಯ ಶಿಕ್ಷಕಿ ಕೆ.ಸಿ.ಶೋಭಾವತಿ ಹಾಗೂ ನಿವೃತ್ತ ಬಿಸಿಯೂಟ ತಯಾರಕಿ ರಾಣಮ್ಮ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಚೇತನ್, ಶಿಕ್ಷಕ ಜಗದೀಶ್, ಅತಿಥಿ ಶಿಕ್ಷಕರಾದ ಸ್ವಾಮಿ, ಸಂಜನಾ, ಅಡುಗೆ ಸಿಬ್ಬಂದಿ ಜ್ಯೋತಿ ಸೇರಿದಂತೆ ಮತ್ತಿತರರಿದ್ದರು.

ಪರಿಸರ ಜಾಗೃತಿ ಕಾರ್ಯಕ್ರಮ



ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಬೆಟ್ಟದಪುರ ಯೋಜನಾ ಕಚೇರಿ ವ್ಯಾಪ್ತಿಯ ಕಿತ್ತೂರು ವಲಯದ ಹಂಡಿತವಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಪರಿಸರ ಜಾಗೃತಿ ಕಾರ್ಯಕ್ರಮ ನಡೆಯಿತು.

ರೈತ, ಕಾರ್ಮಿಕ ವಿರೋಧಿ ನೀತಿ ಖಂಡಿಸಿ

ಸಿಐಟಿಯು ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಪ್ರತಿಭಟನೆ

ಹುಣಸೂರು, ಜು.9– ಸಿಐಟಿಯು ಸೇರಿದಂತೆ ದೇಶದ 11 ಕಾರ್ಮಿಕ ಸಂಘಟನೆಗಳು ಕರೆ ನೀಡಿದ್ದ ಹೋರಾಟ ಬೆಂಬಲಿಸಿ, ರೈತ ಹಾಗೂ ಕಾರ್ಮಿಕ ವಿರೋಧಿ ನೀತಿ ಖಂಡಿಸಿ ಬುಧವಾರ ಸಿಐಟಿಯು ನೇತೃತ್ವದಲ್ಲಿ ವಿವಿಧ ಸಂಘಟನೆಗಳು ನಗರದಲ್ಲಿ ಪ್ರತಿಭಟನೆ ನಡೆಸಿದವು.

ನಗರದ ಸಂವಿಧಾನ ಸರ್ಕಲ್‌ನಲ್ಲಿ ಜಮಾಯಿಸಿದ ಸಿಐಟಿಯು, ರಾಜ್ಯ ರೈತ ಸಂಘ, ಕರ್ನಾಟಕ ಪ್ರಾಂತ ರೈತ ಸಂಘ, ವಿಮಾ ಪ್ರತಿನಿಧಿಗಳ ಸಂಘದ ಸದಸ್ಯರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಕಾರ್ಮಿಕ ವಿರೋಧಿ ನೀತಿಗಳು ವಾಪಸ್ಸಾಗಲಿ ಕಾರ್ಮಿಕರ ಬೇಡಿಕೆಗಳು ಈಡೇರಲಿ ಕಾರ್ಮಿಕರ ಕಾನೂನಿಗೆ ತಿದ್ದುಪಡಿ ಬೇಡವೇ ಬೇಡ ಎಂದು ಘೋಷಣೆ ಕೂಗುತ್ತ ಮೆರವಣಿಗೆ ನಡೆಸಿದರು.

ಬಳಿಕ ಅಂಚೆ ಕಚೇರಿ ಬಳಿ ಪ್ರತಿಭಟನಾ ಸಭೆ ಉದ್ದೇಶಿಸಿ ಮಾತನಾಡಿದ ಕಾರ್ಮಿಕ ಮುಖಂಡ ಕೆ.ಬಸವರಾಜು, ಕಾರ್ಮಿಕರು ತ್ಯಾಗ ಬಲಿದಾನಗಳಿಂದ ಪಡೆದ ಹಕ್ಕುಗಳನ್ನು ಆಳುವ ಸರ್ಕಾರಗಳು ದಮನ ಮಾಡಲು ಹೊರಟಿವೆ. ಹೀಗಾಗಿ ಕಾರ್ಮಿಕರು ಹೋರಾಟಕ್ಕೆ ಸಜ್ಜಾಗಬೇಕೆಂದು ಕರೆ ನೀಡಿದ ಅವರು, ಎಲ್ಲಾ ವಲಯದಲ್ಲೂ ಕಾರ್ಮಿಕರಿಗೆ ಭದ್ರತೆ ಮತ್ತು ಕನಿಷ್ಠ ವೇತನ ಇಲ್ಲದೆ ಅವರ ಶ್ರಮಕ್ಕೆ ಬೆಲೆ ಇಲ್ಲದಂತಾಗಿದೆ. ಕಾರ್ಮಿಕರನ್ನು ಗುಲಾಮಗಿರಿಗೆ ತಳ್ಳುವ ಭಾಗವಾಗಿ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರ ಹೊರಟಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, ಎಲ್ಲಾ ಕಾರ್ಮಿಕರಿಗೂ ಕನಿಷ್ಠ ವೇತನ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್ ಮಾತನಾಡಿ, ರೈತ, ಕಾರ್ಮಿಕರನ್ನು ಶೋಷಣೆ ಮಾಡಲು ಕೇಂದ್ರ ಸರ್ಕಾರ ಹವಣಿಸುತ್ತಿದೆ. ಇದಕ್ಕಾಗಿ ನಮ್ಮ ಭೂಮಿಯನ್ನು ಕಿತ್ತುಕೊಳ್ಳಲು ಕಾನೂನು ಮಾಡುತ್ತಾರೆ. ಆದರೆ ರೈತನ ಬೆಳೆಗಳಿಗೆ ಬೆಂಬಲ ಬೆಲೆ ಜಾರಿಗೊಳಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಿದ್ಧವಿಲ್ಲ. ಇಂತಹ ರೈತ, ಕಾರ್ಮಿಕ ವಿರೋಧಿ ನೀತಿ ವಿರುದ್ಧ ತೀವ್ರ ಹೋರಾಟ ಮಾಡಬೇಕು ಎಂದರು.

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಸಿಐಟಿಯು ತಾಲೂಕು ಸಂಚಾಲಕ ವಿ.ಬಸವರಾಜು, ಅಂಗನವಾಡಿ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ಪುಷ್ಪಲತಾ, ಬಿಸಿಯೂಟ ನೌಕರರ ಸಂಘದ ಅಧ್ಯಕ್ಷೆ ಮಂಜುಳ, ವಿಮಾ ಪ್ರತಿನಿಧಿಗಳ ಸಂಘದ ಅಧ್ಯಕ್ಷ ಕೆ.ಸ್ವಾಮಿ, ಜಗದೀಶ್, ಅಂಗನವಾಡಿ ನೌಕರ ಸಂಘದ ತಾಲೂಕು ಅಧ್ಯಕ್ಷೆ ಮಂಗಳಗೌರಮ್ಮ, ಪ್ರತಿಭಾ, ಶೋಭಾ, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಚಿಕ್ಕಣ್ಣ ಗೌಡ, ತಾಲೂಕು ಅಧ್ಯಕ್ಷ ಚಂದ್ರಶೇಖರ್, ಪಂಚಾಯ್ತಿ ನೌಕರ ಸಂಘದ ಲೋಕೇಶ್, ದಿನೇಶ್, ರವಿಕುಮಾರ್, ವಿಮಾ ಪ್ರತಿನಿಧಿಗಳ ಸಂಘದ ಕಾರ್ಯದರ್ಶಿ ಸಿದ್ದಯ್ಯ, ರಾಧಾಕೃಷ್ಣ, ಮಹೇಶ್, ನಂಜೇಗೌಡ, ಬಿಸಿಯೂಟ ನೌಕರರ ಸಂಘದ ಶೋಭಾ, ಹೇಮಾ, ಶಿವಮ್ಮ, ದಸಂಸ ಮುಖಂಡರಾದ ರಾಮಕೃಷ್ಣ, ಸಿದ್ದೇಶ್, ರಾಜು ಸೇರಿದಂತೆ ಇನ್ನಿತರರು ಪ್ರತಿಭಟನೆಯಲ್ಲಿದ್ದರು.



ಸಿಐಟಿಯು ನೇತೃತ್ವದಲ್ಲಿ ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ಅವಿರೋಧ ಆಯ್ಕೆ



ತಿ.ನರಸೀಪುರ, ಜು.9– ತಾಲೂಕಿನ ಬನ್ನೂರು ಹೋಬಳಿ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದ ನೂತನ ನಿರ್ದೇಶಕರಾಗಿ ಸೀಹಳ್ಳಿ ಗ್ರಾಮದ ಎಸ್.ಕೆ.ರಾಜೂಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ರಮೇಶ್ ತಿಳಿಸಿದ್ದಾರೆ.

ರಾಜಮ್ಮ ನಿಧನ



ಸುತ್ತೂರು, ಜು.9– ನಂಜನಗೂಡು ತಾಲೂಕಿನ ತಗಡೂರು ಗ್ರಾಮದ ರಾಜಮ್ಮ(52) ಬುಧವಾರ ನಿಧನರಾದರು. ಮೃತರು ತಾಲೂಕು ಶಿಕ್ಷಕರ ಸಂಘದ ಅಧ್ಯಕ್ಷ ಮುದ್ದುಮಾದೇಗೌಡ, ಓರ್ವ ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೇಂದ್ರದ ವಿರುದ್ಧ ಕಾರ್ಮಿಕರ ಪ್ರತಿಭಟನಾ ಮೆರವಣಿಗೆ

ಕಾರ್ಮಿಕರ ಕಾನೂನು ತಿದ್ದುಪಡಿಗೆ ವಿರೋಧ, ಘೋಷಣೆಗಳ ಕೂಗಿ ಆಕ್ರೋಶ

ಮೈಸೂರು, ಜು.9(ಜಿಎ)–ಮೈಸೂರಿನಲ್ಲಿ ಕಾರ್ಮಿಕರು ಕೇಂದ್ರ ಸರ್ಕಾರದ ವಿರುದ್ಧ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸುವ ಮೂಲಕ ಕಾರ್ಮಿಕ ವಿರೋಧಿ ನೀತಿ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು.

ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್, ಕಾರ್ಮಿಕ ಸಂಘಟನೆ ಸೇರಿದಂತೆ ವಿವಿಧ ಸಂಘಟನೆಗಳು ದೇಶ ವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದ ಹಿನ್ನೆಲೆಯಲ್ಲಿ ಅದನ್ನು ಬೆಂಬಲಿಸಿ, ಮೈಸೂರಿನ ವಿವಿಧ ಕೈಗಾರಿಕೆಗಳ ಸಿಬ್ಬಂದಿ, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಬ್ಯಾಂಕ್ ನೌಕರರು, ಆಸ್ಪತ್ರೆ ಸಿಬ್ಬಂದಿಗಳು ಗಾಂಧಿಚೌಕದ ಬಳಿ ಜಮಾಯಿಸಿ ಕೇಂದ್ರದ ವಿರುದ್ಧ ಘೋಷಣೆಗಳನ್ನು ಕೂಗುವ ಮೂಲಕ ಖಂಡಿಸಿದರು.

ಗಾಂಧಿ ಚೌಕದಿಂದ ಹೊರಟ ಪ್ರತಿಭಟನಾ ಮೆರವಣಿಗೆಯು ಕೆ.ಟಿ.ಸ್ಟ್ರೀಟ್, ಇರ್ವಿನ್ ರಸ್ತೆ, ಆಯುರ್ವೇದ ವೃತ್ತ ಮೂಲಕ ಸಾಗಿ ಸಯ್ಯಾಜಿರಾವ್ ರಸ್ತೆ, ಮಕ್ಕಾಜಿ ಚೌಕದ ಮೂಲಕ ಗಾಂಧಿ ಚೌಕಕ್ಕೆ ಬಂದು ತಲುಪಿತು. ಜೆಕೆ ಟೈರ್ಸ್, ಎಸ್‌ಕೆಟಿ ಟೆಕ್ನಾಲಜಿಸ್ ಕಡಕೊಳ, ಪಾಲಿಮಾರ್ ಎಂಪ್ಲಾಯಿಸ್ ಯೂನಿಯನ್ ಸೇರಿದಂತೆ ಮೈಸೂರಿನ 50ಕ್ಕೂ ಹೆಚ್ಚು ಕಾರ್ಖಾನೆಗಳ ನೌಕರರ ಪಾಲ್ಗೊಂಡು ಮೆರವಣಿಗೆಗೆ ಸಾಥ್ ನೀಡಿದರು.



ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್, ಕಾರ್ಮಿಕ ಸಂಘಟನೆ ಸೇರಿದಂತೆ ವಿವಿಧ ಸಂಘಟನೆಗಳು ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದ ಹಿನ್ನೆಲೆಯಲ್ಲಿ ಮೈಸೂರಿನ ವಿವಿಧ ಕೈಗಾರಿಕೆಗಳ ಸಿಬ್ಬಂದಿಗಳು, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಬ್ಯಾಂಕ್ ನೌಕರರು, ಆಸ್ಪತ್ರೆ ಸಿಬ್ಬಂದಿಗಳು ಗಾಂಧಿಚೌಕದ ಬಳಿ ಜಮಾಯಿಸಿ ಕೇಂದ್ರದ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರ ಬಂಡವಾಳಗಾರರ ಪರವಾಗಿ ಕಾರ್ಮಿಕರ ಕಾನೂನುಗಳನ್ನು ತಿದ್ದುಪಡಿ ಮಾಡಿದೆ ಇದರಿಂದಾಗಿ ಕಾರ್ಖಾನೆಗಳು ಕಾರ್ಮಿಕರನ್ನು ಜೀತದಾಳುಗಳಂತೆ ದುಡಿಸಿಕೊಳ್ಳಲಾಗುತ್ತಿದೆ. ಕೇಂದ್ರ ಸರ್ಕಾರವು 8 ಗಂಟೆ ಕೆಲಸದ ಅವಧಿ, ಖಾಯಂ ಕೆಲಸ, ಕೆಲಸಕ್ಕೆ ತಕ್ಕ ವೇತನ, ಸುರಕ್ಷತೆ, ಮುಷ್ಕರದ ಹಕ್ಕು, ಸಂಘ ಕಟ್ಟುವ ಹಕ್ಕು ಸೇರಿದಂತೆ ವಿವಿಧ ಹಕ್ಕುಗಳು ಇಲ್ಲದಂತೆ ಮಾಡಿ ಕಾರ್ಮಿಕರನ್ನು ಗುಲಾಮರಾಗಿ ಮಾಡುವುದು ನೀತಿಯಾಗಿದೆ ಎಂದು ಪ್ರತಿಭಟನಾಕಾರರು ದೂರಿದರು.

ಗುತ್ತಿಗೆ, ಹೊರಗುತ್ತಿಗೆ, ನಿಗದಿತ ಅವಧಿಯ ಉದ್ಯೋಗ, ಅಪ್ರೆಂಡಿಸ್, ಟ್ರೈನಿ, ನ್ಯಾಪ್ ಹೆಸರಿನಲ್ಲಿ ಕಾರ್ಮಿಕರನ್ನು ನೇಮಕಾತಿ ಮಾಡಿಕೊಳ್ಳುವುದನ್ನು ನಿಲ್ಲಿಸಬೇಕು. ಎಲ್ಲಾ ರೀತಿಯ ಕಾರ್ಮಿಕರಿಗೆ ಕನಿಷ್ಠ ಮಾಸಿಕ 9 ಸಾವಿರ ರೂ. ಜೊತೆಗೆ ಪಿಂಚಣಿ ಹಾಗೂ ಸಾಮಾಜಿಕ ಭದ್ರತೆ ಖಾತ್ರಿಪಡಿಸಬೇಕು. ಇಎಸ್ಐ, ಪಿಎಫ್, ಬೋನಸ್ ಪಾವತಿಗೆ ಇರುವ ಎಲ್ಲಾ ವೇತನ ಮಿತಿಯನ್ನು ತೆಗೆಯಬೇಕು ಮತ್ತು ಗ್ರಾಚ್ಯುಟಿ ಪರಿಹಾರ 90 ದಿನಕ್ಕೆ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಕೇಂದ್ರವು ಆಹಾರ ಔಷಧಿ, ಕೃಷಿ ಸಾಮಾಗ್ರಿಗಳು ಸೇರಿದಂತೆ ಅಗತ್ಯ ವಸ್ತುಗಳ ಮೇಲಿನ ಜಿಎಸ್‌ಟಿ ತೆಗೆಯಬೇಕು. ಪೆಟ್ರೋಲ್, ಡಿಸೇಲ್ ಮತ್ತು ಅಡುಗೆ ಅನಿಲದ ಮೇಲಿರುವ ಕೇಂದ್ರೀಯ ಅಬಕಾರಿ ಸುಂಕ ಇಳಿಸುವ ಮೂಲಕ ಬೆಲೆ ಏರಿಕೆಯನ್ನು ನಿಯಂತ್ರಿಸಲು ಮುಂದಾಗಬೇಕಿದೆ ಎಂದು ಒತ್ತಾಯಿಸಿದರು.

ಈ ವೇಳೆ ಎಐಟಿಯುಸಿ ಕಾರ್ಮಿಕ ಸಂಘಟನೆಯ ಸಹ ಸಂಚಾಲಕ ಎನ್.ಕೆ. ದೇವದಾಸ್, ಕಾರ್ಮಿಕ ಸಂಘಟನೆ ಮುಖಂಡರಾದ ಚಂದ್ರಶೇಖರ ಮೇಟಿ, ಎನ್.ಕೆ. ಬಾಲಾಜಿರಾವ್, ಹೆಚ್.ಎಂ. ಬಸವರಾಜು, ಸೋಮರಾಜ ಅರಸ್, ಯಶೋಧರ್ ಮತ್ತಿತರರು ಪಾಲ್ಗೊಂಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಫಿನಿಕ್ಸ್ (ತ) + ಮಾರ್ಗನ್ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸಿತಾರೆ ಜಮೀನ್ ಪರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕುಲದಲ್ಲಿ ಕೀಳಾವುದೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
ಫ್ರೀಡಂ (ತ)	4 ಪ್ರದರ್ಶನಗಳು
ಸಂಗಂ	
ಪೆನ್‌ಡ್ರೈವ್ (ಕ)	4 ಪ್ರದರ್ಶನಗಳು
ಲಿಡೋ	
ಕುಬೇರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ) + ನವಗ್ರಹ (ಕ)	1+3 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸ್ವಚ್ಛತಾ ಮಹಿಳಾ ಸಿಬ್ಬಂದಿಗೆ ಬಾಗಿನ ಸಮರ್ಪಣೆ


ಸ್ವಚ್ಛತಾ ಕಾರ್ಯ ನಿರ್ವಹಿಸುವ ಮಹಿಳಾ ಸಿಬ್ಬಂದಿಗಳಿಗೆ ಚಾಮುಂಡಿಬೆಟ್ಟದ ದೇವಸ್ಥಾನದ ಎದುರಿನಲ್ಲಿ ಬಾಗಿನ ವಿತರಿಸಲಾಯಿತು.

ಮೈಸೂರು, ಜು.9– ಶ್ರೀದುರ್ಗಾ ಫೌಂಡೇಶನ್ ವತಿಯಿಂದ ಆಷಾಢ ಮಾಸದ ಪ್ರಯುಕ್ತ ಪ್ರತಿ ವರ್ಷದಂತೆ ಚಾಮುಂಡಿ ಬೆಟ್ಟದಲ್ಲಿ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸುವ ಮಹಿಳಾ ಸಿಬ್ಬಂದಿ ವರ್ಗಕ್ಕೆ ಸೀರೆ, ಬಳೆ, ಅರಿಶಿನ–ಕುಂಕುಮ ಒಳಗೊಂಡ ಬಾಗಿನ ಸಮರ್ಪಣೆ ಮಾಡಲಾಯಿತು.

ಬಳಿಕ ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್ ಮಾತನಾಡಿ, ಪುರಾಣ ಪ್ರಸಿದ್ಧ ಚಾಮುಂಡಿಬೆಟ್ಟಕ್ಕೆ ಆಷಾಢ ಮಾಸದಲ್ಲಿ ಚಾಮುಂಡಿ ದೇವಿಗೆ ವಿಶೇಷ ಪ್ರಾರ್ಥನೆ ಪೂಜಾ ಕೈಂಕರ್ಯ ಸೇವೆ ಸಲ್ಲಿಸಲು ಮಹಿಳೆಯರು ಹೆಚ್ಚು ಪ್ರಾಮುಖ್ಯತೆ ನೀಡುತ್ತಾರೆ. ಪ್ರತಿನಿತ್ಯ ಸೇವೆ ಸಲ್ಲಿಸುವ ಮಹಿಳಾ ಭದ್ರತಾ ಮತ್ತು ಸ್ವಚ್ಛತಾ ಸಿಬ್ಬಂದಿಗಳನ್ನು ಗೌರವಿಸಿ ಬಾಗಿನ ಸಮರ್ಪಣೆ ಮಾಡುತ್ತಿರುವುದು ಅರ್ಥಪೂರ್ಣವಾದ ಆಚರಣೆ ಎಂದರು. ಬೆಟ್ಟಕ್ಕೆ ಬರುವ ಭಕ್ತಾದಿಗಳು ಭಕ್ತಿ ಮನೋಭಾವ ಜೊತೆಯಲ್ಲೇ ಪ್ಲಾಸ್ಟಿಕ್ ತರದ ಹಾಗೇ ಪರಿಸರ ಸಂರಕ್ಷಣೆ ಕಾಳಜಿ ಸಂಕಲ್ಪ ತೊಡಬೇಕು. ಧಾರ್ಮಿಕ ಪರಂಪರೆ ಉಳಿಯಬೇಕಾದರೆ ಪರಿಸರ ಸಂರಕ್ಷಣೆಯೂ ಸಹ ಬಹಳ ಮುಖ್ಯವಾಗುತ್ತದೆ ಎಂದರು.

ಮಹಿಳೆಯರಲ್ಲಿ ಧರ್ಮ ಜಾಗೃತಿ ಮತ್ತು ಧಾರ್ಮಿಕ ಸಾಮರಸ್ಯದ ಮನೋಭಾವ ಬೆಳೆಸುವ ನಿಟ್ಟಿನಲ್ಲಿ ಪ್ರತಿವರ್ಷದಂತೆ ಶ್ರೀ ದುರ್ಗಾ ಫೌಂಡೇಶನ್ ವತಿಯಿಂದ ಆಯೋಜಿಸುತ್ತಾ ಬಂದಿದ್ದೇವೆ. ಮುಂದಿನ ದಿನದಲ್ಲಿ ಮಹಿಳಾ ಸಂಘಟನೆಗಳ ಸಹಯೋಗದೊಂದಿಗೆ ಶಾಲಾ ಕಾಲೇಜಿನ ವಿದ್ಯಾರ್ಥಿನಿಯರು ಮತ್ತು ಮಹಿಳಾ ಕಾರ್ಮಿಕರಲ್ಲಿ ಅರಿಶಿನ ಕುಂಕುಮದ ಮಹತ್ವ ಮತ್ತು ಪುರಾಣ ಪ್ರಸಿದ್ಧ ಹಬ್ಬಗಳ ಪರಂಪರೆ ಮತ್ತು ಆಚರಣೆಯ ಮಹತ್ವ ಸಾಮರಸ್ಯದ ಬಗ್ಗೆ ಜಾಗೃತಿ ಮೂಡಿಸಲಾಗುವುದು ಎಂದರು.

ಚಾಮುಂಡಿ ಬೆಟ್ಟದ ಪರಿಸರ ಸೌಂದರ್ಯ ಕಾಪಾಡಲು ಸರ್ಕಾರ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣ ನಿಷೇಧಿಸಿದೆ ಅದರ ನಿಯಮಗಳನ್ನು ಸಾರ್ವಜನಿಕರು ಪಾಲಿಸಿ ಕೈಜೋಡಿಸಿದರೇ ಮಾತ್ರ ಚಾಮುಂಡಿ ಬೆಟ್ಟ ಪ್ಲಾಸ್ಟಿಕ್ ಮುಕ್ತವಲಯವಾಗುತ್ತದೆ ಎಂದರು.

ಕೆವಿಕೆ ಫೌಂಡೇಶನ್ ಅಧ್ಯಕ್ಷೆ ಋಷಿ ವಿನು, ಸವಿತಾ ಘಾಟ್ಕೆ, ಜಯಶ್ರೀ ಶಿವರಾಮ್, ರೂಪ, ವಿದ್ಯಾ, ಸಮಾಜ ಸೇವಕರಾದ ಶಾಂತಮ್ಮ, ಇನ್ನಿತರರು ಹಾಜರಿದ್ದರು.

ಕಲಾ ತರಬೇತಿ ಶಿಬಿರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು.9– ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 2025–26 ನೇ ಸಾಲಿನ ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡ ಉಪ ಯೋಜನೆಯಡಿ ಕಲಾ ತರಬೇತಿ ಶಿಬಿರವನ್ನು ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯ ಹಾಗೂ ಪರಿಶಿಷ್ಟವರ್ಗಗಳ ಕಲ್ಯಾಣ ಇಲಾಖಾ ವ್ಯಾಪ್ತಿಯ ಮೆಟ್ರಿಕ್ ಪೂರ್ವ ಮತ್ತು ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಆಯೋಜಿಸಲಾಗುತ್ತಿದೆ. ತರಬೇತಿಯು ಆರು ತಿಂಗಳ ಅವಧಿಯದಾಗಿದ್ದು, ಶಿಬಿರದಲ್ಲಿ ವಿದ್ಯಾರ್ಥಿಗಳಿಗೆ ಜಾನಪದ, ನೃತ್ಯ, ಸುಗಮ ಸಂಗೀತ, ಶಾಸ್ತ್ರೀಯ ಸಂಗೀತ, ಹಿಂದೂಸ್ಥಾನಿ ಸಂಗೀತ, ವಾದ್ಯ ಸಂಗೀತ ತರಬೇತಿಯನ್ನು ನೀಡಲು ಹಿರಿಯ, ಪರಿಣಿತ ಗುರುಗಳು, ಕಲಾವಿದರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ಸ್ವ–ವಿವರದೊಂದಿಗೆ ಜು.15 ರ ಸಂಜೆ 5.30 ರೊಳಗೆ ಕರ್ನಾಟಕ ಕಲಾಮಂದಿರದಲ್ಲಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸಬಹುದಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಚೇರಿ ದೂ.ಸಂ: 0821–2513225 ನ್ನು ಸಂಪರ್ಕಿಸಬಹುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ಆಶ್ಲೇಷಾ ಬಲಿ ಪೂಜೆ, ಸಹಸ್ರ ದುರ್ಗಾ ಪಾರಾಯಣ

ಮೈಸೂರು, ಜು. 9 – ಶ್ರೀ ಶಾರದಾಮೃತಂ ಧ್ಯಾನ ಸೇವಾ ಚಾರಿಟಬಲ್ ಟ್ರಸ್ಟ್ ಹಾಗೂ ಶ್ರೀ ದುರ್ಗಾ ಸಪ್ತಶತಿ ಋಷಿ ಪ್ರಜ್ಞಾ ಆಂದೋಲನದ ಸಹಯೋಗದೊಂದಿಗೆ ಜು. 12 ರಂದು ಸಂಜೆ 4 ಗಂಟೆಗೆ ನಾಗದೋಷ ಪರಿಹಾರಾರ್ಥವಾಗಿ ಉಚಿತ ಸಾಮೂಹಿಕ ಆಶ್ಲೇಷಾ ಬಲಿಪೂಜೆ ಹಾಗೂ ಜು. 13 ರಂದು ಬೆಳಗ್ಗೆ 8 ಗಂಟೆಯಿಂದ ದುರ್ಗಾ ದೀಪ ನಮಸ್ಕಾರ, ಕುಂಕುಮಾರ್ಚನೆ ಹಾಗೂ ಸಹಸ್ರ ದುರ್ಗಾ ಪಾರಾಯಣವನ್ನು ಚಾಮುಂಡಿಬೆಟ್ಟದ ತಪ್ಪಲು ಬಳಿಯ ಜೇನುಗವಿ ಅವಧೂತ ಶ್ರೀ ನಂಜುಂಡಪ್ಪನವರ ಆಶ್ರಮದಲ್ಲಿ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9535323778, 9738322428 ಸಂಪರ್ಕಿಸಬಹುದು.

ನ್ಯಾಯದ ದಿಕ್ಕು, ಮಾಹಿತಿ ಹಕ್ಕು ಕುರಿತು ರಾಜ್ಯ ಮಟ್ಟದ ತರಬೇತಿ ಕಾರ್ಯಾಗಾರ

ಮೈಸೂರು, ಜು. 9 – ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ವೇದಿಕೆ, ರಾಜ್ಯ ಘಟಕದ ವತಿಯಿಂದ ಜು. 12 ರಂದು ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ನ್ಯಾಯದ ದಿಕ್ಕು, ಮಾಹಿತಿ ಹಕ್ಕು ಕುರಿತು ರಾಜ್ಯ ಮಟ್ಟದ ತರಬೇತಿ ಕಾರ್ಯಾಗಾರ ಆಯೋಜಿಸಲಾಗಿದೆ.


ಅಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಅಂತರರಾಷ್ಟ್ರೀಯ ವ್ಯಕ್ತಿತ್ವ ವಿಕಸನ ತರಬೇತುದಾರ ಆರ್.ಎ. ಚೇತನ್‌ರಾಮ್, ಬಸವ ಮಾರ್ಗ ಫೌಂಡೇಷನ್ ಅಧ್ಯಕ್ಷ ಎಸ್. ಬಸವರಾಜು ಭಾಗವಹಿಸಲಿದ್ದಾರೆ. ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ವೇದಿಕೆ, ರಾಜ್ಯ ಘಟಕದ ಸಂಸ್ಥಾಪಕ ರಾಜ್ಯಾಧ್ಯಕ್ಷ ಹಾಗೂ ಗನವ ಫೌಂಡೇಷನ್ ಅಧ್ಯಕ್ಷ ಹೇಮಂತ್ ನಾಗರಾಜು ಅಧ್ಯಕ್ಷತೆ ವಹಿಸಲಿದ್ದಾರೆ. ಗ್ರಾಹಕರ ಹಕ್ಕುಗಳು ಮತ್ತು ಮಾಹಿತಿ ಹಕ್ಕು ತಜ್ಞ ವೈ.ಬಿ. ಮುರಳೀಧರನ್, ಮಾಹಿತಿ ಹಕ್ಕು ಅಧ್ಯಯನ ಕೇಂದ್ರದ ಸಂಸ್ಥಾಪಕ ವೀರೇಶ್ ಬೆಳ್ಳೂರು, ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ, ಡಿಸಿಪಿ ಸುಂದರ್‌ರಾಜ್ ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ. ಸಂಜೆ 4 ಗಂಟೆಗೆ ನಡೆಯುವ ಸಮಾರೋಪ ಸಮಾರಂಭ ದಲ್ಲಿ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ನಿವೃತ್ತ ಪ್ರಾಂಶುಪಾಲ ಪ್ರೊ. ಕಾಳಚನ್ನೇಗೌಡ ಉಪಸ್ಥಿತರಿರುವರು.

ಎಂ.ಸುರೇಶ್‌ಗೆ ಪಿಹೆಚ್.ಡಿ ಪದವಿ



ಮೈಸೂರು, ಜು.9– ಡಾ.ಎಂ.ಎಸ್.ಹೇಮಲತಾ ಅವರ ಮಾರ್ಗದರ್ಶನದಲ್ಲಿ ಎಂ.ಸುರೇಶ್ ಅವರು ಆಹಾರ ವಿಜ್ಞಾನ ಮತ್ತು ಪೌಷ್ಟಿಕತೆ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ಏರ್ ಶೋ ಸೂಕ್ತ ವ್ಯವಸ್ಥೆ ಮಾಡುವಂತೆ ಮುಖ್ಯ ಕಾರ್ಯದರ್ಶಿಗೆ ಮೈಸೂರು ಜಿಲ್ಲಾಧಿಕಾರಿ ಪತ್ರ



ಮೈಸೂರು, ಜು.9 (ಆರ್‌ಕೆ) – 2025ರ ಮೈಸೂರು ದಸರಾ ಮಹೋತ್ಸವದಲ್ಲಿ ವೈಮಾನಿಕ ಪ್ರದರ್ಶನ ಪ್ರಮುಖ ಆಕರ್ಷಣೆ.

ಸೆಪ್ಟೆಂಬರ್ 22 ರಿಂದ ಅಕ್ಟೋಬರ್ 2ರವರೆಗೆ ನಡೆಯಲಿರುವ ನಾಡಹಬ್ಬವನ್ನು ವಿಜೃಂಭಣೆಯಿಂದ ಅದ್ದೂರಿಯಾಗಿ ಆಚರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ಉನ್ನತ ಮಟ್ಟದ ಸಭೆಯಲ್ಲಿ ನಿರ್ಧರಿಸಲಾಗಿದೆ.

ಯುದ್ಧ ವಿಮಾನಗಳ ಮೂಲಕ ವೈಮಾನಿಕ ಪ್ರದರ್ಶನಕ್ಕೆ ಮೈಸೂರು ಜಿಲ್ಲಾಡಳಿತವು ಈಗಾಗಲೇ ಸಿದ್ಧತೆ ಮಾಡಿಕೊಳ್ಳುತ್ತಿದೆ.


ಶಾಲಿನಿ ರಜನೀಶ್


ಲಕ್ಷ್ಮೀಕಾಂತ ರೆಡ್ಡಿ

ಮೈಸೂರಿನ ಬನ್ನಿಮಂಟಪದ ಟಾರ್ಚ್‌ಲೈಟ್ ಪರೇಡ್ ಮೈದಾನದಲ್ಲಿ ನಡೆಯಲಿರುವ ವೈಮಾನಿಕ ಪ್ರದರ್ಶನದಲ್ಲಿ ಹೆಚ್ಚಿನ ಸಂಖ್ಯೆಯ ವಿಮಾನಗಳಿಂದ ವಿಭಿನ್ನ ಹಾಗೂ ವಿಶೇಷ ಪ್ರದರ್ಶನ ನಡೆಸುವ ಮೂಲಕ ಮೈಸೂರಿಗೆ ಪ್ರವಾಸಿಗರನ್ನು ಆಕರ್ಷಿಸಲು ಉದ್ದೇಶಿಸಿದ್ದು, ಈ ಕುರಿತು ಜಿಲ್ಲಾಧಿಕಾರಿ ಜಿ. ಲಕ್ಷ್ಮಿಕಾಂತ್ ರೆಡ್ಡಿ ಅವರು ರಾಜ್ಯದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದು ಕೇಂದ್ರ ರಕ್ಷಣಾ ಇಲಾಖೆಯಿಂದ ಏರ್‌ಶೋಗೆ ವ್ಯವಸ್ಥೆ ಮಾಡಿಸುವಂತೆ ಕೋರಿಕೊಂಡಿದ್ದಾರೆ.

ಈ ನಡುವೆ ದೆಹಲಿಯಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಸಹ ಬುಧವಾರ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನೂ ಭೇಟಿ ಮಾಡಿ ಮೈಸೂರು ದಸರಾ ಮಹೋತ್ಸವದ ವೇಳೆ ಏರ್ ಶೋ ಗೆ ಸಹಕರಿಸುವಂತೆ ಮನವಿ ಮಾಡಿದ್ದಾರೆ.

ಏರ್‌ಶೋ ಸಂಬಂಧ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಜಿಲ್ಲಾಧಿಕಾರಿ ಜಿ. ಲಕ್ಷ್ಮಿಕಾಂತ ರೆಡ್ಡಿ ಈಗಾಗಲೇ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದು ಪ್ರಸ್ತಾವನೆ ಸಲ್ಲಿಸಿದ್ದೇವೆ. ಕೇಂದ್ರ ರಕ್ಷಣಾ ಇಲಾಖೆ ಅಧಿಕಾರಿಗಳೊಂದಿಗೆ ಸಂಪರ್ಕ ಸಾಧಿಸಿ ಮುಖ್ಯ ಕಾರ್ಯದರ್ಶಿಗಳು ಅಗತ್ಯ ಕ್ರಮವಹಿಸಲಿ ದ್ದಾರೆ ಎಂದರು. ದಸರಾ ಸಿವಿಲ್ ಕಾಮಗಾರಿಗಳನ್ನು ಮುಂಚಿತವಾಗಿಯೇ ಕೈಗೊಳ್ಳಲು ಮೈಸೂರು ಮಹಾನಗರ ಪಾಲಿಕೆಯಿಂದ ಟೆಂಡರ್ ಪ್ರಕ್ರಿಯೆ ನಡೆಸುತ್ತಿದ್ದೇವೆ. ಕಡೇ ಘಳಿಗೆಯಲ್ಲಿ ತರಾತುರಿಯಲ್ಲಿ ಕೆಲಸ ಮಾಡುವುದನ್ನು ತಪ್ಪಿಸಲು ಈ ಬಾರಿ ಕ್ರಮವಹಿಸಲಾಗಿದೆ ಎಂದು ತಿಳಿಸಿದರು.

ಕೆಎಸ್‌ಎಫ್‌ನಿಂದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಿ.ಕಾಂ., ಬಿಸಿಎ ಕೋರ್ಸ್‌ಗಳಿಗೆ ಉಚಿತ ಪ್ರವೇಶ

ಮೈಸೂರು, ಜು. 9 – ಕೃಷಿಕ್ ಸರ್ವೋದಯ ಫೌಂಡೇಷನ್, ಮೈಸೂರು ಶಾಖೆ ವತಿಯಿಂದ ಬಡ ಮತ್ತು ಅರ್ಹ ವಿದ್ಯಾರ್ಥಿಗಳಿಗೆ ಕೆಎಸ್‌ಎಫ್ ಸ್ಕೂಲ್ ಆಫ್ ಬ್ಯುಸಿನೆಸ್ ಅಂಡ್ ಟೆಕ್ನಾಲಜಿ ಕಾಲೇಜಿನಲ್ಲಿ ಬಿ.ಕಾಂ., ಬಿಸಿಎ ಕೋರ್ಸ್‌ಗಳಿಗೆ ಉಚಿತ ಪ್ರವೇಶ ನೀಡುವ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಈ ಯೋಜನೆಯಡಿ 15 ರಿಂದ 20 ಮಂದಿಗೆ ಉಚಿತ ಪ್ರವೇಶ ದೊರೆಯಲಿದೆ. ಆಸಕ್ತರು ಕೆಎಸ್‌ಎಫ್ ಸ್ಕೂಲ್ ಆಫ್ ಬ್ಯುಸಿನೆಸ್ ಅಂಡ್ ಟೆಕ್ನಾಲಜಿ, ಸಿಎ–25, ಜನರಲ್ ತಿಮ್ಮಯ್ಯ ರಸ್ತೆ, ವಿಜಯನಗರ 2ನೇ ಹಂತ, ಮೊ. 82960 31570 ಇಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಜೆ. ಪರಶಿವಗೆ ಪಿಎಚ್.ಡಿ



ಮೈಸೂರು, ಜು.9– ಡಾ. ಎಸ್. ಸತೀಶ್ ಅವರ ಮಾರ್ಗದರ್ಶನದಲ್ಲಿ ಜೆ. ಪರಶಿವ ಅವರು ಸೂಕ್ಷ್ಮ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

'ಬಂಗಾರದ ಮನುಷ್ಯ'ದಂಥ ಅಮೂಲ್ಯ ಚಿತ್ರಗಳು ಸಾವಿರಾರು ಮಂದಿಯ ಬದುಕು ಕಟ್ಟಿಕೊಟ್ಟಿವೆ: ಜಿಟಿಡಿ

ಮೈಸೂರು, ಜು.9– ಡಾ.ರಾಜ್‌ಕುಮಾರ್ ಅಭಿನಯದ 'ಬಂಗಾರದ ಮನುಷ್ಯ' ದಂಥ ಅಮೂಲ್ಯ ಚಿತ್ರಗಳು ಸಾವಿರಾರು ಮಂದಿಗೆ ಬದುಕು ಕಟ್ಟಿಕೊಟ್ಟಿವೆ ಎಂದು ಮಾಜಿ ಸಚಿವರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಹೇಳಿದರು.

ಶ್ರೀ ಮಹರ್ಷಿ ವಾಲ್ಮೀಕಿ ಪ್ರಬುದ್ಧ ವೇದಿಕೆಯು ರಾಜರಾಜೇಶ್ವರಿ ನಗರದ ಪೈಲ್ವಾನ್ ಬಸವಯ್ಯ ಫಂಕ್ಷನ್ ಹಾಲ್‌ನಲ್ಲಿ ಮಂಗಳವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಕಡಕೊಳದ ರಂಗಪ್ಪ ಅವರ ಪುತ್ರ ಶ್ರೀನಿಧಿ ಅಭಿನಯದ ರಂಗು ರಂಗು ಆಲ್ಬಂ ಸಾಂಗ್ ಬಿಡುಗಡೆ ಮಾಡಿ, ನಾಯಕ ನಟನಾಗಿ ನಟಿಸುತ್ತಿರುವ ಪತ್ರಕರ್ತ ಹಾಗೂ ಮೆರಿಟ್ ಚಿತ್ರಗಳಿಗೆ ಶುಭ ಹಾರೈಸಿ ಅವರು ಮಾತನಾಡಿ, ಒಳ್ಳೆಯ ಕಥೆ, ಕಾದಂಬರಿಗಳನ್ನು ಸಿನಿಮಾ ಮಾಡಿದರೆ ಜನ ನೋಡಿ ಪ್ರಭಾವಿತರಾಗುತ್ತಾರೆ. ನಾನಂತೂ ಬಂಗಾರದ ಮನುಷ್ಯ ಚಿತ್ರವನ್ನು ನೋಡಿಯೇ ನನ್ನ ಬದುಕನ್ನು ರೂಪಿಸಿಕೊಂಡೆ ಎಂದು ಸ್ಮರಿಸಿದರು.


ಮೈಸೂರಿನ ರಾಜರಾಜೇಶ್ವರಿ ನಗರದ ಪೈಲ್ವಾನ್ ಬಸವಯ್ಯ ಫಂಕ್ಷನ್ ಹಾಲ್‌ನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕಡಕೊಳ ಶ್ರೀನಿಧಿ ಅಭಿನಯದ 'ರಂಗು ರಂಗು' ಆಲ್ಬಂ ಸಾಂಗ್ ಬಿಡುಗಡೆ, ಪತ್ರಕರ್ತ ಹಾಗೂ ಮೆರಿಟ್ ಚಿತ್ರಗಳಿಗೆ ಶುಭ ಹಾರೈಕೆ ಸಮಾರಂಭವನ್ನು ಶಾಸಕ ಜಿ.ಟಿ. ದೇವೇಗೌಡ ಉದ್ಘಾಟಿಸಿದರು. ಜೆ.ಎಂ. ಜವರನಾಯಕ, ಮಲ್ಲೇಶ್, ಅಂಶಿ ಪ್ರಸನ್ನಕುಮಾರ್, ನಿಂಗರಾಜು, ರಂಗಪ್ಪ ಇತರರು ಉಪಸ್ಥಿತರಿದ್ದರು.

ಚಿತ್ರರಂಗದಲ್ಲಿ ತಳ ಸಮುದಾಯದಿಂದ ಬಂದಿರುವ ಕಿಚ್ಚ ಸುದೀಪ್ ಗಟ್ಟಿಯಾಗಿ ನಿಂತು ಒಳ್ಳೆಯ ಹೆಸರು ಮಾಡಿದ್ದಾರೆ. ಅದೇ ರೀತಿ ಎತ್ತರದ ನಿಲುವು, ಸ್ಪುರದ್ರೂಪಿ ಆಗಿರುವ ಶ್ರೀನಿಧಿ ಕೂಡ ಧೈರ್ಯದಿಂದ, ಸವಾಲು ಸ್ವೀಕರಿಸಿ, ಗಟ್ಟಿಯಾಗಿ ಉಳಿಯುವಂತೆ ಅಭಿನಯಿಸಬೇಕು ಎಂದು ಅವರು ಆಶಿಸಿದರು. ಶಶಿಕುಮಾರ್ ಅವರು ಚಿತ್ರರಂಗದಲ್ಲಿ ಹೆಸರು ಮಾಡಿ ನಂತರ ರಾಜಕೀಯ ರಂಗಕ್ಕೆ ಬಂದರು. ಒಂದು ಹಿಟ್ ಸಿನಿಮಾ ನೀಡಿದರೆ ನಾಯಕ ನಟ ಮುಂದೆ ದೊಡ್ಡ ಹೀರೋ ಆಗಿ ಬೆಳೆಯುತ್ತಾನೆ ಎಂದು ಅವರು ಹೇಳಿದರು. ಸಂಗೀತ ನಿರ್ದೇಶಕ ಡಾ.ವಿ. ನಾಗೇಂದ್ರ ಪ್ರಸಾದ್ ಮಾತನಾಡಿ, ಮೈಸೂರು ಕಲಾವಿದರ ನಗರ, ಸಾಂಸ್ಕೃತಿಕ ತವರು. ಇಲ್ಲಿನ ಕಲಾವಿದರು ಬೆಂಗಳೂರಿನಲ್ಲಿ ಮೆರೆಯುವಂತೆ ಬೆಳೆಯಬೇಕು ಎಂದರು.

ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಇನ್ನೂ ಗಟ್ಟಿಯಾಗಿ ಬೆಳೆಯಬೇಕಾದ ಸಮುದಾಯದಿಂದ ಬಂದಿರುವ ಹೊಸ ನಾಯಕ ನಟ ಶ್ರೀನಿಧಿ ಅವರಿಗೆ ಜನ ಆಶೀರ್ವಾದ ಮಾಡಬೇಕು ಎಂದು ಅವರು ಮನವಿ ಮಾಡಿದರು.

ಪತ್ರಕರ್ತ ಚಿತ್ರದ ನಿರ್ಮಾಪಕ ಮೂರ್ತಿ ಕುಮಾರ್, ಮೆರಿಟ್ ಚಿತ್ರದ ನಿರ್ದೇಶಕ ವಿನೋದ್, ನಾಯಕ ನಟ ಶ್ರೀನಿಧಿ, ಗುಂಡ್ಲುಪೇಟೆಯ ಮಲ್ಲೇಶ್, ಬಿಜೆಪಿ ಮುಖಂಡ ಎಂ. ಅಪ್ಪಣ್ಣ, ಉದ್ಯಮಿ ನಿಂಗರಾಜು, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿದರು. ನಿರ್ದೇಶಕ ನಾಗೇಶ್, ಲೋಕೇಶ್ ಸೇರಿದಂತೆ ಹಲವಾರು ಮುಖಂಡರು ಇದ್ದರು. ಶ್ರೀ ಮಹರ್ಷಿ ವಾಲ್ಮೀಕಿ ಪ್ರಬುದ್ಧ ವೇದಿಕೆಯ ಅಧ್ಯಕ್ಷ ಜೆ.ಎಂ. ಜವರನಾಯಕ ಅಧ್ಯಕ್ಷತೆ ವಹಿಸಿದ್ದರು.

ಹುಣಸೂರು ಸರ್ಕಾರಿ ಮಹಿಳಾ ಪದವಿ ಕಾಲೇಜಿನ ಕನ್ನಡ ಸಹ ಪ್ರಾಧ್ಯಾಪಕ ಡಾ.ನಂಜುಂಡಸ್ವಾಮಿ ಹರದನಹಳ್ಳಿ ಪ್ರಾಸ್ತಾವಿಕ ಭಾಷಣ ಮಾಡಿದರು. ಶಾಲಿನಿ ಕಾರ್ಯಕ್ರಮ ನಿರೂಪಿಸಿದರು. ಅಮ್ಮ ರಾಮಚಂದ್ರ ಗೀತಗಾಯನ ನಡೆಸಿಕೊಟ್ಟರು.


ಮಾರಾಟವಾಗದೇ ಉಳಿದ ಬಿಯರ್ ನಾಶ



ಮೈಸೂರು, ಜು.9– ಮೈಸೂರು ನಗರ ಜಿಲ್ಲೆಯ ಅಬಕಾರಿ ಉಪ ಆಯುಕ್ತರ ಆದೇಶದ ಮೇರೆಗೆ ಮೈಸೂರು ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕ ಹೆಚ್.ಕೆ. ರಮೇಶ್ ನೇತೃತ್ವದಲ್ಲಿ ಕೆಎಸ್‌ಬಿಸಿಎಲ್ ಮೈಸೂರು–1 ಡಿಪೋ ಕೂರ್ಗಳ್ಳಿಯ ಅಬಕಾರಿ ಉಪ ಅಧೀಕ್ಷಕ ವಿಕ್ರಮ್ ಎಲ್.ಬಿ. ಮತ್ತು ಅಬಕಾರಿ ನಿರೀಕ್ಷಕರು ಹಾಗೂ ಡಿಪೋನ ವ್ಯವಸ್ಥಾಪಕರು ಮತ್ತು ಇಲಾಖಾ ಸಿಬ್ಬಂದಿಯೊಂದಿಗೆ ಮಾರಾಟವಾಗದೇ ಉಳಿದಿದ್ದ ಒಟ್ಟು 3185.070 ಲೀಟರ್ ಬಿಯರ್ ಹಾಗೂ ಕೆಎಸ್‌ಬಿಸಿಎಲ್ ಮೈಸೂರು–2 ಡಿಪೋ ಅಬಕಾರಿ ನಿರೀಕ್ಷಕರು ಹಾಗೂ ಡಿಪೋನ ವ್ಯವಸ್ಥಾಪಕರು ಮತ್ತು ಇಲಾಖಾ ಸಿಬ್ಬಂದಿಗಳೊಂದಿಗೆ ಮಾರಾಟವಾಗದೇ ಉಳಿದಿದ್ದ ಒಟ್ಟು 2103.040 ಲೀಟರ್ ಬಿಯರ್ ಒಟ್ಟು 5288.110 ಲೀಟರ್ ಅನ್ನು ನಾಶಪಡಿಸಲಾಯಿತು ಎಂದು ಅಬಕಾರಿ ಉಪ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಬ್ಬಾಳದಲ್ಲಿ ಸಿಐಟಿಬಿ, ಮುಡಾದಿಂದ ನಿರ್ಮಾಣವಾದ ಸಮುದಾಯ ಭವನ, ಕನ್‌ವೆನ್ಷನ್ ಹಾಲ್ ನಿರರ್ಥಕ!

ಒಂದು ಗೋಡೌನ್ ಆಗಿ ಬಳಕೆಯಾದರೆ, ಮತ್ತೊಂದು ಭೂತ ಬಂಗಲೆಯಾಗಿ ಪರಿವರ್ತನೆ


ಸರ್ಕಾರಿ ಗೋಡೌನ್ ಆಗಿರುವ ಸಿಐಟಿಬಿ ಸಮುದಾಯ ಭವನ.



ಭೂತ ಬಂಗಲೆಯಾಗಿರುವ ಮುಡಾ ನಿರ್ಮಾಣದ ಕನ್‌ವೆನ್ಷನ್ ಹಾಲ್.

ಮೈಸೂರು, ಜು.9–ಕಡು ಬಡವರು ಹಾಗೂ ಮಧ್ಯಮ ವರ್ಗದವರು ಹೆಚ್ಚಾಗಿ ವಾಸಿಸುತ್ತಿರುವ ಮೈಸೂರಿನ ಹೆಬ್ಬಾಳು ಬಡಾವಣೆಯಲ್ಲಿ ಅಲ್ಲಿನ ಜನರು ಶುಭ ಕಾರ್ಯಗಳನ್ನು ನಡೆಸಲು ಅನುಕೂಲವಾಗಲೆಂಬ ಸದುದ್ದೇಶದಿಂದ ಹಿಂದಿನ ಸಿಐಟಿಬಿ ಮತ್ತು ಮುಡಾ ನಿರ್ಮಾಣ ಮಾಡಿದ್ದ ಸಮುದಾಯ ಭವನ ಹಾಗೂ ಕನ್‌ವೆನ್ಷನ್ ಹಾಲ್ ಈಗ ನಿರರ್ಥಕವಾಗಿವೆ. ದಿನ ನಿತ್ಯ ಇಲ್ಲಿ ಹಾದು ಹೋಗುವ ಜನ ಸಂಬಂಧಿಸಿದ ಅಧಿಕಾರಿ ವರ್ಗಕ್ಕೆ ಹಿಡಿಶಾಪ ಹಾಕುವಂತಾಗಿದೆ ಎಂದು ಮಾಜಿ ಕಾರ್ಪೊರೇಟರ್ ಕೆ.ವಿ.ಶ್ರೀಧರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.


ಕೆ.ವಿ.ಶ್ರೀಧರ್

ಹಿಂದಿನ ಸಿಐಟಿಬಿ ನಿರ್ಮಿಸಿದ್ದ ಸಿಐಟಿಬಿ ಸಮುದಾಯ ಭವನ ಜಿಲ್ಲಾಡಳಿತದ ಗೋಡೌನ್ ಆಗಿ ಪರಿವರ್ತನೆಯಾಗಿದ್ದರೆ, 2017ರಲ್ಲಿ ಮುಡಾ ನಿರ್ಮಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್‌ವೆನ್ಷನ್ ಹಾಲ್ ಕಳೆದ ಒಂದು ವರ್ಷದಿಂದ ಮುಚ್ಚಿದ್ದು, ಭೂತ ಬಂಗಲೆಯಂತಾಗಿದೆ.

ಸಿಐಟಿಬಿ ಛತ್ರವನ್ನು ಕಡಿಮೆ ಬಾಡಿಗೆಗೆ ಮುಡಾದಿಂದ ನೀಡುತ್ತಿದ್ದ ಕಾರಣ ಅನೇಕ ಬಡವರು ಶುಭ ಕಾರ್ಯಗಳನ್ನು ಇಲ್ಲಿಯೇ ನೆಮ್ಮದಿಯಿಂದ ಮಾಡುತ್ತಿದ್ದರು. ಈ ಛತ್ರವು ಕಳೆದ ಮೂರು ದಶಕಗಳಿಂದ ಬಡವರಿಗೆ ಬಹಳ ಅನುಕೂಲಕರವಾಗಿತ್ತು. ಆದರೆ ಹಾಲಿ ಈ ಛತ್ರದಲ್ಲಿ ಇಎಂಐ ಯಂತ್ರಗಳ ಶೇಖರಣೆ ಮಾಡುವ ಮೂಲಕ ಅದನ್ನು ಜಿಲ್ಲಾಡಳಿತದ ಗೋಡೌನ್ ಆಗಿ ಪರಿವರ್ತಿಸಲಾಗಿದೆ. ಇದರಿಂದಾಗಿ ಬಡ ವರ್ಗದ ಜನ ತಮ್ಮ ಆರ್ಥಿಕ ಸ್ಥಿತಿಗೆ ತಕ್ಕಂತೆ ಶುಭ ಕಾರ್ಯ ನಡೆಸಲು ಛತ್ರ ಸಿಗದೆ ಪರದಾಡುವಂತಾಗಿದೆ. ಹಿಂದಿನ ಸಿಐಟಿಬಿ ಯಾವ ಉದ್ದೇಶಕ್ಕಾಗಿ ಈ ಛತ್ರವನ್ನು ನಿರ್ಮಿಸಿತ್ತೋ ಆ ಉದ್ದೇಶವೇ ತಲೆಕೆಳಕಾದಂತಾಗಿದೆ ಎಂದು ಶ್ರೀಧರ್ ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ಇನ್ನು 2017ರಲ್ಲಿ ಮುಡಾದಿಂದ ನಿರ್ಮಿಸಲಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್‌ವೆನ್ಷನ್ ಹಾಲ್ ಅನ್ನು ಕೂಡ ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ಅನುಕೂಲವಾಗಬೇಕೆಂಬ ಉದ್ದೇಶದಿಂದಲೇ ನಿರ್ಮಿಸಲಾಗಿತ್ತು.

ಆದರೆ ಮುಡಾ ಈ ಕನ್‌ವೆನ್ಷನ್ ಹಾಲ್ ಅನ್ನು ತಾನೇ ನಿರ್ವಹಣೆ ಮಾಡಿ ಬಡ ಹಾಗೂ ಮಧ್ಯಮ ವರ್ಗದವರಿಗೆ ಕೈಗೆಟಕುವ ಬಾಡಿಗೆಗೆ ನೀಡುವ ಬದಲು ಪ್ರಾರಂಭದಲ್ಲೇ ಅದನ್ನು ಮೈಸೂರಿನ ಸಿದ್ದರಾಜಪ್ಪ ಎಂಬಾತನಿಗೆ ವಾರ್ಷಿಕ 35 ಲಕ್ಷ ರೂ.ಗಳಿಗೆ ಗುತ್ತಿಗೆ ನೀಡುವ ಮೂಲಕ ಹೊಣೆಗೇಡಿತನವನ್ನು ಪ್ರದರ್ಶಿಸಿತ್ತು. ಆತ ಕನ್‌ವೆನ್ಷನ್ ಹಾಲ್‌ಗೆ ದಿನವೊಂದಕ್ಕೆ 1.35 ಲಕ್ಷ ರೂ. ಬಾಡಿಗೆ ವಿಧಿಸಿದ್ದ ಪರಿಣಾಮ ಅದು ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ಕೈಗೆಟಕದಂತಾಯಿತು. ಆದರೆ ಸ್ವಲ್ಪ ಸ್ಥಿತಿವಂತರು ಈ ಕನ್‌ವೆನ್ಷನ್ ಹಾಲ್‌ನಲ್ಲಿ ಶುಭ ಕಾರ್ಯಗಳನ್ನು ನಡೆಸುತ್ತಿದ್ದರು.

ಗುತ್ತಿಗೆ ಪಡೆದಿದ್ದ ಸಿದ್ದರಾಜಪ್ಪ, ಮುಡಾಗೆ 1.75 ಕೋಟಿ ಗುತ್ತಿಗೆ ಹಣ ಉಳಿಸಿಕೊಂಡಿದ್ದರಿಂದ ಕಳೆದ ವರ್ಷ ಮುಡಾ ಅಧಿಕಾರಿಗಳು ಈ ಕನ್‌ವೆನ್ಷನ್ ಹಾಲ್ ಅನ್ನು ತಮ್ಮ ವಶಕ್ಕೆ ಪಡೆದುಕೊಂಡರು. ಆತನಿಂದ 1 ಕೋಟಿ ರೂ. ಗುತ್ತಿಗೆ ಹಣವನ್ನು ವಸೂಲಿ ಮಾಡಿದ್ದರು.

ಆನಂತರ ಇದನ್ನು ಮುಡಾದಿಂದಲೂ ನಿರ್ವಹಣೆ ಮಾಡದೇ, ಬೇರೆಯವರಿಗೂ ಟೆಂಡರ್ ನೀಡದೇ, ಟೆಂಡರ್ ಪ್ರಕ್ರಿಯೆ ನಡೆಸುತ್ತಿದ್ದೇವೆ ಎಂಬ ಸಬೂಬು ಹೇಳಿಕೊಂಡು ಕಾಲಹರಣ ಮಾಡುತ್ತಿರುವ ಪರಿಣಾಮ ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್‌ವೆನ್ಷನ್ ಹಾಲ್ ಭೂತ ಬಂಗಲೆಯಂತಾಗಿದೆ ಎಂದು ವಿಷಾದ ವ್ಯಕ್ತಪಡಿಸಿದ್ದಾರೆ.

ಸಾರ್ವಜನಿಕರಿಗೆ ಸೌಲಭ್ಯ ಕಲ್ಪಿಸುವಲ್ಲಿ ಸರ್ಕಾರವಾಗಲೀ, ಪ್ರಾಧಿಕಾರಗಳೇ ಆಗಲೀ ಲಾಭ–ನಷ್ಟದ ಲೆಕ್ಕಾಚಾರ ಹಾಕಬಾರದು. ಜಿಲ್ಲಾಡಳಿತವು ಸಿಐಟಿಬಿ ಛತ್ರದಲ್ಲಿರುವ ಇವಿಎಂ ಯಂತ್ರಗಳನ್ನು ತೆರವುಗೊಳಿಸಿ ಅದನ್ನು ದುರಸ್ತಿ ಮಾಡಿ, ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಬೇಕು. ಅದೇ ರೀತಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್‌ವೆನ್ಷನ್ ಹಾಲ್ ಅನ್ನು ಖಾಸಗಿಯವರಿಗೆ ಗುತ್ತಿಗೆ ನೀಡದೇ ಎಂಡಿಎ ನೇರವಾಗಿ ನಿರ್ವಹಣೆ ಮಾಡಬೇಕು. ಸದುದ್ದೇಶದಿಂದ ನಿರ್ಮಿಸಲಾದ ಇವೆರಡೂ ಭವನಗಳನ್ನು ಮೂಲ ಉದ್ದೇಶದಂತೆ ಅತೀ ಕಡಿಮೆ ಬಾಡಿಗೆಗೆ ಸಾರ್ವಜನಿಕರಿಗೆ ಮುಕ್ತಗೊಳಿಸಬೇಕು ಎಂದು ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್ ಆಗ್ರಹಿಸಿದ್ದಾರೆ.

> ‘ ಸಿಐಟಿಬಿ ಛತ್ರವನ್ನು ಇವಿಎಂ ಯಂತ್ರಗಳನ್ನಿಡಲು ಜಿಲ್ಲಾಡಳಿತ ಬಳಸಿಕೊಂಡಿದೆ. ಈ ಛತ್ರಕ್ಕೆ ಪೊಲೀಸ್ ರಕ್ಷಣೆಯನ್ನು ನೀಡಲಾಗಿದೆ. ಛತ್ರವನ್ನು ತೆರವುಗೊಳಿಸುವಂತೆ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಪತ್ರಗಳನ್ನು ಬರೆಯಲಾಗಿದೆ. ಆದರೆ ಮುಂಬರಲಿರುವ ನಗರಪಾಲಿಕೆ ಚುನಾವಣೆಗೆ ಈ ಇವಿಎಂಗಳ ಅವಶ್ಯಕತೆ ಇರುವುದರಿಂದ ಅದನ್ನು ತೆರವುಗೊಳಿಸಿಲ್ಲ ಎಂದೆನಿಸುತ್ತದೆ. ಇನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್‌ವೆನ್ಷನ್ ಹಾಲ್ ಅನ್ನು ವಾರ್ಷಿಕ 40 ಲಕ್ಷ ರೂ.ಗಳಿಗೆ ಬೆಂಗಳೂರಿನ ಅನು ಎಂಬುವರಿಗೆ ಗುತ್ತಿಗೆಗೆ ನೀಡಲಾಗಿದೆ. ಇನ್ನು 15–20 ದಿನಗಳಲ್ಲಿ ಈ ಕನ್‌ವೆನ್ಷನ್ ಹಾಲ್ ಸಾರ್ವಜನಿಕರ ಬಳಕೆಗೆ ಲಭ್ಯವಾಗಲಿದೆ.
> –ಸಂಪತ್ ಕುಮಾರ್, ಎಇ, ಎಂಡಿಎ

ನಿಗಮ–ಮಂಡಳಿಯ 1200 ನಿರ್ದೇಶಕರ ಸ್ಥಾನಕ್ಕೆ ನೇಮಕಾತಿ ಪಟ್ಟಿಗೆ ವರಿಷ್ಠರ ಅನುಮತಿ ಪಡೆಯುವ ಯತ್ನ

ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಭೇಟಿಗೆ ಕಾದಿರುವ ಸಿಎಂ, ಡಿಸಿಎಂ

ಬೆಂಗಳೂರು, ಜು.9(ಕೆಎಂಶಿ)–ವಿವಿಧ ನಿಗಮ–ಮಂಡಳಿಗಳಲ್ಲಿ ಖಾಲಿ ಇರುವ 1200 ನಿರ್ದೇಶಕರ ನೇಮಕಾತಿ ಪಟ್ಟಿಗೆ ಅನುಮತಿ ಪಡೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಭೇಟಿ ಮಾಡಲಿದ್ದಾರೆ.



ದೆಹಲಿ ಪ್ರವಾಸದಲ್ಲಿರುವ ಉಭಯ ನಾಯಕರು, ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಸಚಿವರನ್ನು ಭೇಟಿಯಾಗಿ, ಈಗ ರಾಹುಲ್ ಭೇಟಿಗಾಗಿ ಕಾದಿದ್ದಾರೆ. ಇದೇ ವೇಳೆ ವಿಧಾನಪರಿಷತ್ತಿನ ತೆರವಾದ ನಾಲ್ಕು ಸ್ಥಾನಗಳ ಭರ್ತಿ ಹಾಗೂ ನಿಗಮಗಳ ಅಧ್ಯಕ್ಷರಾಗಿರುವ ಕೆಪಿಸಿಸಿ ಪದಾಧಿಕಾರಿಗಳನ್ನು ಕೈಬಿಟ್ಟು ಹೊಸಬರ ನೇಮಕ ಮಾಡಲಾಗುತ್ತಿದೆ.

ಉಳಿದಂತೆ ಪಕ್ಷದ ರಾಜ್ಯ ರಾಜಕೀಯ ವಿದ್ಯಮಾನಗಳ ಕುರಿತು ರಾಹುಲ್ ಸಮ್ಮುಖದಲ್ಲೇ ಚರ್ಚೆ ನಡೆಯಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

